ನಮ್ಮ ಮಾನಸ

ಸಂಪುಟ : 4 ಫೆಬ್ರವರಿ 2011 ಸಂಚಿಕೆ : 10



ಮಲೇರಿಯಾ ನಿಯಂತ್ರಣದಲ್ಲಿ ಸಮುದಾಯದ ಸಹಭಾಗಿತ್ವ

ಮಲೇರಿಯ ರೋಗವು ಹರಡದಂತೆ
ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ

- ಯಾವುದೇ ಜ್ವರ ಮಲೇರಿಯ ಇರಬಹುದು, ಆದಷ್ಟು ಶೀಘ್ರವಾಗಿ ರಕ್ತ ಪರೀಕ್ಷೆ ಮಾಡಿಸಿ ಕ್ಲೋರೋಕ್ವಿನ್ ಗುಳಿಗೆಗಳನ್ನು ತೆಗೆದುಕೊಳ್ಳಿ.
- ಮಲೇರಿಯ ಎಂದು ರಕ್ತ ಪರೀಕ್ಷೆಯಲ್ಲಿ ಖಚಿತಪಟ್ಟಲ್ಲಿ ತಪ್ಪದೇ ತೀವ್ರಚಿಕಿತ್ಸೆ ಪಡೆಯಿರಿ. ಈ ಚಿಕಿತ್ಸೆಯ ವಿವರಗಳು ಹಾಗೂ ಗುಳಿಗೆಗಳು ಆರೋಗ್ಯ ಕಾರ್ಯಕರ್ತರಲ್ಲಿ ಹಾಗೂ ಎಲ್ಲಾ ಸರ್ಕಾರಿ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ದೊರಕುತ್ತವೆ.
- ಶಿಶುಗಳು ಮತ್ತು ಗರ್ಭಿಣಿಯರಿಗೆ ಮಲೇರಿಯ ರೋಗವು ಆತಂಕಕಾರಿಯಾಗಿದ್ದು, ಅಂತಹವರು ಯಾವುದೇ ಜ್ವರವಿರಲಿ, ತಡಮಾಡದೇ ವೈದ್ಯರ ಸಲಹೆ ಪಡೆಯುವುದು.
- ನೀರು ಶೇಖರಣಾ ತೊಟ್ಟಿಗಳನ್ನು ಭದ್ರವಾದ ಮುಚ್ಚಳದಿಂದ ಯಾವಾಗಲೂ ಮುಚ್ಚಿರಬೇಕು. ವಾರಕ್ಕೊಮ್ಮೆ ನೀರನ್ನು ಸಂಪೂರ್ಣವಾಗಿ ಖಾಲಿ ಮಾಡಿ, ಒಣಗಿಸಿ ಮತ್ತೆ ಭರ್ತಿ ಮಾಡಿಕೊಂಡಲ್ಲಿ ಇಂತಹ ನೀರು ಶೇಖರಣೆಗಳಲ್ಲಿ ರೋಗವಾಹಕ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಬಹುದು.
- ಆರೋಗ್ಯ ಇಲಾಖೆಯು ಕೈಗೊಳ್ಳುವ ಕೀಟನಾಶಕ ಸಿಂಪಡಣಾ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಿ.
- ಸದಾ ನೀರಿರುವ ಕೆರೆ, ಕುಂಟೆ, ಬಾವಿ, ತೋಟದ ಕಾರಂಜಿಗಳು ಮುಂತಾದ ತಾಣಗಳಲ್ಲಿ ಸೊಳ್ಳೆಯ ಮರಿಗಳನ್ನು ತಿನ್ನುವ ಗ್ಯಾಂಬೂಸಿಯ ಮತ್ತು ಗಪ್ಪಿ ಎಂಬ ಸಣ್ಣ ಸಣ್ಣ ಮೀನುಗಳನ್ನು ಬಿಡುವುದು.
- ಮನೆಯ ಕಿಟಕಿ ಬಾಗಿಲುಗಳಿಗೆ ಕೀಟ ತಡೆಗಟ್ಟುವ ಜಾಲರಿಗಳನ್ನು ಅಳವಡಿಸಿಕೊಳ್ಳಿ.
- ಮಲಗುವಾಗ ತಪ್ಪದೇ ಸೊಳ್ಳೆ ಪರದೆಯನ್ನು ಉಪಯೋಗಿಸಿ.
- ಸಂಜೆವೇಳೆ ಬೇವಿನ ಹೊಗೆ ಹಾಕುವುದು, ಸಾಮ್ರಾಣಿ ಧೂಪ ಹಾಕುವುದು ಹಾಗೂ ರಾತ್ರಿವೇಳೆ ಇತರ ಸೊಳ್ಳೆನಿರೋಧಕ ವಿಧಾನಗಳನ್ನು ಬಳಸಿ ಸೊಳ್ಳೆ ಕಡಿತದಿಂದ ದೂರವಿರಿ.
- ಹರಿಯದೇ ನಿಂತ ನೀರು ಸೊಳ್ಳೆ ಉತ್ಪತ್ತಿಯ ತವರು. ಮನೆಯ ಸುತ್ತ ಮುತ್ತ ನೀರು ನಿಲ್ಲದಂತೆ ಎಚ್ಚರವಹಿಸಿ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಿರಿ

ಶೀಘ್ರ ಪತ್ತೆ – ತ್ವರಿತ ಚಿಕಿತ್ಸೆಯಿಂದ
ಸಾವು ನೋವುಗಳನ್ನು ತಡೆಗಟ್ಟಲು ಖಂಡಿತ ಸಾಧ್ಯ

ಕರ್ನಾಟಕ ವಾರ್ತೆ

ನಮ್ಮ ಮಾನಸ

ಫೆಬ್ರವರಿ 2011

ಸಂಪುಟ : 4 ಸಂಚಿಕೆ : 10

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
✆ : 26757159

ಸಂಪಾದಕ ಮಂಡಳಿ
ಚಂಪಾವತಿ ಹೆಚ್.ಎಸ್., ಸವಿತಾ ಎ.
ವೆಂ. ವನಜಾ, ಗೀತಾ, ಎಚ್.ಎಸ್. ಪುಷ್ಪಾ.

ಸಲಹೆ – ಸಹಕಾರ
ಇಳಾ ವಿಜಯಾ, ಸುಮಿತ್ರಾಬಾಯಿ ಬಿ.ಎಸ್.

ಮಾನಸ ಬಳಗ
ತಸ್ನೀಂ ತಾಜ್, ವೇದವಲ್ಲಿ ಜಿ.ವಿ.
ವತ್ಸಲ ವೈ.ಎನ್., ಶ್ಯಾಮಲ, ತಾಜುಮಾ

ಚಂದಾ ವಿವರ

ಬಿಡಿಪ್ರತಿ	8–00 ರೂ.
ವಾರ್ಷಿಕ ಚಂದಾ (ವಿಶೇಷ ಸಂಚಿಕೆಯೊಂದಿಗೆ)	100–00 ರೂ.
ಸಂಸ್ಥೆಗಳಿಗೆ	150–00 ರೂ.

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ

ವೆಂ. ವನಜ

2329, 12ನೇ ಮೈನ್, 2ನೇ ಹಂತ,
ವಿಜಯನಗರ, ಮೈಸೂರು – 570 017

ಪ್ರಾರಂಭ : 'ಮಾನುಷಿ' (1985ರಲ್ಲಿ), ಅನಂತರ 'ಮಾನಸ', ಈಗ 'ನಮ್ಮ ಮಾನಸ'



ಸಂಪಾದಕೀಯ

ದೂರುವವರಿಗೆ ದೂರಾಲೋಚನೆ, ಮರುಚಿಂತನೆಯ ಅಗತ್ಯವಿದೆ

ಬಹುದಿನಗಳ ಶ್ರಮ, ಹೋರಾಟಗಳ ಫಲವಾಗಿ ಮಹಿಳಾ ಸಬಲೀಕರಣ ಪ್ರಕ್ರಿಯೆ ಜಾರಿಗೆ ಬರುತ್ತಿದೆ. ಮಹಿಳಾ ಮೀಸಲಾತಿ ಹಿನ್ನೆಲೆಯಲ್ಲಿ ಅವರಿಗೆ ರಾಜಕಾರಣದಲ್ಲೂ ಭಾಗವಹಿಕೆ ಸಾಧ್ಯವಾಗುತ್ತಿದೆ. ಅಧಿಕಾರದ ಚುಕ್ಕಾಣಿ ಹಿಡಿದ ಮಹಿಳೆ ಎಲ್ಲ ರೀತಿಯಲ್ಲೂ ಇನ್ನೂ ಸಿದ್ಧವಾಗಿರಲಾರಳು. ಮುಖ್ಯವಾಗಿ ಶತಮಾನಗಳಿಂದ ದಮನಕ್ಕೊಳಗಾದವಳು, ಅವಳ ಮೇಲೆ ಹೇರಲ್ಪಟ್ಟ ಪುರುಷಾಧಿಕಾರ, ಅವರ ಪರವಾದ ಮೌಲ್ಯಗಳನ್ನು ನಂಬಿ, ನಡೆದುಕೊಂಡು ಬಂದವಳು. ಅಧಿಕಾರದ ಚಲಾವಣೆಯಲ್ಲಿ ಅವಳಿಗೇ ತಿಳಿಯದೆ ಪುರುಷ ಮೌಲ್ಯಗಳನ್ನೇ ಪ್ರತಿಪಾದಿಸುವ ಅಥವಾ ಮತ್ತೆ ಅವರ ಅಧೀನಳಾಗೇ ಕೆಲಸ ಮಾಡುವ ಸಂಭವ ಅಧಿಕ. ಅಂಥ ಉದಾಹರಣೆಗಳನ್ನು ಮುಂದಿಟ್ಟು, ಅದನ್ನೇ ಸಾರ್ವತ್ರಿಕಗೊಳಿಸಿ ಆಕೆಯ ಸಾಮರ್ಥ್ಯವನ್ನು ಪ್ರಶ್ನಿಸಿ, ಅವಳ ಸ್ಥೈರ್ಯವನ್ನೇ ಅಸ್ಥಿರಗೊಳಿಸಲೆತ್ನಿಸುವ ಟೀಕಾಕಾರರು ಅವಳ ಸಾಮರ್ಥ್ಯದ ಇನ್ನಿತರ ಮಗ್ಗುಲುಗಳನ್ನೂ ಗಮನಿಸಬೇಕಿದೆ. ಗಂಡು–ಹೆಣ್ಣಿನ ಸಮಾನತೆಯಲ್ಲಿ ನಂಬಿಕೆ ಇರುವವರು ಮರುಚಿಂತನೆ ಮಾಡುವ ಅಗತ್ಯವಿದೆ.

ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯನ್ನು ಹಿಂದೆಂದಿಗಿಂತಲೂ ಹೆಚ್ಚು ವಿಮರ್ಶಾತ್ಮಕವಾಗಿ ನೋಡುವ ಅಗತ್ಯ ಇದೆ. ಪಂಚಾಯಿತಿ ಚುನಾವಣೆಗಳಲ್ಲಿ ಆಯ್ಕೆಯಾಗಿ ಬಂದ ಮಹಿಳೆಯರು ಕ್ರಿಯಾತ್ಮಕವಾಗಿ ತೊಡಗಿಸಿಕೊಂಡು ಒಂದು ರಚನಾತ್ಮಕ ವ್ಯವಸ್ಥೆಯನ್ನು ಸೃಷ್ಟಿಸಬಲ್ಲರೇ ಎಂಬುದನ್ನೂ ಕಾದು ನೋಡಬೇಕಾಗಿದೆ. 50% ಮಹಿಳಾ ಮೀಸಲಾತಿಯ ಹಿನ್ನೆಲೆಯಲ್ಲಿ ತಾಲ್ಲೂಕು ಹಾಗೂ ಜಿಲ್ಲಾಮಟ್ಟದ ಪಂಚಾಯತಿ ಚುನಾವಣೆಯಲ್ಲಿ ಇಂದು ಅರ್ಧಕ್ಕಿಂತಲೂ ಹೆಚ್ಚು ಮಹಿಳಾ ಸದಸ್ಯರು ಆಯ್ಕೆಯಾಗಿದ್ದಾರೆ.

ಕರ್ನಾಟಕ ರಾಜ್ಯ ಪಂಚಾಯತ್ ಬಿಲ್ 2010ನ್ನು ಕಳೆದ ರಾಜ್ಯದ ಶಾಸಕಾಂಗ ಸಭೆಯಲ್ಲಿ ಅಂಗೀಕರಿಸಿ 50% ಮೀಸಲಾತಿಯನ್ನು ಮಹಿಳೆಯರಿಗೆ ನೀಡಲು ನಿರ್ಧರಿಸಿತು. ಕಳೆದ ಚುನಾವಣೆಯಲ್ಲಿ 33% ಮೀಸಲಾತಿಯನ್ನು ಮಾತ್ರ ನೀಡಲಾಗಿತ್ತು. ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧಿತ್ವವನ್ನು ಹೆಚ್ಚಿಸುವ ಈ ಮೀಸಲಾತಿಗೆ ಚಾರಿತ್ರಿಕ ಮಹತ್ವವಿದೆ. 1957ರಲ್ಲಿ ಬಲವಂತ್‌ರಾಯ್ ಮೆಹ್ತಾ ಸಮಿತಿಯೊಂದನ್ನು ಭಾರತ ಸರ್ಕಾರ ನೇಮಿಸಿತ್ತು. ಪ್ರಜಾಪ್ರಭುತ್ವದ ನೆಲೆಯಲ್ಲಿ ಸಮುದಾಯದ ಪ್ರಗತಿಯನ್ನು ಸಮುದಾಯವನ್ನು ಒಳಗೊಳ್ಳುವುದರಿಂದಲೇ ಮಾಡಬೇಕೆಂಬುದನ್ನು ಕುರಿತು ವರದಿ ಮಾಡಲು ಈ ಸಮಿತಿಯನ್ನು ನೇಮಿಸಲಾಗಿತ್ತು. ಈ ವರದಿಯು ಪಂಚಾಯಿತಿಗಳಲ್ಲಿ ಗ್ರಾಮೀಣ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವತ್ತ ಕ್ರಮ ಕೈಗೊಳ್ಳಬೇಕೆಂದು ಮುಖ್ಯವಾದ ಸಲಹೆಯನ್ನು ನೀಡಿತ್ತು. 1977ರಲ್ಲಿ ಅಶೋಕ್ ಮೆಹ್ತಾರವರ ಸಮಿತಿಯು ಪಂಚಾಯಿತಿಗಳಲ್ಲಿ ಮಹಿಳೆಯರ ಕ್ರಿಯಾಶೀಲ ಭಾಗವಹಿಸುವಿಕೆ ಅಷ್ಟೇ ಅಲ್ಲ, ನಿರ್ಧಾರ ತೆಗೆದುಕೊಳ್ಳುವ ಮಟ್ಟದಲ್ಲಿ ಅವರ ಪಾತ್ರಗಳನ್ನು ಗಟ್ಟಿಗೊಳಿಸುವ ಅಗತ್ಯವಿದೆಯೆಂದು ಮಹಿಳೆಯರ ಪಾತ್ರವನ್ನು ಎತ್ತಿ ಹಿಡಿಯಿತು. ಭಾರತದಲ್ಲಿ ಪಂಚಾಯತ್ ಆಡಳಿತ ವ್ಯವಸ್ಥೆಯಿಂದ ರಾಜಕೀಯ ಅಧಿಕಾರದ ವಿಕೇಂದ್ರೀಕರಣವನ್ನು ಎತ್ತಿ ಹಿಡಿಯಲಾಗಿದ್ದು, ಇದಕ್ಕೆ ಸಮ್ಮತಿಯನ್ನು ಭಾರತದ ಸಂವಿಧಾನದ 40ನೇ ಪರಿಚ್ಛೇದದಲ್ಲಿ ನೀಡಲಾಗಿದೆ.

ಮಹಿಳೆಯರ ಭಾಗವಹಿಸುವಿಕೆಯ ಅಗತ್ಯ ಹಾಗೂ ಅದರ ಮಹತ್ವವು ಇನ್ನೂ ಹೆಚ್ಚು ಸ್ಪಷ್ಟ ರೂಪ ಪಡೆದುಕೊಂಡಿದ್ದು 1993ರಲ್ಲಿ. ಸಂವಿಧಾನದ 73 ಹಾಗೂ 74ನೇ ಪರಿಚ್ಛೇದದ ತಿದ್ದುಪಡಿಯಿಂದಾಗಿ ಎರಡು ಮಹತ್ವದ ಬದಲಾವಣೆಗಳಾದವು. ಅಲ್ಲಿಯವರೆಗಿದ್ದ ಮಂಡಲ್ ಪಂಚಾಯತ್ ವ್ಯವಸ್ಥೆಯನ್ನು ತೆಗೆದು ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟ ಎಂದು ಮೂರು ವಿಭಾಗಗಳ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ತಿದ್ದುಪಡಿಯ ಮುಖ್ಯ ಉದ್ದೇಶ ಮಹಿಳೆಯರಿಗೆ 33% ಮೀಸಲಾತಿಯನ್ನು ನೀಡುವುದಾಗಿತ್ತು. ನಿರ್ಧಾರದ ಹಂತದ ಸ್ಥಾನಗಳಲ್ಲಿ ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸಬೇಕು ಎನ್ನುವುದರ ಜೊತೆಗೆ ಮಹಿಳೆಯರ ಸಬಲೀಕರಣದ ಮೇಲೂ ಒತ್ತು ನೀಡಲಾಯಿತು. ಈ ರಾಜಕೀಯ ಪ್ರಕ್ರಿಯೆಯಿಂದಾಗಿ ಪಂಚಾಯತ್ ಚುನಾವಣೆಯಲ್ಲಿ ಬಹಳಷ್ಟು ಮಹಿಳೆಯರ ಭಾಗವಹಿಸುವಿಕೆ ಅನಿವಾರ್ಯವಾಗಿತ್ತು. ರಾಜಕೀಯ ಪಕ್ಷಗಳು 33% ವಿಧೇಯಕ ತಲೆಬಾಗಬೇಕಾದುದರಿಂದ ಅನೇಕ ವರ್ಗದ ಮಹಿಳೆಯರು ಚುನಾವಣೆಯಲ್ಲಿ ಗೆದ್ದು ಬಂದರು. ಸ್ವಲ್ಪ ಮಟ್ಟಿನ ರಾಜಕೀಯ ಪ್ರಜ್ಞೆ ಕೂಡಾ ಮಹಿಳೆಯರಲ್ಲಿ ಬೆಳೆಯತೊಡಗಿತು. ಮನೆ, ಕುಟುಂಬದಿಂದ ಆಚೆ ಹೆಜ್ಜೆ ಇಡುವಷ್ಟರ ಮಟ್ಟಿಗೆ, ತಮ್ಮದಲ್ಲವೆಂದುಕೊಂಡ ಪ್ರಪಂಚದಲ್ಲಿ ಅಪರಿಚಿತರನ್ನು ಎದುರಿಸುವಷ್ಟರ ಮಟ್ಟಿಗೆ, ಜೊತೆಗೆ ಗ್ರಾಮೀಣ, ತಾಲ್ಲೂಕು, ಜಿಲ್ಲಾಮಟ್ಟದ ರಾಜಕೀಯದಲ್ಲಿ ತಮ್ಮನ್ನು ಗುರುತಿಸಿಕೊಳ್ಳುವ ಮಟ್ಟಕ್ಕೆ ಚುನಾಯಿತ ಮಹಿಳೆಯರ ಭಾಗವಹಿಸುವಿಕೆ ಮಹತ್ವದ್ದಾಗಿತ್ತು.

73, 74ರ ತಿದ್ದುಪಡಿಯಿಂದ ಹೆಚ್ಚಿದ ಮಹಿಳಾ ಅಭ್ಯರ್ಥಿಗಳ ಬಗ್ಗೆ ಅಷ್ಟೇ ಕಟುವಾದ ಟೀಕೆಗಳೂ ಇವೆ. ಇವರು 'ಡಮ್ಮಿ' ನಾಯಕಿಯರು, ಅವರ ಗಂಡಂದಿರಿಗೆ 'ಪ್ರಾಕ್ಸಿ' ಆಗಿರುವಂಥವರು, ಹೆಂಗಸರ ಮೂಲಕ ಗಂಡಸರು ಅಧಿಕಾರದ ಚುಕ್ಕಾಣಿ ಹಿಡಿಯುತ್ತಾರೆ, ರಾಜಕೀಯ ನಾಯಕರ ಪತ್ನಿ, ಮಗಳು, ಸೊಸೆ–ಹೀಗೆ ಕುಟುಂಬದವರೇ ಮೀಸಲಾತಿಯ ಸವಲತ್ತು ಪಡೆಯುತ್ತಾರೆ ಎಂಬಂತಹ ಟೀಕೆಗಳಿವೆ. ಜೊತೆಗೆ ಅವಿದ್ಯಾವಂತ ಗೃಹಿಣಿಯರು, ಬಡತನದಲ್ಲಿರುವವರು, ಸಂಪನ್ಮೂಲದ ಕೊರತೆ ಇರುವವರು,

ಒಳಗಿನ ಪುಟಗಳಲ್ಲಿ....

ಈ ಸಂಚಿಕೆಯ ಪ್ರಾಯೋಜಕರು:

ಶ್ರೀಮತಿ ಗಿರಿಜಾ ಶಾಸ್ತ್ರಿ
ಶ್ರೀಮತಿ ಪ್ರೀತಿ ಶುಭಚಂದ್ರ

ದುರ್ಬಲ ಜಾತಿಯ ಮಹಿಳೆಯರು ಅವರ ಸಾಮಾಜಿಕ, ಸಾಂಸ್ಕೃತಿಕ ರಚನೆಗಳಿಂದಾಗಿ ಕ್ರಿಯಾಶೀಲ ಪಾತ್ರ ನಿರ್ವಹಿಸಬಲ್ಲರೇ ಎಂಬ ಪ್ರಶ್ನೆಯೂ ಇದೆ. ರಾಜಕೀಯದಲ್ಲಿ ಅನನುಭವ, ಚುನಾವಣೆಯಲ್ಲಿ ಹಣ, ಭ್ರಷ್ಟಾಚಾರ, ಶಕ್ತಿಯ ಪ್ರದರ್ಶನಗಳಿಂದಾಗಿ ಮಹಿಳೆಯರು ಕುಟುಂಬದ ಗಂಡಸರ ಮೇಲೆ ಅಥವಾ ರಾಜಕೀಯ ನಾಯಕರ ಮೇಲೆ ಅವಲಂಬಿತರಾಗುವ ಸನ್ನಿವೇಶದಲ್ಲಿ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುತ್ತಾರೆಯೇ ಎಂಬ ಅನುಮಾನಗಳಿವೆ. ಚುನಾಯಿತ ಮಹಿಳಾ ಪ್ರತಿನಿಧಿಗಳು 'ರಬ್ಬರ್ ಸ್ಟ್ಯಾಂಪ್' ಮಾತ್ರ ಎನ್ನುವ ಕಟುವಾದ ಟೀಕೆಯೂ ಇದೆ. ಮೇಲ್ವರ್ಗ, ಉನ್ನತ ಜಾತಿಯ ಮಹಿಳೆಯರಾಗಲೀ, ಪರಿಶಿಷ್ಟವರ್ಗದ ಮಹಿಳೆಯರಾಗಲೀ ಪಿತೃಪ್ರಧಾನ ಮೌಲ್ಯಗಳನ್ನಾಗಲೀ ಅಥವಾ ಅಧಿಕಾರವನ್ನು ನಿರ್ವಚಿಸುವುದಾಗಲೀ ಮಾಡುವುದಿಲ್ಲ. ಬದಲಾಗಿ ರಾಜಕೀಯ ಹುನ್ನಾರಗಳಲ್ಲಿ ಭಾಗಿಯಾಗಲು, ಸ್ವಂತ ನಿರ್ಧಾರ ತೆಗೆದುಕೊಳ್ಳದಿರಲು, ಜಾತಿ, ವರ್ಗದ ಜೊತೆ ಸಮೀಕರಿಸಿಕೊಳ್ಳಲು ಇವರನ್ನು ಪ್ರೋತ್ಸಾಹಿಸಲಾಗುತ್ತದೆ. 1993ರ ಮುಂಚೆ ಉನ್ನತಜಾತಿ, ವರ್ಗದ ಮಹಿಳೆಯರು ಮಾತ್ರ ಚುನಾವಣೆಯಲ್ಲಿ ಭಾಗವಹಿಸುತ್ತಿದ್ದುದುಂಟು. ಆದರೆ ನಂತರದಲ್ಲಿ ಕೆಳಜಾತಿ, ಹಿಂದುಳಿದ ವರ್ಗ, ಜಾತಿಗಳ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಾಗಿದೆಯೆಂದು ಅಂಕಿ ಅಂಶಗಳು ತಿಳಿಸುತ್ತವೆ. ಕುಟುಂಬ ಗೌರವದ ಪ್ರಶ್ನೆಯಾಗಿ ಇಂದಿಗೂ ವಿದ್ಯಾವಂತ, ಮದುವೆಯಾಗದಿರುವ ಮಹಿಳೆಯರು ಸಾಮರ್ಥ್ಯ ಇರುವವರಾದರೂ ಸ್ಪರ್ಧಿಸುವುದಿಲ್ಲ.

2011ರ ಅವಧಿಯ ಚುನಾವಣೆಯಲ್ಲಿ 50% ಮೀಸಲಾತಿಯಿಂದಾಗಿ ಹಲವಾರು ವರ್ಗ, ಜಾತಿ ಅಲ್ಲದೇ ಹಿಜ್ರಾ ಸಮುದಾಯದವರೂ ಸ್ಪರ್ಧಿಸಿದುದು ವಿಶೇಷ. ಸುಮಾರು ಮಂದಿ ಮಹಿಳೆಯರು ಸ್ವತಂತ್ರ ಅಭ್ಯರ್ಥಿಗಳಾಗಿ ಸ್ಪರ್ಧಿಸಿದುದು ಮಹಿಳೆಯರಲ್ಲಿ ಬದಲಾಗುತ್ತಿರುವ ಮನೋಭಾವವನ್ನು ತೋರಿಸುತ್ತದೆ. ಈ ಚುನಾವಣೆಯಲ್ಲಿ 30 ಜಿಲ್ಲಾ ಪಂಚಾಯತಿಯಲ್ಲಿ ಇದ್ದುದು 1013 ಸ್ಥಾನಗಳು. ಇದರಲ್ಲಿ ಮಹಿಳೆಯರು 539 ಸ್ಥಾನ ಪಡೆದಿದ್ದಾರೆ. 176 ತಾಲ್ಲೂಕು ಪಂಚಾಯಿತಿಗಳಲ್ಲಿ 3659 ಸ್ಥಾನಗಳಿಗೆ ಸ್ಪರ್ಧೆ ನಡೆದಿದೆ. 2018 ಮಹಿಳೆಯರು ಚುನಾಯಿತರಾಗಿದ್ದಾರೆ. 1993ರ ತಿದ್ದುಪಡಿಯ ನಂತರದಲ್ಲಿ ಚುನಾಯಿತ ಮಹಿಳೆಯರು ಶೌಚಾಲಯ, ನೀರು, ವಿದ್ಯುತ್‌ಗಾಗಿ ಹೋರಾಡಿದ ನಿದರ್ಶನಗಳಿವೆ. ಸರ್ಕಾರೇತರ ಸ್ವಯಂಸಂಸ್ಥೆಗಳಿಂದ ತರಬೇತಿ ಪಡೆದ ಅನೇಕ ಚುನಾಯಿತ ಮಹಿಳೆಯರು ಜನರಿಗಾಗಿ ಪಂಚಾಯಿತಿ ಇರುವ ಸೌಲಭ್ಯಗಳ ಬಗ್ಗೆ ಧ್ವನಿ ಎತ್ತಿದ್ದಾರೆ. ಸಮುದಾಯದ ಬಳಕೆಗೆಂದು ಇರುವ ಹಣಕಾಸಿನ ಬಗ್ಗೆ ಪ್ರಶ್ನಿಸಿದವರೂ ಇದ್ದಾರೆ. ಸಾರಾಯಿ ವಿರುದ್ಧ ಹೋರಾಡಿದ ಸದಸ್ಯರಿದ್ದಾರೆ. ಕೆರೆ, ಮಾವಿನ ಕೊಪ್ಪಲುಗಳನ್ನು ಲೀಸ್‌ಗೆ ನೀಡಿ, ಪಂಚಾಯಿತಿಗೆ ಆದಾಯಭರಿಸಿ, ಅದನ್ನು ಗ್ರಾಮದ ಪ್ರಗತಿಗೆ ಬಳಸಿದ ಚುನಾಯಿತ ಮಹಿಳೆಯರಿದ್ದಾರೆ. ಶಾಲೆಯನ್ನು ಪ್ರಾರಂಭಿಸಿದವರಿದ್ದಾರೆ. ಭ್ರಷ್ಟಾಚಾರದ ವಿರುದ್ಧ ಹೋರಾಡಿ ದಾರಿದೀಪ, ಕೊಳಾಯಿ ಹಾಕಿಸಿದವರೂ ಇದ್ದಾರೆ. ಪರಿಶಿಷ್ಟ ಜಾತಿಯ ಏಳಿಗೆಗೆಂದು ಮೀಸಲಾದ ಹಣ ಅವರಿಗೇ ಖರ್ಚು ಮಾಡತಕ್ಕದ್ದೆಂದು ಗುಟುರು ಹಾಕಿದ ಮಹಿಳೆಯರೂ ಇದ್ದಾರೆ. ಕರ್ನಾಟಕದಲ್ಲಿ ಮಾತ್ರವಲ್ಲ, ಪಂಜಾಬ್, ಆಂಧ್ರ, ಹಿಮಾಚಲಪ್ರದೇಶ, ತಮಿಳುನಾಡಿನಲ್ಲಿಯೂ ಸಹ ಅತ್ಯಂತ ಕ್ರಿಯಾಶೀಲರಾಗಿ ತೊಡಗಿಸಿಕೊಂಡ ಉದಾಹರಣೆಗಳಿವೆ. ಪಂಜಾಬ್‌ನಲ್ಲಿ ಜಿಲ್ಲಾ, ತಾಲ್ಲೂಕ್ ಮಟ್ಟದ ನಿರ್ಧರಿಸುವ ಸ್ಥಾನಗಳಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚು ಇದೆ. ಹಿಮಾಚಲ ಪ್ರದೇಶದಲ್ಲಿ ಮಹಿಳೆಯರೇ ಇರುವ ಆದಿವಾಸಿ ಪಂಚಾಯಿತಿಗಳಿವೆ. ಚುನಾವಣೆಯಿಲ್ಲದೇ ಸರ್ವಸಮ್ಮತಿಯಿಂದ ಆಯ್ಕೆಯಾದವರಿವರು. ಮಹಿಳೆಯರ ಕ್ರಿಯಾಶೀಲತೆ ಗುರುತಿಸುವ ಪ್ರಯತ್ನ ಇದು ಎಂದು ನಾವು ಗುರುತಿಸಬಹುದಾಗಿದೆ. ಮಹಾರಾಷ್ಟ್ರದಲ್ಲಿ ಸ್ಥಳೀಯ ಬೇಡಿಕೆಗಳಿಗನುಗುಣವಾಗಿ ಕೆಲಸಮಾಡಿ ಜಯಗಳಿಸಿದ ಮಹಿಳಾ ಪಂಚಾಯತಿದಾರರು ಇದ್ದಾರೆ.


ಚುನಾಯಿತ ಪ್ರತಿನಿಧಿಗಳು ಭ್ರಷ್ಟಾಚಾರ, ಕೋಮುವಾದ, ಜಾತಿಯ ತಾರತಮ್ಯಗಳನ್ನು ಆಳವಾಗಿ ಚಿಂತಿಸುವ ಅಗತ್ಯವಿದೆ. ಈ ಬಾರಿ ಚುನಾಯಿತರಾದ ಮಹಿಳೆಯೊಬ್ಬರು ಈಗಾಗಲೇ ಪಕ್ಷಾಂತರಿಯಾಗಿದ್ದಾರೆ. ರಾಜಕೀಯ ಹುನ್ನಾರಗಳಿಗೆ ಭ್ರಷ್ಟಾಚಾರಕ್ಕೆ ಬಲಿಯಾಗದೇ ಈ ಮಹಿಳೆಯರು ಸ್ವತಂತ್ರ ನೆಲೆಯಲ್ಲಿ ಕೆಲಸ ಮಾಡುವ ಅಗತ್ಯವಿದೆ. 'ಅಧಿಕಾರ'ವನ್ನು ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಮೀಸಲಾತಿಯ ಸೌಲಭ್ಯ ಪಡೆದ ಇವರು ಸಮುದಾಯದ ಒಳಿತಿಗೆ, ಮಹಿಳೆಯರ ಅಭಿವೃದ್ಧಿಗೆ, ಗ್ರಾಮಾಭಿವೃದ್ಧಿಗೆ ಕಳಕಳಿಯಿಂದ ತೊಡಗಿಸಿಕೊಳ್ಳುವ ಅಗತ್ಯವಿದೆ. ಸ್ವಾಯತ್ತತೆ ಉಳಿಸಿಕೊಂಡು ಸ್ವತಂತ್ರವಾಗಿ ಕ್ರಿಯಾಶೀಲರಾದರೆ ಮಾತ್ರ ಮೀಸಲಾತಿ ಅರ್ಥಪೂರ್ಣವಾಗುತ್ತದೆ. ಇಲ್ಲವಾದರೆ ಬಹುಮಂದಿ ಹೆಂಗಸರ ಭಾಗವಹಿಸುವಿಕೆಯಿಂದ ಮಾತ್ರ ರಾಜಕೀಯದಲ್ಲಿ ಬದಲಾವಣೆಯನ್ನು ನಿರೀಕ್ಷಿಸಲಾಗದು. ಇರುವ ರಾಜಕೀಯ ಹುನ್ನಾರಗಳನ್ನು, ಪಿತೃ ಪ್ರಧಾನತೆಯ ಅಧಿಕಾರವನ್ನು ಎತ್ತಿ ಹಿಡಿಯುವ ಮಹಿಳೆಯರು ಸ್ತ್ರೀ ವೇಷದಲ್ಲಿ ಗಂಡಸರ ರಾಜಕಾರಣವನ್ನು ಮಾಡುತ್ತಾರೆ ಅಷ್ಟೇ! ಒಂದು ಹೆಜ್ಜೆ ಮುಂದೆ ಇಟ್ಟಿದ್ದೇವೆ. ನಮ್ಮ ಮುಂದೆ ಅನೇಕ ದಾರಿಗಳಿವೆ. ಮಹಿಳಾ ಹೋರಾಟಗಳಿವೆ. ಮಹಿಳೆಯರ ಸಾಧನೆಗಳೂ ಇವೆ. ಬಹುಮಂದಿ ಮಹಿಳೆಯರನ್ನು ರಾಜಕೀಯದಲ್ಲಿ ನೋಡುತ್ತಿದ್ದೇವೆ. ರಾಜಕಾರಣದ ಹೊಸ ಭಾಷೆಯನ್ನು ಈ ಮಹಿಳೆಯರು ಬರೆಯುವಂತಾಗಲಿ ಎಂದು ಆಶಿಸೋಣ.

* * *

'ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್' ಪ್ರತಿವರ್ಷವೂ ನಂಜನಗೂಡು **ತಿರುಮಲಾಂಬಾ ಪ್ರಶಸ್ತಿ**ಯನ್ನು ನೀಡುತ್ತ ಬಂದಿದೆ. 2007ರಿಂದ 2010ರ ವರೆಗಿನ ನಾಲ್ಕುವರ್ಷದ ಪ್ರಶಸ್ತಿಗಳನ್ನೂ ಈ ಸಾಲಿನಲ್ಲಿ ನೀಡಿ ಸಾಧಕಿಯರನ್ನು ಪುರಸ್ಕರಿಸಲಾಯಿತು. ಸಂಸ್ಕೃತ, ಇಂಗ್ಲಿಷ್, ತಮಿಳು ಹಾಗೂ ಉರ್ದು ಭಾಷೆಯ ಸಾಹಿತ್ಯದಲ್ಲಿ ಅನನ್ಯ ಸೇವೆ ಸಲ್ಲಿಸಿದ ಸಾಧಕಿಯರಾದ ಸುಷ್ಮಾ ಕುಲಶ್ರೇಷ್ಠ, ನಯನತಾರಾ ಸೆಹಗಲ್, ಉಮಾಮಹೇಶ್ವರಿ ಹಾಗೂ ಸುಗ್ಗರಾ ಮೆಹದೀ ಅವರು ಕ್ರಮವಾಗಿ ಪ್ರಶಸ್ತಿ ಗೌರವಕ್ಕೆ ಭಾಜನರಾದರು. ಇದೇ ಸಂದರ್ಭದಲ್ಲಿ ಕೊಡಮಾಡುವ ಸದೋದಿತಾ ಪ್ರಶಸ್ತಿಗೆ ಸಮಾಜಸೇವೆಗಾಗಿ ಆರ್. ಇಂದಿರಾ, ಕೆ. ಲೀಲಾ, ಛಾಯಾದಿಗವೋಂಕರ್, ಪದ್ಮಾಶೇಖರ್ ಅವರನ್ನೂ ಗೌರವಿಸಲಾಯಿತು. **ಕರ್ನಾಟಕ ಕಲ್ಪವಲ್ಲಿ** ಪ್ರಶಸ್ತಿಗೆ ಶಾರದಾಗೋಪಾಲ ದಾಬಡೆ, ದು. ಸರಸ್ವತಿ, ರೂಪಾಹಾಸನ, ನಾಗರತ್ನ ಬನದ ಕೊಪ್ಪ ಅವರುಗಳು ಭಾಜನರಾದರು. **ಗಾರ್ಗಿ ಪ್ರಶಸ್ತಿ**ಗೆ ಮಾಲತಿ, ಎಂ.ಸಿ. ಪಂಕಜ, ಎಸ್.ವಿಜಯಮ್ಮ, ಬಿ.ಎಂ. ಶೈಲಜಾ ಅವರು ಭಾಜನರಾದರು. ಇವರೆಲ್ಲರಿಗೂ ಮಾನಸ ಬಳಗದ ಅಭಿನಂದನೆಗಳು.

ಜೆಸ್ಸಿಕಾಳನ್ನು ಯಾರು ಕೊಂದರು?

■ ಗಿರಿಜಾಶಾಸ್ತ್ರಿ



No One Killed Jessica ಇದು ಇತ್ತೀಚೆಗೆ ಬಿಡುಗಡೆಯಾದ ಚಿತ್ರ. ಚಿತ್ರದ ಪ್ರಾರಂಭದಲ್ಲಿಯೇ ಬಾರ್ ಒಂದರಲ್ಲಿ ಕೆಲಸಮಾಡುವ ಹದಿಹರೆಯದ ಜೆಸ್ಸಿಕಾ ಎನ್ನುವ ಹುಡುಗಿಯೊಬ್ಬಳ ಕೊಲೆಯಾಗಿದೆ. ಕುಡಿದು ಮತ್ತನಾದ ಮಂತ್ರಿಯೊಬ್ಬನ ಮಗ ಡ್ರಿಂಕ್ಸ್ ಕೇಳುತ್ತಾನೆ. ಬಾರ್ ಮುಚ್ಚಿದ ಕಾರಣ, ಡ್ರಿಂಕ್ಸ್ ಮುಗಿದುದರಿಂದ ಅಸಾಹಯಕಳಾದ ಹುಡುಗಿ ಡ್ರಿಂಕ್ಸ್ ಕೊಡಲು ನಿರಾಕರಿಸಿದಾಗ ಅವಳನ್ನು ಬಂದೂಕಿನಿಂದ ಹೊಡೆಯುತ್ತಾನೆ. ಬುಲೆಟ್ ತಾಗಿದ ಹುಡುಗಿ ನೆಲಕ್ಕುರುಳುತ್ತಾಳೆ. ಸಬರೀನಾ ಎನ್ನುವ ಬಿಸಿರಕ್ತದ ಹುಡುಗಿ, ಜೆಸ್ಸಿಕಾಳ ಅಕ್ಕ ಅವಳ ತಂಗಿಯ ಸಾವಿಗೆ ನ್ಯಾಯ ದೊರಕಿಸಿ ಕೊಡಲೆಂದು, ಕೊಲೆಗಾರನ ವಿರುದ್ಧ ಸಾಕ್ಷಿಗಳನ್ನು ಒಟ್ಟುಮಾಡಿ ಕೋರ್ಟು, ಕಛೇರಿ, ಪೋಲೀಸ್ ಸ್ಟೇಷನ್ ಎಂದೆಲ್ಲಾ ಅಲೆಯುತ್ತಾಳೆ. ಮಂತ್ರಿವರ್ಯರು ಸಾಕ್ಷಿಗಳನ್ನೆಲ್ಲಾ ತಮ್ಮ ವರ್ಚಸ್ಸು ಹಾಗೂ ಹಣದಿಂದ ಕೊಳ್ಳುತ್ತಾರೆ. ಮಂತ್ರಿಯ ಮಗ ಸಾಕ್ಷಿಪುರಾವೆಗಳಿಲ್ಲದೆ ಬಿಡುಗಡೆಯಾಗುತ್ತಾನೆ. ಆಘಾತಗೊಂಡ ಜೆಸ್ಸಿಕಾಳ ತಾಯಿ ಸಾವಿಗೆ ಈಡಾಗುತ್ತಾಳೆ. ತಂದೆ ಆಸ್ಪತ್ರೆ ಸೇರುತ್ತಾನೆ. ಸಬರೀನ ಹತಾಶಳಾಗಿ ಆಡಳಿತ ವ್ಯವಸ್ಥೆಯ ಬಗೆಗೆ, ಮಾಧ್ಯಮಗಳ ಬಗೆಗೆ ಭರವಸೆಯನ್ನು ಕಳೆದುಕೊಂಡು ಏಕಾಕಿಯಾಗುತ್ತಾಳೆ. ಇದು ಸಿನಿಮಾದ ಮಧ್ಯಂತರದ ವರೆಗಿನ ಕಥೆ.

ಮೇಲು ನೋಟಕ್ಕೆ ನಮ್ಮ ನ್ಯಾಯ ವ್ಯವಸ್ಥೆಯ ಪೊಳ್ಳುತನವನ್ನು ಸಾರುವ ಎಲ್ಲ ಸಿನೆಮಾಗಳಂತೆ ಇದೂ ಒಂದು ಎಂದು ಕಂಡರೂ, ಇದರ ಕಾಸ್ಮೆಟಿಕ್ ಪೋಷಣೆ ಭಿನ್ನವಾಗಿರುವುದರಿಂದ, ಇದು ವೀಕ್ಷಕರ ಗಮನ ಸೆಳೆಯುತ್ತದೆ. ಭಾರತೀಯ ಮಹಿಳೆಯರ ನ್ಯಾಯಪರ ಹೋರಾಟಗಳಿಗೆ 2011ನೆಯ ಇಸವಿ ಕೊಟ್ಟ ಕೊಡುಗೆಯಿದು. ಚಿತ್ರದಲ್ಲಿ ಇರುವವರೆಲ್ಲ ನಾಯಕಿಯರೇ (ಹೆಚ್ಚಿನವರು). ನಾಯಕರು ಇಲ್ಲದ ಮಾತ್ರಕ್ಕೆ ಪುರುಷ ಪಾತ್ರಗಳು ಇಲ್ಲವೆಂತಲ್ಲ. ಪುರುಷ ಪಾತ್ರಗಳು ಹೇರಳವಾಗಿ ಇವೆ. ಅವುಗಳಲ್ಲಿ ಕೆಲವು ಖಳನಾಯಕರ ವೇಷತೊಟ್ಟರೆ ಇನ್ನು ಕೆಲವು ಹೋರಾಟವನ್ನು ಅಪನಂಬಿಕೆಯಿಂದ ನೋಡುವ, ಸಂಘಟನೆಯ ಕಾಲೆಳೆಯುವ ದುರ್ಬಲ ಪಾತ್ರಗಳಾಗಿವೆ. ಹೋರಾಟದಲ್ಲಿ ಅಚಲ ವಿಶ್ವಾಸವನ್ನು ದೃಢಗೊಳಿಸುವವರು, ಹೋರಾಟದ ಚಲನೆಯನ್ನು ತೀವ್ರಗೊಳಿಸುವವರು ಇಲ್ಲಿ ಎಲ್ಲ ಮಹಿಳೆಯರೇ. (ಸಬರೀನಾಳ ತಂದೆ, ಎನ್.ಡಿ.ಟಿ.ವಿ ವಾಹಿನಿಯ ಪ್ರಮುಖ ಪತ್ರಕರ್ತ, ಜೆಸ್ಸಿಕಾಳ ಗೆಳೆಯ ಇವರೆಲ್ಲಾ ವ್ಯವಸ್ಥೆಯ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವವರೇ.) ಚಿತ್ರದ ಪ್ರಾರಂಭದಿಂದ ಹಿಡಿದು ಕೊನೆಯವರೆಗೆ ಎಲ್ಲ ರೀತಿಯ ರಿಸ್ಕ್‌ಅನ್ನು ಅದರ ಪರಿಣಾಮಗಳ ಚೆನ್ನಾದ ಅರಿವಿದ್ದುಕೊಂಡೇ ಮುನ್ನುಗ್ಗಿ ಸಫಲರಾಗುವವರು ಮಹಿಳೆಯರು. ಸತ್ಯವನ್ನು ಎದುರಿಸುವ ತಾಖತ್ತು ಅವರಿಗೆ ಮಾತ್ರ ಇದೆ. ಹೆಚ್ಚಿನ ಗಂಡು ಪಾತ್ರಗಳೆಲ್ಲಾ ಜೀವಕ್ಕೆ ಹೆದರಿಯೋ, ಹಣದ ಆಮಿಷಕ್ಕೆ ಬಲಿಯಾಗಿಯೋ ಕೋರ್ಟಿನಲ್ಲಿ ಸುಳ್ಳು ಸಾಕ್ಷಿ ಹೇಳಿದರೆ, ಹೆಣ್ಣುಮಕ್ಕಳು ನಿಜವನ್ನು ಹೇಳಿ ಗುಂಡಿಗೆ ಎದೆಯೊಡ್ಡುವ ಸಾಹಸವನ್ನು ಮಾಡುತ್ತಾರೆ (ಒಂದು ಅಪವಾದವನ್ನು ಬಿಟ್ಟರೆ). ಇದು ಒಂದು ರೀತಿಯಲ್ಲಿ ಅವಾಸ್ತವ ಎನ್ನಿಸಿದರೂ ಪ್ರಿಯವಾಗುತ್ತದೆ. ಕಾರಣ ಇದರಿಂದ ಮಹಿಳೆಯರಲ್ಲಿ ಹೊಸ ಕನಸುಗಳನ್ನು ಹುಟ್ಟುಹಾಕಲು ಸಾಧ್ಯವಾಗುತ್ತದೆ ಮತ್ತು ಹೋರಾಟದ ಹೊಸ ಸಾಧ್ಯತೆಗಳನ್ನು ತೆರೆಯುವಲ್ಲಿ ಸಫಲವಾಗಿದೆ.


ಈ ಚಿತ್ರ ನೋಡುತ್ತಿರುವ ಹಾಗೆಯೇ ಹಿಂದಿಯ "ದಾಮಿನಿ" ಚಿತ್ರ ನೆನಪಾಗುತ್ತದೆ. ದಾಮಿನಿ ಚಿತ್ರಕೂಡ ಎಷ್ಟು ಸಲ ನೋಡಿದರೂ ಮತ್ತೆ ಮತ್ತೆ ನೋಡಬೇಕೆನಿಸುತ್ತದೆ. ಅವಳು ಕೋರ್ಟಿನ ಕಟಕಟೆಯೊಳಗೆ ನಿಂತು ವಾದಮಾಡುವಾಗ ಅದರ ಅತಿರೇಕಗಳು ಮುಜುಗರ ತರಿಸಿದರೂ ಹೀಗೆ ನಡೆಯಲು ಸಾಧ್ಯವಿಲ್ಲ ಎಂದು ಎನಿಸಿದರೂ ಇಷ್ಟವಾಗುತ್ತದೆ. ಅದು ನಮ್ಮ ಕನಸು ನನಸಾಗದ ಕನಸು. ಅಮಾನವೀಯ ವ್ಯವಸ್ಥೆಯ ಎದುರು ಬೇರೆ ಪರ್ಯಾಯಗಳೇ ಇಲ್ಲವಾದಾಗ, ಭರವಸೆಯ ಎಲ್ಲ ಬಾಗಿಲುಗಳೂ ಮುಚ್ಚಿದಾಗ ಅಸಹಾಯಕತೆಯಿಂದ ಹುಟ್ಟಿಕೊಳ್ಳುವ ಕನಸು. ಇಂತಹ ಕನಸುಗಳೇ ಭೂಮಿಯ ಮೇಲೆ ಪಾಪದ ಕೊಡ ತುಂಬಿದಾಗಲೆಲ್ಲಾ ದೇವಿಯರನ್ನು ಬರಮಾಡಿಕೊಂಡಿವೆ. ದೇವಲೋಕದಿಂದ ದೇವಿಯರನ್ನು ಕರೆತರಲಾರದ ಆಧುನಿಕ ಯುಗಕ್ಕೆ ಇಂತಹ ಗಿಮಿಕ್‌ಗಳನ್ನು ಮಾಡದೇ ಬೇರೆ ವಿಧಿಯೇ ಇಲ್ಲ. ಅಸಹಾಯಕರಲ್ಲಿ ಧೈರ್ಯ ತುಂಬಲು, ಸಂಘಟನೆ ಮಾಡಲು (ದೇವಿಯ ಪರ್ಯಾಯವಾಗಿ) ಇಲ್ಲಿ ಮೀರಾ ಎನ್ನುವ ಒಬ್ಬ ಪತ್ರಕರ್ತೆ (NDTV ವರದಿಗಾರ್ತಿ) ಇದ್ದಾಳೆ. (ರಾಣಿ ಮುಖರ್ಜಿ) ಇವಳು ಬಳಸುವ ಭಾಷೆ ದೇವಭಾಷೆಯಲ್ಲ. ಮಹಿಳೆಯರು ಬಳಸಬಾರದೆಂದು ವಿಧಿಸಲಾಗಿರುವ ಭಾಷೆ. ಇವಳ ರೀತಿ ನೀತಿಗಳು ಒಬ್ಬ ಗಂಡುಬೀರಿಯ ಸ್ವರೂಪದ್ದು. Bitch ಎಂದು ತನ್ನನ್ನು ತಾನೇ ಕರೆದುಕೊಳ್ಳುತ್ತಾಳೆ. ಮಧ್ಯರಾತ್ರಿಯಲ್ಲಿ ಮಿಲಿಟರಿ ವಾಹನದಂತಹ ದೊಡ್ಡ ಗಾಡಿಯನ್ನು ಒಬ್ಬಳೇ ಚಲಾಯಿಸಿಕೊಂಡು ಹೊರಟು ಬಿಡುತ್ತಾಳೆ. ನಡುರಾತ್ರಿಯಲ್ಲಿ ಕರೆಗಂಟೆ ಒತ್ತಿದಾಗ ಒಬ್ಬಳೇ ಮನೆಯಿಂದ ಹೊರಗೆ ಬಂದು ಯಾರೂ ಇಲ್ಲದುದನ್ನು ಖಚಿತ ಪಡಿಸಿಕೊಳ್ಳಲು ಅವಳಿಗೆ ಸಾಧ್ಯವಾಗುತ್ತದೆ.



ಹಾಗೆ ಅವಳು ಇರುವುದೂ ದೊಡ್ಡ ಮನೆಯೊಂದರಲ್ಲಿ, ಸೇವಕಿಯೊಬ್ಬಳ ಜೊತೆಗೆ ಒಬ್ಬಂಟಿಯಾಗಿ. ಕಳಪೆ ಸಿನಿಮಾದಲ್ಲಾಗಿದ್ದರೆ ವ್ಯವಸ್ಥೆಯನ್ನು ಎದುರು ಹಾಕಿಕೊಂಡು ಜೆಸ್ಸಿಕಾಳ ಪರವಾಗಿ ಹೋರಾಡುವ ಅವಳನ್ನು ರೇಪ್‌ಮಾಡಿ, ಕೊಲೆ ಮಾಡಿಬಿಡಬಹುದಾಗಿತ್ತು. ನೋಡುವ ಪ್ರೇಕ್ಷಕರಿಗೂ ಅವಳು ಯಾವ ಕ್ಷಣದಲ್ಲಾದರೂ ರೇಪ್ ಆಗಿ ಬಿಡಬಹುದು, ಕೊಲೆಯಾಗಿಬಿಡಬಹುದು ಎಂದೇ ಎನಿಸುತ್ತದೆ. ಯಾಕೆಂದರೆ ಅದೇ ವಾಸ್ತವ. ಅವಳು ಕೊಲೆಯಾಗದಿದ್ದರೆ ಆಶ್ಚರ್ಯವೇ ಆಗುತ್ತದೆ. ಆದರೆ ಇಲ್ಲಿ ಹಾಗಾಗುವುದಿಲ್ಲ. ಅವಳು ಸಾಹಸಿ ಮಾತ್ರವಲ್ಲ ಅತ್ಯಂತ ಬುದ್ಧಿವಂತ ಹುಡುಗಿ ಕೂಡ. ಆದುದರಿಂದಲೇ ಪ್ರಸಿದ್ಧ ವಕೀಲರುಗಳ ದೌರ್ಬಲ್ಯ ಗಳನ್ನು ನ್ಯಾಯವ್ಯವಸ್ಥೆಯ ಪೊಳ್ಳುತನವನ್ನೂ ಮೇಲುವರ್ಗದವರ ಸೋಗಲಾಡಿತನವನ್ನೂ ಬಯಲುಗೊಳಿಸುವಲ್ಲಿ ಯಶಸ್ವಿಯಾಗುತ್ತಾಳೆ. ಟಿವಿ ಮಾಧ್ಯಮವನ್ನೇ ಮುಖ್ಯವಾಗಿ ಬಳಸಿಕೊಂಡು ಜನರಲ್ಲಿ ಹೊಸ ಜಾಗೃತಿಯನ್ನು ಮೂಡಿಸಲು ಕಾರಣವಾಗುತ್ತಾಳೆ. ಸಾವಿರಾರು ಸಂಖ್ಯೆಯಲ್ಲಿ ಇಂಡಿಯಾ ಗೇಟ್ ಬಳಿ ಜನ ಮೋಂಬತ್ತಿಯ ಬೆಳಕಲ್ಲಿ ಜೆಸ್ಸಿಕಾಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲು ಸೇರುತ್ತಾರೆ. ಸಂಘಟನೆಯ ಮೂಲಕ ಜಾಗೃತಿಯನ್ನು ಉಂಟುಮಾಡಲು ಸಾಧ್ಯ ಎನ್ನುವುದನ್ನು ಈ ಘಟನೆ ಎತ್ತಿ ತೋರಿಸುತ್ತದೆ. ಮಂತ್ರಿ ಮಂಡಲದಲ್ಲಿ ಬಿರುಗಾಳಿ ಏಳುತ್ತದೆ. ಕೊಲೆಗಾರನ ತಂದೆ ತನ್ನ ಮಂತ್ರಿ ಪದವಿಗೆ ರಾಜೀನಾಮೆ ಯನ್ನು ಕೊಡುತ್ತಾನೆ. ಅದಕ್ಕಾಗಿ ಇಲ್ಲಿ ಮೀರಾ ಬಳಸುವ ಉಪಾಯಗಳು (strategies) ಹಾಸ್ಯಾಸ್ಪದವೆನಿಸಬಹುದಾದರೂ ಅದು ನ್ಯಾಯವಂಚಿತ ರಾದ ಹೆಣ್ಣುಮಕ್ಕಳಿಗೆ ಭರವಸೆಯ ಬೆಳಕನ್ನು ನೀಡುತ್ತದೆ.

ದುಷ್ಟರ ಮರ್ದನಕ್ಕಾಗಿ ಪಣತೊಡುವ ಈಕೆಯ ಪಾತ್ರ ಕಾಲ್ಪನಿಕವೆನಿಸದೇ ಇರುವುದಕ್ಕೆ ಕಾರಣ ಇವಳ ಪಾತ್ರ ಕಾರ್ಗಿಲ್ ಯುದ್ಧದಲ್ಲಿ ವರದಿಗಾರಳಾಗಿದ್ದ ಬರ್ಖಾದತ್ತಳನ್ನು ನೆನಪಿಸುತ್ತದೆ. ಅವಳು ತೋರಿಸುವ ಅಸಾಧಾರಣ ಧೈರ್ಯಕ್ಕೆ ಕಾರ್ಗಿಲ್ ಯುದ್ಧದ ಹಿನ್ನೆಲೆ ಒಂದು ಆಧಾರವನ್ನು ಒದಗಿಸುತ್ತದೆ. ಅವಳು ಬಳಸುವ ಸೊಂಟದ ಕೆಳಗಿನ ಬೈಗುಳಗಳು ಪಿತೃಪ್ರಧಾನ ನಂಬಿಕೆಗಳಿಗೆ ಒಂದು ಷಾಕ್ ಕೊಡುತ್ತದೆ. ಅಷ್ಟು ಮಾತ್ರವಲ್ಲದೆ ಕೋರ್ಟಿನಲ್ಲಿ ಡಿಫೆನ್ಸ್ ವಕೀಲರು ಮಹಿಳಾ ಆಪಾದಿತರುಗಳಿಗೆ ಬಳಸುವ ಅಶ್ಲೀಲ ಭಾಷೆಯ ಸ್ವರೂಪಕ್ಕೆ ಕೊಟ್ಟ ವ್ಯಾಖ್ಯಾನವೂ ಆಗಿದೆ. ಸತ್ಯವನ್ನು ಶೋಧಿಸುವ ದಾರಿ ಪವಿತ್ರದ ದಾರಿಯಾಗಿದ್ದರೆ ಅದನ್ನು ತಿರುಚಿ ಹಾಕುವ ದಾರಿ ಎಷ್ಟು ಹೊಲಸಾದದ್ದು ಎಂಬುದನ್ನು ಇಲ್ಲಿ ಬಳಸಲಾಗುವ ಭಾಷೆ ನಿರೂಪಿಸುತ್ತದೆ. ಆದುದರಿಂದಲೇ ಪ್ರಸಿದ್ಧ ವಕೀಲೆ, ಹೋರಾಟಗಾರ್ತಿ ಫ್ಲೇವಿಯಾ ಅವರು "The rape victim is raped again and again in the court room" (Journey to Justice) ಎಂದು ಹೇಳಿರುವುದು ಸರಿಯಾಗಿಯೇ ಇದೆ. ಇಲ್ಲಿ ಸಾಕ್ಷಿ ಹೇಳಲು ಬರುವ ಒಬ್ಬ ಹುಡುಗಿಯನ್ನು ಕೊಲೆಯಾದ ಸಂದರ್ಭದಲ್ಲಿ ಅವಳು ಹಾಕಿದ ಡ್ರೆಸ್ ಬಗ್ಗೆ ಕೇಳಲಾಗುತ್ತದೆ. ಒಂದು ಕ್ಷಣ ಅವಾಕ್ಕಾದ ಆ ಹುಡುಗಿ ಸುಮ್ಮನೆ ನಿಂತಾಗ, ತಾನು ಹಾಕಿದ ಡ್ರೆಸ್‌ನ ನೆನಪೇ ಇಲ್ಲದವಳು ಕೊಲೆ ಮಾಡಿದ ಹುಡುಗನ ಪೋಷಾಕನ್ನು ಕರಾರುವಾಕ್ಕಾಗಿ ನೆನಪಿಟ್ಟುಕೊಂಡಿರುವುದರ ಬಗ್ಗೆ ಕೋರ್ಟಿನಲ್ಲಿ ನಗೆಯ ಹೊನಲೇಳುತ್ತದೆ. ತಕ್ಷಣ ಆ ಹುಡುಗಿ ಅವಳು ತೊಟ್ಟುಕೊಂಡ ಫ್ರಾಕ್, ಬ್ರಾ, ಪ್ಯಾಂಟಿಗಳ ಬಣ್ಣ, ಬ್ರಾಂಡ್, texture, design ಸಮೇತ ಎಲ್ಲವನ್ನೂ ಸ್ವಲ್ಪವೂ ವಿಚಲಿತಗೊಳ್ಳದೆ ವಿವರಿಸುವ ರೀತಿ, ತೋರಿಸುವ ಧೈರ್ಯ ಪ್ರೇಕ್ಷಕರನ್ನು ದಂಗುಬಡಿಸುತ್ತದೆ. ಅವಳು ಬಳಸುವ ಭಾಷೆ ಕೂಡ ಮೀರಾ ಬಳಸುವಂತಹುದೇ. ಹೀಗೆ ಚಿತ್ರದ ತುಂಬ ಇರುವ ಬೈಗುಳಗಳು ಮಹಿಳೆಯರದ್ದೇ ಆದ ಒಂದು ಭಾಷಾ ವಿಜ್ಞಾನದ ಬಗೆಗೆ ಇರುವ ಸಾಮಾಜೀಕರಣವನ್ನು ಕೂಡ ಪ್ರತಿನಿಧಿಸುತ್ತದೆ.

ಚಿತ್ರದ ಹೆಸರು 'No one killed Jessica' -ಜೆಸ್ಸಿಕಾಳನ್ನು ಯಾರೂ ಕೊಲೆಮಾಡಲಿಲ್ಲ. ಹಾಗಾದರೆ ಜೆಸ್ಸಿಕಾ ತಾನೇ ಕೊಂದು ಕೊಂಡಳೇ? ಇದು ಆತ್ಮಹತ್ಯೆಯೇ? ದಿನ ನಿತ್ಯ ಪತ್ರಿಕೆಗಳಲ್ಲಿ ನಾವು ಇಂತಹ ಅನೇಕ ಘಟನೆಗಳನ್ನು ಓದುತ್ತಿರುತ್ತೇವೆ. ಈ ಜೆಸ್ಸಿಕಾ ನಮ್ಮ ಮನೆಯ ಹುಡುಗಿಯೂ ಆಗಬಹುದು ಎಂಬುದನ್ನು ಮರೆತು ಬಿಡುತ್ತೇವೆ. ಆದುದರಿಂಲೇ ಪತ್ರಿಕೆಗಳು ರದ್ದಿಗೆ ಹೋಗಿಬಿಡುತ್ತವೆ. ಜೆಸ್ಸಿಕಾಳಿಗೆ ಎಲ್ಲ ಹದಿಹರೆಯದ ಹುಡುಗಿಯರ ಹಾಗೆ ಅನೇಕ ಸುಂದರ ಕನಸುಗಳಿವೆ. ಒಂದು ಪೆಗ್ ಹೆಂಡದ ಮುಂದೆ ಅವೆಲ್ಲವೂ ಅಮುಖ್ಯವಾಗಿವೆ. ಒಂದು ಪೆಗ್ ಹೆಂಡ ಅವಳ ಎಲ್ಲ ಕನಸುಗಳನ್ನು ಹೊಸಕಿ ಹಾಕಿದೆ. ನ್ಯಾಯವೆನ್ನುವುದು ಅನ್ಯಾಯದ ಮಾರ್ಗ ಹಿಡಿದಿದೆ. ಆದುದರಿಂದಲೇ ಅದೇ ಮಾರ್ಗದಲ್ಲಿ ಹೋಗಿ ಅನ್ಯಾಯವನ್ನು ಹಣಿಯಬೇಕಾಗಿದೆ. ಸತ್ಯವನ್ನು ಎತ್ತಿಹಿಡಿಯಬೇಕಾಗಿದೆ. ಅಂತಹ ಕೆಲಸವನ್ನು ಇಲ್ಲಿನ ನಾಯಕಿಯಾದ ಮೀರ ಯಶಸ್ವಿಯಾಗಿ ಮಾಡುತ್ತಾಳೆ. ತನ್ನ ಉಪಾಯಗಳ ಮೂಲಕ ಜೆಸ್ಸಿಕಾಳ ಸಾವಿಗೆ ನ್ಯಾಯ ದೊರಕಿಸಿ ಕೊಡುತ್ತಾಳೆ. ವ್ಯವಸ್ಥೆಯ ವಿರುದ್ಧ ಹೋರಾಡಿ ಸೋತು ಹತಾಶಳಾಗಿಬಿಟ್ಟ



ಸಬರೀನಾಳಲ್ಲಿ ಚೈತನ್ಯವನ್ನು ತುಂಬಲು ಸಹಾಯಕಳಾಗುತ್ತಾಳೆ. ಮಹಿಳೆಯ ಹೋರಾಟದ ಪ್ರಕ್ರಿಯೆಯಲ್ಲಿ ಅಡಗಿರುವ ಅಸಹಾಯಕತೆ, ಸೋಲೊಪ್ಪದಛಲ, ಆತ್ಮವಿಶ್ವಾಸ, ವ್ಯವಸ್ಥೆಯನ್ನು ಎದುರು ಹಾಕಿಕೊಳ್ಳುವ ಧಾರ್ಷ್ಟ್ಯ ಈ ಎಲ್ಲ ಸಾಧ್ಯತೆಗಳ ಪ್ರತೀಕವಾಗಿ ಇಲ್ಲಿ ಸಬರೀನಾ ಮತ್ತು ಮೀರ ಈ ಪಾತ್ರಗಳ ಅಭಿವ್ಯಕ್ತಿ ಅನನ್ಯವಾಗಿ ಪ್ರಕಟವಾಗಿದೆ.


ಇಲ್ಲಿ ಎಷ್ಟೇ ನಾಟಕೀಯ ಸನ್ನಿವೇಶಗಳಿದ್ದರೂ, ಮಹಿಳಾ ಸಬಲೀಕರಣದ ಪರಿಕಲ್ಪನೆಗೆ ಹೊಸದೊಂದು ಆಯಾಮವನ್ನು 'ಹೊಸ ಕವಲ'ನ್ನು ಈ ಚಿತ್ರವೊದಗಿಸುತ್ತದೆ ಎಂದರೆ ಅತಿಶಯೋಕ್ತಿಯಲ್ಲ. ಶೋಭಾ ಡೇ ಯವರು Bombay Times ಪತ್ರಿಕೆಯಲ್ಲಿ ಇದನ್ನು "ten years old story" ಎಂದು ಅಣಕವಾಡಿದ್ದಾರೆ. ಹತ್ತು ವರ್ಷಗಳೇ ಏಕೆ ಸಾವಿರ ಸಾವಿರ ವರ್ಷಗಳಷ್ಟು ಹಳೆಯ ಕಥೆ ಇದು. ಹಾಗೆಂದು ಕಥೆ ಮುಗಿದು ಹೋಗಿದೆಯೇ? ಪತ್ರಿಕೆಗಳನ್ನು ತೆರೆದು ನೋಡಿದರೆ ಸಾಕು ಇಂಥ ಕಥೆಗಳು ದಿನೇ ದಿನೇ ಹೆಚ್ಚುತ್ತಲೇ ಹೋಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಹೀಗಿದ್ದೂ ಇದರ ಬಗ್ಗೆ ಮಾತನಾಡುವುದನ್ನು ಬಿಟ್ಟು ಬಿಡಬೇಕೆ? 'The script is weak and patchy' ಎನ್ನುವುದಕ್ಕೆ ಅವರು ಕೊಡುವ ಕಾರಣ, 'the first half crawling along painfully establishing nothing more than vidya balan's morose mood. Vidya , who plays Jessica's sister Sabrina is projected as a gloomy, angry, bitter woman mourning her sister's callous murder' ಎಂದು ಹೇಳುವ ಅವರೇ ಮುಂದೆ ಅವಳನ್ನು 'a droopy, expressionless, sexless crusader who goes about her commitment mechanically, there is no passion in her mission' ಎನ್ನುತ್ತಾರೆ.

ಅಸಹಾಯಕಳಾದ ಸಬರೀನ ಮೌನವಾಗಿ ತನ್ನ ಪ್ರತಿಭಟನೆಯನ್ನು ಮುಂದುವರಿಸುತ್ತಾಳೆ. ತನ್ನ ಕೈಯಲ್ಲಿ ಏನೂ ಸಾಗದು ಎನ್ನುವಾಗ ಟೆರೇಸಿನ ಮೇಲೆ ಹೋಗಿ ಬಟ್ಟೆಗಳನ್ನು ಕಿತ್ತು ಹಾಕಿ, ಹೂವಿನ ಕುಂಡಗಳನ್ನು ಒಡೆದು ಜೋರಾಗಿ ಅಳುತ್ತಾಳೆ. ಬಲಿಷ್ಠವಾದ ವ್ಯವಸ್ಥೆಯ ಎದುರು ಅವಳ ಅಸಹಾಯಕತೆಯನ್ನು ಅನನ್ಯವಾಗಿ ಇಲ್ಲಿ ವ್ಯಕ್ತಪಡಿಸಲಾಗಿದೆ. ಅವಳು ಇಲ್ಲಿ ಒಬ್ಬ ಅಪ್ಪಟವಾದ (ಅಸಾಹಯಕ) ಹೆಣ್ಣಾಗಿ, ಅಷ್ಟೇ ಸ್ವಾಭಿಮಾನಿಯಾಗಿ, ಪ್ರಾಮಾಣಿಕಳಾಗಿ ಕಾಣಿಸಿಕೊಂಡಿದ್ದಾಳೆ. ಇಂತಹವಳನ್ನು sexless ಎನ್ನುವುದು ಎಷ್ಟು ಉಚಿತ? ಒಬ್ಬ ಬಾಯ್‌ಫ್ರೆಂಡ್ ಕೂಡ ಇಲ್ಲದ ತನ್ನ ಯೌವ್ವನವೆಲ್ಲಾ ಕೋರ್ಟು ಕಛೇರಿ ಸುತ್ತುವುದರಲ್ಲೇ ಕಳೆದು ಹೋಯಿತು, ನನ್ನ ಕನಸುಗಳೆಲ್ಲಾ ನುಚ್ಚು ನೂರಾಗಿ ಹೋದವಲ್ಲಾ ಎಂದು ಮೀರಾಳ ಎದುರಿಗೆ ರೋದಿಸುವ ಸಬರೀನಾಳ ಪಾತ್ರ ಪ್ರೇಕ್ಷಕರ ಮನಸ್ಸನ್ನು ಕರಗಿಸುವಲ್ಲಿ ಯಶಸ್ವಿಯಾಗುತ್ತದೆ.

ಡೇ ಯವರು ಈ ಚಿತ್ರ ಯಶಸ್ವಿಯಾಗದೇ ಇರುವುದಕ್ಕೆ ಕೊಡುವ ಇನ್ನೊಂದು ಕಾರಣವೆಂದರೆ, ಕಮರ್ಶಿಯಲ್ ಮಸಾಲ ಸಿನಿಮಾ ನೋಡಲು ಬಂದಿದ್ದ ಹಿಂದಿನ ಸಾಲಿನಲ್ಲಿ ಕುಳಿತಿದ್ದ ಹುಡುಗಿಯರಿಬ್ಬರು ಚಿತ್ರದ ಮಧ್ಯಂತರದಲ್ಲಿ 'But who is jessica' ಎಂದು ಮಾತನಾಡಿಕೊಳ್ಳುವುದು. ಸಿನಿಮಾದಲ್ಲಿ ಫ್ಲಾಷ್ ಬ್ಯಾಕ್ ತಂತ್ರದಲ್ಲಿ ಜೆಸ್ಸಿಕಾಳ ಕನಸುಗಳನ್ನು, ಅವಳ ಎದೆಗುಂದದ ಧೈರ್ಯವನ್ನು, ಅಕ್ಕ ತಂಗಿಯರ ಪ್ರೀತಿಯನ್ನು ಹಲವು ಬಾರಿ ತೋರಿಸಲಾಗಿದೆ. ಕಮರ್ಶಿಯಲ್ ಸಿನಿಮಾ ಬಯಸುವ ಈಗಿನ ಹುಡುಗಿಯರ ಅಭಿರುಚಿಗಳೇ ಒಂದು ಮಾನದಂಡವೇ? ಹಾಗೆ ನೋಡಿದರೆ ಅಂತಹ ಹುಡುಗಿಯರಿಗೆ ಈ ಬಗೆಯ ಅರಿವನ್ನು ಮೂಡಿಸುವುದು ನಮ್ಮ ಕರ್ತವ್ಯವಲ್ಲವೇ? ಜೆಸ್ಸಿಕಾಳಿಗೆ ಒದಗಿದ ಸ್ಥಿತಿ ಯಾರಿಗೂ ಒದಗಬಹುದಲ್ಲವೇ? ಎಂಟು ತಿಂಗಳ ಮಗುವಿನಿಂದ ಹಿಡಿದು ಎಂಬತ್ತು ವರುಷದ ಮುದುಕಿಯವರೆಗೆ ಈ ದೇಶದಲ್ಲಿ ಯಾವ ಹೆಣ್ಣೂ ಸುರಕ್ಷಿತವಾಗಿಲ್ಲ ಎಂಬ ಎದೆ ನಡುಗಿಸುವ ಸತ್ಯವನ್ನು ಅನಾವರಣಗೊಳಿಸುವುದು ಮುಖ್ಯವಾದುದಲ್ಲವೇ?

ಸಿನಿಮಾದಲ್ಲಿ ಉತ್ಪ್ರೇಕ್ಷೆಗಳು ಇವೆ ನಿಜ. ಕಥೆಯೊಂದನ್ನು ಹೊಸಬೆಳಕಿನಲ್ಲಿ ಕಟ್ಟಿ ಕೊಡುವಾಗ ಜನರನ್ನು ಅದರ ಕಡೆಗೆ ಸೆಳೆಯಲು ಉತ್ಪ್ರೇಕ್ಷೆ ಮಾಡುವುದು ಸಹಜ ಹಾಗೂ ಅನಿವಾರ್ಯ ಕೂಡ. ಮಹಿಳೆಯರ ಪಾಲಿಗಂತೂ ಸಿನಿಮಾ ಮೊಗ ಚಿಟ್ಟುಹಿಡಿಸುವಷ್ಟು ಸಿಹಿಯಾಗಿದೆ ನಿಜ. ಆದುದರಿಂದಲೇ ಅದನ್ನು a pinch of salt ನೊಂದಿಗೆ ಸೇವಿಸೋಣ.

ಜೆಸ್ಸಿಕಾಳನ್ನು ಯಾರೂ ಕೊಲ್ಲಲಿಲ್ಲ. ನಾವೆಲ್ಲ ಸೇರಿ ಕೊಂದೆವು.



❑



ಮೌಖಿಕ ಪರಂಪರೆಯಲ್ಲಿ ಮಹಿಳಾಭಿವ್ಯಕ್ತಿ – ಒಂದು ಚಿಂತನೆ

• *ಬಿ.ಎನ್. ಸುಮಿತ್ರಾಬಾಯಿ*

ಪುರುಷ ಜಗತ್ತಿನೊಂದಿಗೆ, ಅದರ ಅಡಿಯಲ್ಲೆ ಇದ್ದು, ತಮ್ಮದೇ ಆದ ಉಳಿವಿನ ಉಪಾಯಗಳನ್ನು ಮಾನಸಿಕ ಪಲಾಯನದ ದಾರಿಗಳನ್ನು ಸೃಷ್ಟಿಸಿಕೊಂಡು ಬದುಕುವ ಸ್ತ್ರೀಲೋಕವು ಅವಜ್ಞೆಗೆ ಒಳಗಾಗಿರ ಬಹುದಾದರೂ ಅದು ಕಗ್ಗತ್ತಲ ಲೋಕ ಎನ್ನಲಾಗದು. ಪ್ರಧಾನಲೋಕದ ಚರಿತೆಯ ಸೂರ್ಯಕಿರಣಕ್ಕೆ ಈ ಅನುಭವಪ್ರಪಂಚ ಕಾಣದೆಯೇ ಹೋಗಿದೆ ಎಂದೇನೂ ಇಲ್ಲ. ಮುಖ್ಯವ್ಯವಸ್ಥೆಗೆ ಬೇಕೋ ಬೇಡವೋ, ಮಹಿಳೆಯರಿಗೆ ಮಾತ್ರ ತಮ್ಮ ದಮನಿತ ಬದುಕಿನ ಒಳಗೂ ಕಾಡಿರುವಂಥ ಭಾವನೆಗಳನ್ನು ಮಾತಿನಲ್ಲಿ ಹೊರಹಾಕದೆ ಇರುವುದು ಸಾಧ್ಯವಾಗಿಲ್ಲ. ಆದ್ದರಿಂದಲೇ ಶಿಕ್ಷಣ, ಸುಖಜೀವನ, ಬಿಡುವು, ಕಲಾಭಿಜ್ಞತೆಗಳ ಯಾವ ಸಾಧನೋಪಕರಣಗಳು ಇಲ್ಲದಿದ್ದರೂ ಜಗತ್ತು ತನ್ನ ಮಾತನ್ನು ಗುರುತಿಸದೆ ಪ್ರೋತ್ಸಾಹಿಸದೆ ಇದ್ದಾಗಲೂ ಜನಪದ ಸಾಹಿತ್ಯ ಮಹಿಳೆಯರಿಂದ ವಿಪುಲವಾಗಿ ಸೃಷ್ಟಿಯಾಗಿದೆ.

ಅವರ ಅಭಿವ್ಯಕ್ತಿ ಕಥೆಗಳಾಗಿ, ಹಾಡುಗಳಾಗಿ, ತ್ರಿಪದಿಗಳಾಗಿ ಹೊಮ್ಮಿಬಂದಿವೆ. ಅಂತರಂಗದಲ್ಲಿ ಸಹಜವಾಗಿ ಉಕ್ಕಿದ ಭಾವಗಳು ಹರೆಯದ ಬಯಕೆ, ಪ್ರೇಮದ ಕಾತರ, ತವರನ್ನು ಹೆತ್ತವರನ್ನು ಒಡಹುಟ್ಟಿದವರನ್ನು ಒಡನಾಡಿಗಳಾಗಿದ್ದವರನ್ನು ಅಗಲುವ ನೋವು, ಕಾಣದ/ಅಪರಿಚಿತ ಅತ್ತೆಮನೆಯ ಬಗೆಗಿನ ಭೀತಿ ಅಥವಾ ಗಂಡನ ಮನೆ ಜನರಿಗೆ ಸದಾ ತಾನು ಪರಕೀಯಳೇ ಆಗಿಬಿಡುವ ವ್ಯವಸ್ಥೆಯಿಂದ ಸೃಷ್ಟಿಯಾಗುವ ಹಿಂಸೆ, ಬವಣೆಗಳು, ತಾಯ್ತನದ ಸಂಭ್ರಮವೋ ಅದರ ಹಂಬಲ, ಹತಾಶೆ ಯಾತನೆಯೋ ಯಾವುದೂ ಆಗಿರಬಹುದು.

ಈ ಅನುಭವಗಳು ಕಥೆಯ ರೀತಿ ಹೊಮ್ಮಿಬಂದಿರಲಿ, ಕಾವ್ಯರೂಪದಲ್ಲೇ ಇರಲಿ, ಇವುಗಳ ಕೇಂದ್ರವ್ಯಕ್ತಿ ಯಾವಾಗಲೂ ಹೆಣ್ಣೇ. ತಮ್ಮೊಳಗಿನ ಏನೋ ಒಂದು ಬಲವಾದ ತುಡಿತವನ್ನು ಹೊರಹಾಕುವ ಕ್ರಿಯೆಯಲ್ಲಿ ಆಯಾ ಮಹಿಳೆಗೆ ತನ್ನತನದ ಅಭಿವ್ಯಕ್ತಿಗೆ ದಾರಿಯೊಂದು ತೆರೆದುಕೊಂಡಿರುತ್ತದೆ. ಹೀಗೆ ಹೆಪ್ಪುಗಟ್ಟಿದ ಭಾವಗಳು, ಬದುಕಿನ ಹಾಡುಗಳು ಕೆಲವರಲ್ಲಿ ಹಾಡುಗಳಾಗಿವೆ, ನುಡಿಯಾಗಿ, ನುಡಿಗಟ್ಟಾಗಿ, ಗಾದೆ, ಒಡಪುಗಳಾಗಿ, ಕಥೆಗಳಾಗಿ ಅವರೊಳಗಿನ ಅನಿಸಿಕೆಗಳೂ ವಿಚಾರಗಳೂ ಮೈ ಪಡೆದಿವೆ. ಈ ಪ್ರಕ್ರಿಯೆ ಅವರ ಸ್ವತ್ವದ ಬಿಡುಗಡೆಯ ಪ್ರಕ್ರಿಯೆಯೂ ಆಗಿರುತ್ತದೆ.



ತಮ್ಮೊಳಗಿನ ಬಹುಮಟ್ಟಿಗೆ ಅದುಮಿಡಲಾಗಿದ್ದ ತಳಮಳ, ಸಂತಸ, ಸಂಕಟ, ಆತಂಕ, ನೆಮ್ಮದಿಗಳನ್ನು ಈ ರೀತಿ ಬಿಡುಗಡೆ ಮಾಡಿಕೊಳ್ಳುವ ಪ್ರಯತ್ನದಲ್ಲಿ ಮಹಿಳೆಯರು ಯಾವ ಭಾಷೆಯನ್ನು ಬಳಸುತ್ತಾರೆ, ಅದರ ಲಯದ ವರಸೆಗಳೇನು? ಕಥೆ ಕಟ್ಟುವಾಗ ತಾವಿರುವ ನೈಜ ವಾಸ್ತವದ ಕಠೋರ ಸ್ಥಿತಿಗಳಿಗೆ ಯಾವ ಪರ್ಯಾಯ ಮೌಲ್ಯಗಳನ್ನು ಸೃಷ್ಟಿಸುತ್ತಾರೆ? ಎಂದು ಪರೀಕ್ಷಿಸಿ ನೋಡಿದಲ್ಲಿ ಎಷ್ಟೋ ಕುತೂಹಲಕರ ಸಂಗತಿಗಳನ್ನು ಕಾಣಬಹುದು. ಜನಪದ ಕಥೆಗಳಲ್ಲಿ, ಅದರಲ್ಲೂ ಮಹಿಳೆಯರೇ ಕಟ್ಟಿ ಹಾಕುತ್ತ ಬಂದಂಥ ಕೃತಿಗಳಲ್ಲಿ ತಮ್ಮ ಬದುಕಿನಲ್ಲಿ ತಾವು ಎಂದೂ ನಡೆಸಲು ಸಾಧ್ಯವೇ ಇರದಂಥ ರೀತಿಗಳಲ್ಲಿ ತಮ್ಮ ಕಥಾನಾಯಕಿಯರು ಜೀವನದ ಸಂಕಟಗಳಿಂದ ಪಾರಾಗುವಂತೆ ಕತೆಗಾರ್ತಿಯರು ಮಾಡಬಲ್ಲರು. ನಿರ್ಬಂಧಕರವಾದ ಎಷ್ಟೋ ಕಟ್ಟುಪಾಡುಗಳನ್ನು ತಾವು ಎದುರಿಸುವ ಧೈರ್ಯವಿರದೆ, ಮೂಕವಾಗಿ ಸಹಿಸಿಕೊಂಡಿದ್ದರೂ ಹಾಡು, ಕಥೆಗಳ ಒಳಗೆ ತಮ್ಮ ನಾಯಕಿಯರ ಮೂಲಕ ಅಂಥ ನಿರ್ಬಂಧಕಾರಿ ಮೌಲ್ಯಗಳ ಕೋಟೆಯನ್ನು ಒಡೆಯುವ ಸಾಧ್ಯತೆಯನ್ನು ಸೃಷ್ಟಿಸಲು ಅವರಿಗೆ ಸಾಧ್ಯವಾಗುತ್ತದೆ.

1. ಮಹಿಳೆಯರು ಮೊದಲು ಹೇಳಿದ ಕಥೆಗಳು ಮತ್ತು 2. ಮಹಿಳೆಯರನ್ನು ಕೇಂದ್ರವಾಗಿಟ್ಟುಕೊಂಡ ಕಥೆಗಳು – ಎಂಬ ಎರಡು ವಿಭಾಗಗಳಲ್ಲಿ ಜನಪದ ಮಹಿಳಾ ಕಥೆಗಳನ್ನು ಎ.ಕೆ. ರಾಮಾನುಜನ್ ವಿಭಜಿಸುತ್ತಾರೆ. ಈ ಪೈಕಿ ಎರಡನೆಯ ವಿಭಾಗದ ಕಥೆಗಳಲ್ಲಿ ತಾಯಿ–ಮಗಳು, ಅತ್ತೆ–ಸೊಸೆ, ತಂದೆ–ಮಗಳು, ಗಂಡ–ಹೆಂಡತಿ, ವೇಶ್ಯೆ ಮುಂತಾದ ಕೌಟುಂಬಿಕ ಹಾಗೂ ಅದರ ಹೊರಗಿನ ಸಂಬಂಧಗಳ ನಿರೂಪಣೆಗಳಿರುತ್ತವೆ. ಸ್ತ್ರೀದೇವತೆಗಳ ಪುರಾಣ ಕಥೆಗಳು, ಪತಿವ್ರತೆಯರು, ಸಾಧ್ವಿಯರ ಚರಿತೆಗಳು, ನಾಯಕಿಯರನ್ನು ಕುರಿತಂಥ ಹಾಡುಗಳು, ಮಹಿಳೆಯರೇ ಕಟ್ಟಿ ಹಾಡಿರುವ ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಕಥೆಗಳೂ ಈ ವಿಭಾಗಕ್ಕೆ ಸೇರಿಕೊಳ್ಳುತ್ತವೆ.

ಈ ಕಥೆಗಳು ಪುರುಷ ಪ್ರಧಾನ ವ್ಯವಸ್ಥೆಯ ಕಥೆಗಳು ಪ್ರತಿಪಾದಿಸುವಂಥ ಸ್ತ್ರೀಸಂಬಂಧಿತ ಮೌಲ್ಯಗಳಿಗೆ ಪ್ರತಿಯಾದ ಮೌಲ್ಯಗಳನ್ನು ಸೃಷ್ಟಿಸುತ್ತಿರುತ್ತವೆ. ಭಾರತದಾದ್ಯಂತ ಎಲ್ಲಾ ಪಂಥಗಳ ಧಾರ್ಮಿಕ ಚಿಂತನೆಗಳಲ್ಲಿ, ತಾತ್ತ್ವಿಕ ಚಿಂತನೆಗಳಲ್ಲೂ ಕರ್ಮಸಿದ್ಧಾಂತವನ್ನು ಸ್ತ್ರೀಜನ್ಮಕ್ಕೆ ಅನ್ವಯಿಸುವ ತರಹದ ನಂಬಿಕೆಗಳಿವೆ. ಹೆಣ್ಣಿನ ಶೀಲದ ಪಾವಿತ್ರ್ಯದ ಬಗೆಗಿನ ನಂಬಿಕೆಗಳಿವೆ. ಪುರುಷ ಪ್ರಧಾನ (ಸಂಸ್ಕೃತ ಭಾಷೆಯ) ಕಥಾಪರಂಪರೆ ಇಂಥ ಮೌಲ್ಯಗಳನ್ನೇ ಎತ್ತಿಹಿಡಿಯುತ್ತಾ ಪ್ರತಿಪಾದಿಸುತ್ತಿರುತ್ತದೆ.

ಆದರೆ ದಕ್ಷಿಣ ಭಾರತದ ಬೇರೆ ಬೇರೆ ಭಾಷೆಗಳಲ್ಲಿ ವಿವಿಧ ಆವೃತ್ತಿಗಳಿರುವ 'ದೀಪದ ಮಲ್ಲಿ' ಕಥೆಯು ಮುಖ್ಯವಾಗಿ ಹೆಣ್ಣಿನ ಬವಣೆಗಳ ಕಥೆಯಾದರೂ, ಕರ್ಮಸಿದ್ಧಾಂತಕ್ಕಿಂತ ಭಿನ್ನರೀತಿಯ 'ವಿಧಿ'ಯ ಪರಿಕಲ್ಪನೆಯ ಮೂಲಕ ಹೆಣ್ಣಿನ ಯಾತನೆಗಳ ಕಾರಣ ಹೇಳಲು ಯತ್ನಿಸುತ್ತದೆ. ಈ ಕಥೆಯ ನಾಯಕಿ ಮೂರು ಖಂಡುಗ ಮಲ್ಲಿಗೆ ಹೂಹಾಸಿ, ಮೂರು ಖಂಡುಗ ಹೂ ಹೊದೆಸಿ ಬೆಳೆಸಿದ್ದ ಸುಮಕೋಮಲೆ ರಾಜಕುಮಾರಿ, ರಾಜಕುಮಾರನೊಬ್ಬ ತಾನು ಅವಳನ್ನು ಆರು ಖಂಡುಗ ಹೂಹಾಸಿ, ಆರು ಖಂಡುಗ ಹೂ ಹೊದೆಸಿ ನೋಡಿಕೊಳ್ಳುತ್ತೇನೆಂದು ಭಾಷೆ ಕೊಟ್ಟು ಮದುವೆಯಾಗುತ್ತಾನೆ, ಅದೇ ರೀತಿ ನೋಡಿಕೊಳ್ಳುತ್ತಲೂ ಇರುತ್ತಾನೆ. ಹೀಗೆ ಆರಂಭದಲ್ಲಿ ರಾಜಕುಮಾರಿಯ ಬದುಕು ಅಕ್ಷರಶಃ ಸುಖದ ಹೂವಿನ ಹಾಸಿಗೆಯಾಗುತ್ತದೆ. ಆದರೆ 'ವಿಧಿಯಮ್ಮ' ಇದನ್ನು ಕಂಡು ಸಹಿಸಲಾರದೆ ಆ ರಾಜಕುಮಾರಿಯ ಕನಸಿನಲ್ಲಿ ಪ್ರತಿರಾತ್ರಿಯೂ ಬಂದು 'ಇಷ್ಟೆಲ್ಲ ಸಿರಿಸಂಪತ್ತು ನಿನಗಲ್ಲದೆ ಬೇರೆ ಯಾರಿಗೂ ಇಲ್ಲ, ಆದರೆ ಮೂರು ಖಂಡುಗ ಬತ್ತವನ್ನು ಯಾರು



ತಿನ್ನಬೇಕು?' ಎಂದು ಪ್ರಶ್ನಿಸಿ ಇವಳ ಹಾಸಿಗೆಯ ಮೇಲಿದ್ದ ಹೂವನ್ನೆಲ್ಲ ತೆಗೆದು ಮುಳ್ಳನ್ನು ಹಾಸಿಬಿಡುತ್ತಾಳೆ. ಆ ಮುಳ್ಳಿನ ಹಾಸಿಗೆಯ ಮೇಲೆ ಪ್ರತಿರಾತ್ರಿಯೂ ಮಲಗುತ್ತ ನೋವನ್ನು ಅನುಭವಿಸಿದರೂ ಆ ರಾಜಕುಮಾರಿ ಯಾರೊಂದಿಗೂ ತನ್ನ ಸಂಕಟ ವನ್ನು ಹೇಳಿಕೊಳ್ಳಲಾರದೆ ಮೂಕವಾಗಿ ನರಳುತ್ತ, ನವೆದು, ದಿನೇ ದಿನೇ ಕೃಶಳಾಗುತ್ತಾ ಹೋಗಿ ಬೆರಳಿನ ಗಾತ್ರದಷ್ಟಾಗಿ ಹೋಗುತ್ತಾಳೆ.

ಅವಳ ಗಂಡನಿಗೂ, ಅವನ ಪರಿವಾರಕ್ಕೂ ತಾವು ಎಷ್ಟೊಂದು ಮುಚ್ಚಟೆಯಿಂದ ನೋಡಿ ಕೊಳ್ಳುತ್ತಿದ್ದರೂ ಇವಳೇಕೆ ಹೀಗೆ ತೆಳ್ಳಗಾಗುತ್ತಿದ್ದಾಳೆ ಎಂಬುದೇ ಅರ್ಥವಾಗದ ವಿಷಯ. ಎಲ್ಲವೂ ತನ್ನ 'ಹಣೆಬರಹ,' 'ವಿಧಿ'ಯೇ ಹೀಗೆ ತನ್ನನ್ನು ಕಷ್ಟಕ್ಕೆ ದೂಡಿರುವಾಗ ಮನುಷ್ಯ ಮಾತ್ರರು ಏನು ತಾನೇ ಮಾಡಬಲ್ಲರು ಎಂದು ಚಿಂತಿಸಿ, ಅವಳು ಗಂಡನಿಗೂ ನಿಜವೇನೆಂದು ಹೇಳಿಕೊಳ್ಳುವುದಿಲ್ಲ. ಅವಳ ಸಂಕಟ ಮಿತಿಮೀರಿ ಹೋದಾಗ ಕೊನೆಗೆ ತನಗೆ ಚಿತೆಯೊಂದನ್ನು ಸಿದ್ಧಮಾಡು ಎಂದು ಗಂಡನನ್ನೇ ಹತಾಶೆಯಿಂದ ಬೇಡಿಕೊಳ್ಳುತ್ತಾಳೆ. ಅದೇ ರೀತಿ ಸಿದ್ಧವಾದ ಚಿತೆಯನ್ನು ಏರುತ್ತಾಳೆ. ಚಿತೆಗೆ ಬೆಂಕಿಯಿಟ್ಟ ಅವಳ ಗಂಡ ಉರಿಯೆದ್ದಾಗ ಅವಳು ಸತ್ತುಹೋದಳೆಂದು ಭಾವಿಸುತ್ತಾನೆ.


ಆದರೆ ಚಿತೆಯ ಜ್ವಾಲೆಯು ಮೇಲೆದ್ದು ಅವಳನ್ನು ಸುಡುವ ಮೊದಲೇ ದೊಡ್ಡ ಬಿರುಗಾಳಿ ಬೀಸತೊಡಗುತ್ತದೆ. ಅದು ಅವಳನ್ನು ಎತ್ತಿಕೊಂಡೊಯ್ದು ಯಾವುದೋ ಗವಿಯ ಬಳಿಗೆ ತಂದುಬಿಡುತ್ತದೆ. ಅಲ್ಲಿ ದೊಡ್ಡ ಬತ್ತದರಾಶಿಯನ್ನು ಕಂಡು ಅವಳಿಗೆ ವಿಧಿಯಮ್ಮ ಕನಸಲ್ಲಿ ಬಂದು ಹೇಳುತ್ತಿದ್ದುದು ಇದೇ ಬತ್ತವನ್ನು ಕುರಿತೇ ಇರಬೇಕು ಎಂಬುದು ಹೊಳೆಯುತ್ತದೆ. ಆ ಬತ್ತವನ್ನು ಸ್ವಲ್ಪ ಸ್ವಲ್ಪವಾಗಿ ಕುಟ್ಟಿ ಹಿಟ್ಟು ಮಾಡಿ ಆಹಾರ ತಯಾರಿಸಿಕೊಂಡು, ಅಲ್ಲೇ ವಾಸಿಸಲು ಆರಂಭಿಸುತ್ತಾಳೆ. ಮೂರ್ನಾಲ್ಕು ವರ್ಷಗಳೊಳಗೆ ಆ ಧಾನ್ಯವೆಲ್ಲ ಕರಗಿಹೋದಮೇಲೆ ಅವಳು ಮನುಷ್ಯರ ಸಹವಾಸವನ್ನು ಬಯಸಿ ಗುಹೆಯನ್ನು ಬಿಟ್ಟು ಬೆಟ್ಟದ ತಪ್ಪಲಿಗೆ ಬಂದು ಸೌದೆ ಕಡಿದು ಬದುಕುವ ಜನರ ಸಹಾಯಪಡೆದು ಒಂದು ಪಟ್ಟಣಕ್ಕೆ ಸೇರಿ ಅಲ್ಲಿ ಒಂದು ಮನೆಯಲ್ಲಿ ಕೆಲಸದ ಆಳಾಗಿ ಸೇರಿಕೊಳ್ಳುತ್ತಾಳೆ.

ಮನೆಯ ಒಡತಿಯ ಮಗುವಿಗೆ ತೊಡಿಸಲಾಗಿದ್ದ ಸರವೊಂದನ್ನು ಅಲ್ಲಿದ್ದ ಒಂದು ನವಿಲು ನುಂಗಿಬಿಡುತ್ತದೆ. ಮಗುವನ್ನು ಆಡಿಸಲೆಂದು ಕರೆದೊಯ್ದಿದ್ದಳೆಂದು ಇವಳೇ ಸರವನ್ನು ಕದ್ದಿರಬೇಕೆಂದು ಆಪಾದನೆ ಹೊರೆಸಿ, ನಾನಾ ರೀತಿ ನಿಂದಿಸಿ, ತಲೆಬೋಳಿಸಿಬಿಡುತ್ತಾರೆ. ಅಷ್ಟೇ ಅಲ್ಲ, ಇಡೀ ದಿನ ಮನೆಯ ಎಲ್ಲಾ ಕೆಲಸ ಮಾಡಿ ಮುಗಿಸಬೇಕು, ಆಮೇಲೆ ರಾತ್ರಿಹೊತ್ತು ತನ್ನ ಬೋಳು ನೆತ್ತಿಯ ಮೇಲೆ ಸೆಗಣಿ ತೊಪ್ಪೆಯನ್ನು ಹೊತ್ತುಕೊಂಡು ಅದರ ಮೇಲೆ ಹಣತೆ ಇಟ್ಟು, ಬತ್ತಿಯ ದೀಪ ಹೊತ್ತಿಸಿ, ಆ ಮನೆಗೆಲ್ಲಾ ಬೆಳಕು ನೀಡುತ್ತಾ ಇಡೀ ರಾತ್ರಿ ನಿಂತಿರಬೇಕೆಂದು ಅವಳಿಗೆ ಶಿಕ್ಷೆ ವಿಧಿಸುತ್ತಾರೆ.

ಮನೆಯೊಡತಿಯ ಸಹೋದರನು ಬೇರೆ ಊರಿನಿಂದ ಬಂದಿದ್ದ ಸಂದರ್ಭದಲ್ಲಿ ಅವನಿಗೆ ಊಟೋಪಚಾರಗಳೆಲ್ಲ ಮುಗಿದ ಮೇಲೆ ಒಡತಿಯ ಅಪ್ಪಣೆಯಂತೆ ಈಕೆ ದೀಪದ ಮಲ್ಲಿಯಾಗಿ ದೀಪಹೊತ್ತು ನಿಂತಿರುತ್ತಾಳೆ. ಆ ಮನುಷ್ಯ ತನ್ನ ಗಂಡನೇ ಎನ್ನುವುದು ಇವಳಿಗೆ ಗುರುತು ಹತ್ತಿದರೂ ಅವನಿಗೆ ಅವಳ ನೆನಪಾಗುವುದಿಲ್ಲ. ಕಾಲ ಕಳೆಯಲಿಕ್ಕಾಗಿ ತನಗೆ ಒಂದು ಕಥೆಯನ್ನಾದರೂ ಹೇಳು ಎಂದು ಅವನು ಅವಳಿಗೆ ಒತ್ತಾಯಮಾಡುತ್ತಾನೆ. ಅವಳು ತಾನು ಹುಟ್ಟಿದಾಗಿನಿಂದ ಇದುವರೆಗೆ ಪಟ್ಟ ಪಾಡುಗಳನ್ನೇ ಮತ್ತೊಬ್ಬಳ ಕಥೆಯ ರೀತಿಯಲ್ಲಿ ಹೇಳಲಾರಂಭಿಸುತ್ತಾಳೆ. ಹೇಳುತ್ತ ಹೇಳುತ್ತಾ ದುಃಖವುಕ್ಕಿ ಬಂದು ಅಳಲಾರಂಭಿಸುತ್ತಾಳೆ. ಆಗ ಗಂಡನಿಗೆ ಅವಳ ಗುರುತು ಸಿಕ್ಕುತ್ತದೆ. ಅವಳನ್ನು ಹೀಗೆ ದಂಡಿಸಿದ್ದಕ್ಕಾಗಿ ತಂಗಿಯನ್ನು ಚೆನ್ನಾಗಿ ಬೈದು, ಅವಳನ್ನು ತನ್ನ ಊರಿಗೆ ಕರೆದುಕೊಂಡು ಹೋಗುತ್ತಾನೆ. ಸತ್ತುಹೋದಳೆಂದು ಕೊಂಡಿದ್ದ ಸೊಸೆ ಜೀವಂತವಾಗಿ ಇದ್ದಾಳೆಂದು ಮನೆಜನರೆಲ್ಲ ಸಂತಸ ದಿಂದ ಬರಮಾಡಿಕೊಳ್ಳುತ್ತಾರೆ.

ಈ ಕಥೆಯಲ್ಲಿ ನಾಯಕಿ ಪಡುವ ಕಷ್ಟಗಳಿಗೆ ವಿಧಿಯ ಅಸಹನೆ ಅಥವಾ ಹಣೆಬರಹವೇ ಕಾರಣವೆಂದು ಕಲ್ಪಿಸಲಾಗಿದೆ. ಈ ವಿಧಿ ಮನುಷ್ಯ ತರ್ಕಕ್ಕೆ ಮೀರಿದ್ದು, ಯಾವುದೇ ಕಾರ್ಯ-ಕಾರಣ ವಿವೇಚನೆಗೆ ಎಟುಕಲಾರದಷ್ಟು ಬಲವಾದದ್ದು. ಅದನ್ನು ಒಪ್ಪಿಕೊಂಡು ಬಂದದ್ದನ್ನೆಲ್ಲ ಸಹಿಸುತ್ತ ಬದುಕುವುದರ ಹೊರತಾಗಿ ಮಾನವರಿಗೆ ಬೇರೆ ದಾರಿಯಿಲ್ಲ. ಕನ್ನಡದ ಈ ಜನಪದ ಮಹಿಳಾ ಕಥೆಯಲ್ಲಿರುವ 'ವಿಧಿವಾದ'ವು ಕರ್ಮಸಿದ್ಧಾಂತಕ್ಕಿಂತ ಭಿನ್ನವಾದದ್ದು. ಕಥೆಯ ನಿಜವಾದ ಕ್ರಿಯೆ ಇರುವುದು ಅದರ ಅಂತ್ಯದಲ್ಲಿ. ತನ್ನ ಜೀವನವನ್ನು ತನ್ನದಲ್ಲ, ಬೇರೆ ಯಾರದೋ ಎಂಬ ಹಾಗೆ ನೋಡಬಲ್ಲ ಕಥೆಯಾಗುವವರೆಗೂ ಕಾಯುತ್ತಾಳೆ ನಾಯಕಿ. ಹಾಗೆ ಬಾಳನ್ನೇ ಹೊರನಿಂತು ನೋಡಿ ಕಥೆಯನ್ನಾಗಿ ಮಾಡಿ ಒಬ್ಬ ಯೋಗ್ಯ ಶ್ರೋತೃವಿಗೆ ಅದನ್ನು ಹೇಳುವ ಮೂಲಕ ಅದುವರೆಗಿದ್ದ ತನ್ನ ಮಾನಸಿಕ ಯಾತನೆಗಳಿಂದ ಅವಳು ಬಿಡುಗಡೆ ಪಡೆದುಕೊಳ್ಳುತ್ತಾಳೆ. ಅದೇ ಸಮಯಕ್ಕೆ ಸರಿಯಾಗಿ ನಿಜ ಜೀವನದಲ್ಲೂ ಕಷ್ಟಗಳಿಂದ ಅವಳಿಗೆ ವಿಮೋಚನೆ ಆಗುತ್ತದೆ.

ಈ ಮಹಿಳಾ ಜನಪದ ಕಥೆಯಲ್ಲಿ ಹೆಣ್ಣು ಪಡುವ ಯಾತನೆಗಳು ಹಿಂದೆಂದೋ ಮಾಡಿದ ಪಾಪಕರ್ಮವನ್ನು ಸವೆಸುವ ಕ್ರಿಯೆಗಳಲ್ಲ; ಆ ಪಾಪ ಪ್ರಾಯಶ್ಚಿತ್ತದಿಂದ ಪಾಠ ಕಲಿತು ತನ್ನನ್ನು ತಿದ್ದಿಕೊಳ್ಳುವ ಅಗತ್ಯವೂ ಅವಳಿಗೆ ಇಲ್ಲಿ ಇಲ್ಲ. ಯಾವ ತರ್ಕವೂ ವಿವರಿಸಲಾರದಂಥ ಅನೂಹ್ಯವಾದ ವಿಧಿಯ ನಿಗೂಢ ಶಕ್ತಿಯನ್ನು ಅವಳ ಯಾತನೆ ಸೂಚಿಸುತ್ತದೆ. ಅದನ್ನೇ ವಾಸ್ತವವೆಂದು ಒಪ್ಪಿ ಅನುಭವಿಸು ವುದರ ಹೊರತು ದಾರಿಯಿಲ್ಲ. ದುಃಖ ದುಮ್ಮಾನಗಳು ಹೇಗೆ ಒಳಗೇ ಅದುಮಿಟ್ಟಕೊಂಡರೆ, ಆ ವ್ಯಕ್ತಿಗೆ ಅಪಾಯಕಾರಿಯಾಗುತ್ತವೆಯೋ ಹಾಗೆಯೇ ಒಳಗೇ ಅದುಮಿಟ್ಟುಕೊಂಡ ಕಥೆಗಳೂ ವಿನಾಶಕಾರಿಯೇ ಆಗಬಲ್ಲವು. ಆದ್ದರಿಂದ ಕತೆಗಳನ್ನು ಹೇಳಬೇಕು. ಅವಕ್ಕೆ ತಮ್ಮದೇ ಆದ ಜೀವವಿರುತ್ತದೆ. ಹೇಳದೆ ಹೋದರೆ ಅವು ಕೋಪಗೊಂಡು ರೂಪಾಂತರಹೊಂದಿ ಆ ವ್ಯಕ್ತಿಯ ಮೇಲೆ ಸೇಡು ತೀರಿಸಿಕೊಳ್ಳುತ್ತವೆ ಎಂಬುದನ್ನು ಸೂಚಿಸುವ ಹಲವಾರು ಜನಪದ ಮಹಿಳಾ ಕಥೆಗಳಿವೆ.



ಮುಖ್ಯ ಸಾಹಿತ್ಯ ಪರಂಪರೆಯ ರಾಮಾಯಣ, ಮಹಾಭಾರತ, ಪುರಾಣಗಳಿಗೆ 'ಫಲಶ್ರುತಿ'ಯೆಂಬ ಒಂದು ಗುರಿಯಿರುತ್ತದೆ. ಕೇಳುಗರನ್ನು/ಓದುಗರನ್ನು ಪ್ರಭಾವಿಸಿ, ಅವರಿಗೆ ಪುಣ್ಯವನ್ನು ಗಳಿಸಿಕೊಡುವ ಫಲಶಕ್ತಿ ಇವುಗಳಿಗಿದೆ ಎಂದು ಬೋಧಿಸಲಾಗುತ್ತದೆ. ಆದರೆ ಜನಪದ ಮಹಿಳಾ ಕಥೆಗಳು ಹೊರಗಿನ ಯಾವುದೇ ಇಂಥ ಫಲಶ್ರುತಿ ಹೇಳುವುದಿಲ್ಲ. ಬದಲಾಗಿ ಕಥೆಯೊಳಗಿನ ಮಹಿಳೆಯ ಬದುಕಿನ ಮೂಲಕ, ಅದರೊಳಗೇ ಕಥೆಯ ಫಲವೂ ಇರುತ್ತದೆ ಎಂಬುದೇ ಇಲ್ಲಿರುವ ವೈಶಿಷ್ಟ್ಯ. ನಾಯಕಿಯ ಬಿಡುಗಡೆಯೇ ಕಥೆಯ ಫಲವೇ ಹೊರತು ಪುಣ್ಯ-ಪಾಪಗಳ ಹೊರಗಿನ ಗೊಡವೆ ಇವುಗಳಿಗೆ ಬೇಕಿಲ್ಲ. ವ್ಯಕ್ತಿಯ ಅಂತರಂಗದಲ್ಲೇ ಆಗುವ ಅತ್ಯಂತ ವೈಯಕ್ತಿಕ ವಾದ ಪರಿವರ್ತನೆಯನ್ನು ಈ ಕಥೆಗಳು ಹೇಳುತ್ತವೆ. ಪಾತಿವ್ರತ್ಯ, ತಾಯ್ತನ, ಸಾಧ್ವಿಗೃಹಿಣೀತನ ಮೊದಲಾದ ಸ್ತ್ರೀಮೌಲ್ಯಗಳನ್ನು ಗೇಲಿಮಾಡುವ ರೀತಿಯಲ್ಲಿ ಸರ್ಪರಾಜನ ಪ್ರೇಮಕ್ಕೆ ಪಾತ್ರಳಾಗುವ ಗೃಹಿಣಿಯೊಬ್ಬಳು ವೇಶ್ಯೆಯ ವಶನಾಗಿದ್ದ ಗಂಡನನ್ನೂ ಹಿಂದಕ್ಕೆ ಪಡೆದುಕೊಂಡು ಸಂತಾನಸುಖವನ್ನೂ ಹೊಂದುವ ಜನಪದ ಕಥೆ ಎಲ್ಲರಿಗೂ ಸುಪರಿಚಿತವಾದದ್ದು. (ಈ ಕಥೆಯೇ ಗಿರೀಶ ಕಾರ್ನಾಡರ 'ನಾಗಮಂಡಲ'ಕ್ಕೆ ಆಧಾರ)

ಜನಪದ ಮಹಿಳಾ ಸಾಹಿತ್ಯ ಬಹುವಿಶಾಲವಾದದ್ದು. ಹೆಣ್ಣಿನ ಬದುಕನ್ನು ಸಮಾಜವು ಒಪ್ಪುವ ಮತ್ತು ಅವಳನ್ನೂ ಒಪ್ಪಿಸಿಟ್ಟಿರುವ ರೀತಿನೀತಿಗಳ ನಡುವಿನ ತಾಕಲಾಟಗಳಲ್ಲಿ ಮಹಿಳಾ ಅನುಭವದ ದ್ರವ್ಯ ರೂಪುಗೊಂಡಿರುತ್ತದೆ. ಜನಪದ ಮಹಿಳಾ ಕಥೆಗಳು ಆ ಮೌಲ್ಯಗಳನ್ನು ಒಪ್ಪಿದ್ದೂ ಒಳಗೇ ಮಹಿಳೆ ಅನುಭವಿಸುವ ತಾಕಲಾಟಗಳನ್ನು ಅಭಿವ್ಯಕ್ತಿಸುತ್ತವೆ. ದಮನಿತ ಭಾವನೆಗಳನ್ನು ಅನುಭವಗಳನ್ನು ಸೃಜನಾತ್ಮಕವಾಗಿ ಕಥೆಯಾಗಿಸಿ ಹೊರಹಾಕುವ ಕ್ರಮದಲ್ಲೇ ಪರ್ಯಾಯ ಸಂಸ್ಕೃತಿಯೊಂದಕ್ಕಾಗಿ ತವಕ ತುಡಿತಗಳೂ ಸೇರಿರುತ್ತವೆ. ಹಲವು ಸಂದರ್ಭದಲ್ಲಿ ನಿಜ ಜೀವನದ ದುಃಖ ಯಾತನೆ ಬೇಸರ, ನೀರಸತೆಗಳಿಂದ ಪಲಾಯನ ಮಾಡಿ, ಕಲ್ಪನೆಯಲ್ಲಿ ಸುಖದ ಸಾಧ್ಯತೆಯೊಂದನ್ನು ಕಟ್ಟಿಕೊಳ್ಳುವ ಉಪಾಯವೂ ಇಂಥ ಕಥೆಗಳಲ್ಲಿರುವುದು ಸಾಧ್ಯ. ಈ ಬಗ್ಗೆ ಇನ್ನಷ್ಟು ಅಧ್ಯಯನಗಳು ನಡೆಯಬೇಕಾಗಿದೆ.

(ಈ ಲೇಖನಕ್ಕೆ ಪ್ರೇರಣೆ : ಎ.ಕೆ. ರಾಮಾನುಜನ್ ಅವರ 'Towards a counter system : Women's Tales ಎಂಬ ಲೇಖನ ನೋಡಿ: Gender, Genre and power in south Asian Expressive Traditions: Edited by Arjun Appadurai, Frank J. Korom & Margaret A mills, Motilal Banarsidas, Delhi-1994).

❑



ವೈಫ್ ಬೀಟಿಂಗ್

■ ಎಸ್. ಮಾಲತಿ ಸಾಗರ

ಬ್ರಿಟನ್ನಿನ ಹೈಕಮಿಷನರ್ ಕಛೇರಿಯಲ್ಲಿ ಉನ್ನತ ಹುದ್ದೆಯಲ್ಲಿರುವ ಅನಿಲ್‌ವರ್ಮಾ, ಪತ್ನಿ ಪರೋಮಿತಾಳನ್ನು ಕ್ಷುಲ್ಲಕ ಕಾರಣಕ್ಕಾಗಿ ಥಳಿಸಿದ ಸುದ್ದಿ ಈಗ ಬಹಳ ಪ್ರಚಾರದಲ್ಲಿದೆ. ಇದೇಕೆ ಅಷ್ಟು ದೊಡ್ಡ ಸುದ್ದಿಯಾಯಿತು? ಘಟನೆ ಬ್ರಿಟನ್ನಿನಲ್ಲಿ ನಡೆಯಿತೆಂದೇ? ಅಥವ ಥಳಿಸಿದವನು ಉನ್ನತ ಅಧಿಕಾರಿಯೆಂದೇ? ಥಳಿಸಿದ್ದನ್ನು ಅಕಸ್ಮಾತ್ತಾಗಿ ಪಕ್ಕದ ಮನೆಯವರು ನೋಡಿದ್ದರಿಂದ ಪೊಲೀಸರಿಗೆ ದೂರು ಹೋಯಿತು. ಭಾರತದಲ್ಲಿ ಇಂಥ ಘಟನೆಗಳು ಎಷ್ಟು ಮನೆಗಳಲ್ಲಿ ನಡೆಯುತ್ತಿಲ್ಲ? ಆದರೆ, ಅವ್ಯಾವುವೂ ಸುದ್ದಿಗಳಾಗುವುದಿಲ್ಲ, ಪೊಲೀಸರಿಗೆ ದೂರೂ ಹೋಗುವುದಿಲ್ಲ. ಇಂತಹ ಪುರುಷನ ಹಿಂಸೆಗೆ ಕಾರಣಗಳೇನು?

ಹೆಣ್ಣನ್ನು ದೇವತೆಯೆಂದು ಪೂಜಿಸುವ ನಮ್ಮ ಸಮಾಜದಲ್ಲೇ, ಆಕೆ ಕೀಳೆಂಬ ಮನೋಭಾವವೂ ತುಂಬಿಕೊಂಡಿದೆ. ಇದು ಎಲ್ಲ ವರ್ಗ, ಜಾತಿಗಳಲ್ಲಿ ಪ್ರಚಲಿತವಿರುವ ಅಭಿಪ್ರಾಯ. ಹೆಣ್ಣನ್ನು ಕೀಳು ಎಂದು ಗಂಡಸರಷ್ಟೇ ಪರಿಭಾವಿಸುವುದಿಲ್ಲ, ಹೆಣ್ಣೂ ತನ್ನನ್ನು ತಾನು ಕೀಳು ಎಂದುಕೊಳ್ಳುತ್ತಾಳೆ. ಇದೇ ಗಂಡಸರ ದಬ್ಬಾಳಿಕೆಗೆ, ಹಿಂಸೆಗೆ ಮೊದಲ ಕಾರಣ. ಹೆಣ್ಣು ಅನಕ್ಷರಸ್ತೆಯೇ ಆಗಿರಲಿ, ವಿದ್ಯಾವಂತಳಾಗಿರಲಿ, ಗೃಹಿಣಿಯಾಗಿರಲಿ, ಉದ್ಯೋಗಸ್ಥೆ ಯಾಗಿರಲಿ - ಯಾವುದೇ ಸಂದರ್ಭದಲ್ಲೂ ಅವಳನ್ನು ದೈಹಿಕ ಹಿಂಸೆಗೆ ಒಳಪಡಿಸಲಾಗುತ್ತದೆ. ಹೆಣ್ಣು ಗಂಡನಿಗಿಂತ ಸಮರ್ಥಳಾಗಿದ್ದರಂತೂ ಕೇಳುವುದೇ ಬೇಡ... ಆಗ ತನ್ನ ಹೆಂಡತಿಯ ಮೇಲೆ ಯಾವುದಾದರೂ ರೀತಿಯಲ್ಲಿ ಹಿಡಿತ ಸಾಧಿಸಲು ಗಂಡ ದೈಹಿಕ ಹಿಂಸೆಗೆ ಮೊರೆಹೋಗುತ್ತಾನೆ. ಮದುವೆಯ 'ಪವಿತ್ರ' ಬಂಧನದ ಅರಿವಿರುವ ಹೆಣ್ಣು ಬಾಯಿ ಮುಚ್ಚಿಕೊಂಡು ಎಲ್ಲವನ್ನೂ ಸಹಿಸುತ್ತಾಳೆ. ಮಕ್ಕಳಿದ್ದರಂತೂ ಮುಗಿದೇ ಹೋಯಿತು... ತನ್ನ ಮಗುವಿಗೊಂದು ತಂದೆ ಬೇಕಲ್ಲ ಎಂದು ಹೆಣ್ಣು ಕ್ಷಮಾಯಾಧರಿತ್ರಿಯಾಗುತ್ತಾಳೆ.

ಅಸಹಾಯಕ ತಾಯಂದಿರನ್ನು ಹೊಡೆಯುವ ಮಕ್ಕಳಿದ್ದಾರೆ, ಸೊಸೆಯಂದಿರನ್ನು ಹೊಡೆಯುವ ಅತ್ತೆಯರಿದ್ದಾರೆ, ವಿಧವೆಯರನ್ನು ಹೊಡೆಯುವ ಮೈದುನರಿದ್ದಾರೆ. ಆದರೆ, ಈ ಎಲ್ಲಕ್ಕಿಂತ ವಿಭಿನ್ನವಾದದ್ದು - ಗಂಡ ಹೆಂಡತಿಗೆ ಹೊಡೆಯುವುದು. ಇಲ್ಲಿ ಹೆಣ್ಣಿನ ಮನೋಲೋಕದಲ್ಲಿ ಅಲ್ಲೋಲಕಲ್ಲೋಲವುಂಟಾಗುತ್ತದೆ, ಹೆಣ್ಣಿನ ಕನಸುಗಳು ನುಚ್ಚು ನೂರಾಗುತ್ತವೆ ಮತ್ತು ಆಕೆ ಪೂರ್ಣ ವಿಚಲಿತಳಾಗುತ್ತಾಳೆ. ಭಾವನಾತ್ಮಕತೆ ಮತ್ತು ಲೈಂಗಿಕತೆಗಳು ಮದುವೆಯ ಸಂದರ್ಭದಲ್ಲಿ ಹೆಣ್ಣು-ಗಂಡನ್ನು ಬೆಸೆದಿರುತ್ತವೆ. ಆದ್ದರಿಂದಲೇ ವೈಫ್ ಬೀಟಿಂಗ್ ಬಿರುಗಾಳಿ ಯನ್ನೆಬ್ಬಿಸುತ್ತದೆ.

ಪುರುಷನ ಅಹಂಕಾರವೇ ಎಲ್ಲ ಹಿಂಸೆ, ದಬ್ಬಾಳಿಕೆಗೆ ಕಾರಣ. ಹೀಗೆ, ಶತಮಾನಗಳಿಂದ ತುಳಿಯಲ್ಪಟ್ಟ ಹೆಣ್ಣು ತನ್ನ ದನಿ ಎತ್ತಬೇಕಾಗಿದೆ. ಸಮಾಜದಲ್ಲಿ ಬೇರು ಬಿಟ್ಟಿರುವ ಪುರುಷ ಪ್ರಧಾನತೆ ಪುರುಷನಿಗೆ ಹಿಂಸೆಯ ಹಕ್ಕನ್ನೂ ಕೊಡುತ್ತದೆ. ಹೆಣ್ಣು ಕೂಡ ಕಾಮ, ಕ್ರೋಧ, ಮದ, ಮತ್ಸರಗಳ ಗುಣಗಳಿಂದ ಕೂಡಿದ ಮನುಷ್ಯಳು. ಆಕೆ ದೇವತೆಯಂತಿದ್ದಾಗ ಗಂಡು ಅವಳನ್ನು ಪೂಜಿಸುತ್ತಾನೆ ಮತ್ತು ಮೋಸವನ್ನೂ ಮಾಡುತ್ತಾನೆ. ಆದರೂ ಹೆಣ್ಣಿನ ಕಾರಣದಿಂದಲೇ ಮದುವೆ ಸ್ಥಿರವಾಗಿರುತ್ತದೆ. ಆಕೆ ಸೊಲ್ಲೆತ್ತಿದರೆ ಹಿಂಸೆ, ಅವಮಾನ, ವಿಚ್ಛೇದನ, ಒಂಟಿತನ.

ಗಂಡು-ಹೆಣ್ಣು ಸಂಗಾತಿಗಳಾಗಿರುವುದು ಎಲ್ಲೂ ಕಾಣುತ್ತಿಲ್ಲ. ಬದುಕನ್ನು ಸಂತೋಷದಿಂದ ಅನುಭವಿಸಬೇಕಾದರೆ ಸಾಂಗತ್ಯವೂ ಬೇಕು, ಸ್ನೇಹವೂ ಬೇಕು. ಇದಕ್ಕೆ ಪುರುಷನ ಅಹಂಕಾರ ಅಡ್ಡಿ ಬರುತ್ತದೆ. ಹೆಣ್ಣು-ಗಂಡಿನ ಸಮಾನತೆ ಸಾಧಿಸಬೇಕಾದರೆ - ಹೆಣ್ಣೂ ಮನುಷ್ಯಳು ಎಂಬ ಭಾವನೆಯನ್ನು ಚಿಕ್ಕಂದಿನಿಂದಲೇ ಗಂಡಿನಲ್ಲಿ ತುಂಬಬೇಕಾಗುತ್ತದೆ. ನಮ್ಮ ಪಠ್ಯಕ್ರಮದಲ್ಲಿ ಮಹಿಳಾ ಅಧ್ಯಯನವೂ ಒಂದು ಕಡ್ಡಾಯ ವಿಷಯವಾಗಬೇಕು. ಎಲ್ಲರಿಗೂ ವಿದ್ಯಾಭ್ಯಾಸ ಸಿಗುವಂತಾಗಬೇಕು ಆಗ, ಬೆಳಕು ಮೂಡಬಹುದೇನೋ...

❑

ನೀವೂ ಓದಿ

ಅಪರೂಪದ 'ತುಂಗಾ'


● ಎಚ್.ಎಸ್. ಸತ್ಯನಾರಾಯಣ

ವಿ. ಗಾಯತ್ರಿ ಸಂವೇದನಾಶೀಲ ಮನಸ್ಸಿನ ಲೇಖಕಿ. 'ತುಂಗಾ' ಎಂಬ ಕಾದಂಬರಿಯ ಮೂಲಕ ನಮ್ಮ ಮಕ್ಕಳ ಪ್ರಾಥಮಿಕ ಶಿಕ್ಷಣದ ಬಗೆಗೆ ಕಾಳಜಿ ಇರುವವರೆಲ್ಲರೂ ಓದಿ, ಚಿಂತಿಸಲು ಆಹ್ವಾನಿಸುತ್ತಾರೆ. ನಮ್ಮ ಶಿಕ್ಷಣ ಕ್ರಮವನ್ನು ತಳಮಟ್ಟದಿಂದ ಬದಲಾಯಿಸಬೇಕಾದ ಅಗತ್ಯವನ್ನು ಈ ಕಾದಂಬರಿ ಒತ್ತಿ ಹೇಳುತ್ತದೆ. ಮಕ್ಕಳ ಗುಣ-ಸ್ವಭಾವಕ್ಕೆ ಅನುಗುಣವಾದ 'ಕಲಿಕೆ' ಮಾತ್ರವೇ ನಿಜವಾದ 'ಶಿಕ್ಷಣ' ಎಂಬ ಸತ್ಯ ಪ್ರತಿಪಾದನೆಯು ಈ ಕಾದಂಬರಿಯ ಮುಖ್ಯ ಅಶಯವಾಗಿದೆ. ಬಲವಂತದಿಂದ ನೀಡುವ ಶಿಕ್ಷಣದಿಂದ ಅಕ್ಷರಸ್ಥರನ್ನು ಸೃಷ್ಟಿಸಬಹುದೇ ಹೊರತು, ವಿದ್ಯಾವಂತರನ್ನಲ್ಲ. ನಾವು ರೂಪಿಸಬೇಕಿರುವುದು ಅಕ್ಷರಸ್ಥ ಸಮಾಜವನ್ನಲ್ಲ, ವಿದ್ಯಾವಂತರದು. 'ಕಲಿಕೆ' ಎಂಬುದು ಕಠಿಣ ಶಿಕ್ಷೆಯಂತಾಗಬಾರದು, ಪಾಠ ಎಂಬುದು ಆಟದಂತಿರಬೇಕು ಎಂಬೆಲ್ಲಾ ಚಿಂತೆಯನ್ನು ಒಳಗಿರಿಸಿಕೊಂಡಿರುವ ಈ ಕೃತಿ 'ಶಿಕ್ಷಣ'ದ ಬಗೆಗೆ ಕಾಳಜಿಯುಳ್ಳವರೆಲ್ಲರಿಗೂ ಹಲವು ಒಳನೋಟಗಳನ್ನು ನೀಡುತ್ತದೆ. ಪ್ರತಿಯೊಬ್ಬ ಪಾಲಕರೂ ಓದಿ-ಚಿಂತಿಸಬೇಕಾದ ಅಪರೂಪದ ಕೃತಿಯೊಂದನ್ನು ಕನ್ನಡಕ್ಕೆ ನೀಡುವ ಮೂಲಕ ವಿ. ಗಾಯತ್ರಿ ಅಭಿನಂದನಾರ್ಹವಾದ ಕೆಲಸ ಮಾಡಿದ್ದಾರೆ.

ತುಂಗಾ, ಮಾಂಡವಿಮೇಡಂ, ತುಂಗಾಳ ತಾಯಿ ಎಲ್ಲರೂ ನೆನಪಿನಲ್ಲುಳಿದು ಕಾಡುವ ಪಾತ್ರಗಳು. ಒಂದನೇ ಕ್ಲಾಸಿನಲ್ಲಿ ಓದುವ ತುಂಗಾ ತನ್ನ ಸುತ್ತಲ ಜಗತ್ತಿನೊಂದಿಗೆ ಇಟ್ಟುಕೊಂಡಿರುವ ಅನುಸಂಧಾನ ಅಚ್ಚರಿ ಮೂಡಿಸುವಂಥದ್ದು. ಕಣ್ಣಿಗೆ ಕಾಣುವ ಎಲ್ಲದರ ಬಗ್ಗೆಯೂ ಮುಗ್ಧ ಮನಸ್ಸಿನ ವಿಸ್ಮಯ, ಬೆರಗು, ಮುಕ್ತ ಮನಸ್ಸಿನಿಂದ ಎಲ್ಲ ಪ್ರಯೋಗಗಳಿಗೆ, ಹೊಸತನಕ್ಕೆ ತೆರೆದುಕೊಳ್ಳುವ ಬಗ್ಗೆ ಪುಟಿದೇಳುವ ಚಂಡಿನಂತಹ ಉತ್ಸಾಹ ಎಲ್ಲವೂ 'ತುಂಗಾ'ಳ ಪಾತ್ರವನ್ನು ಕಡೆದಿಡುವ ಬಗೆ ಅತ್ಯಂತ ಸೊಗಸಾಗಿ ಮೂಡಿಬಂದಿದೆ.

ಸಹಜ ಕುತೂಹಲ, ಬಾಲ್ಯದ ತುಂಟಾಟ, ಪ್ರಶ್ನಿಸುವ ಮನೋಭಾವಗಳಿಂದ 'ತರಲೆ'ಯಾಗಿ ಶಿಕ್ಷಕರಿಂದ 'ಶಾಲೆಗೆ ಹೊರೆ' ಎನ್ನಿಸಿಕೊಳ್ಳುವ ತುಂಗಾ ಅಲ್ಲಿಂದ ಹೋಗಿ ಸೇರಿಕೊಳ್ಳುವ ಶಾಲೆ "ಅವಳಿಗೆ ಸಿಕ್ಕಂಥ ಶಾಲೆ ನಮಗೇಕೆ ಸಿಗಲಿಲ್ಲ?" ಎನ್ನಿಸುವಂಥದ್ದು ಮಾತ್ರವಲ್ಲ, ನಮ್ಮ ಮಕ್ಕಳಿಗಾದರೂ ಸಿಗಲಿ ಎಂದು ಪ್ರತಿಯೊಬ್ಬರೂ ಬಯಸುವಂಥದ್ದು. ತಿರಸ್ಕೃತಳಾದ ಅವಳು ಶಾಲೆಯ ಅಧ್ಯಾಪಕರ ಪ್ರಕಾರ ಜಾಮಿಟ್ರಿ ಬಾಕ್ಸ್‌ನ್ನು ಸದಾ ತೆಗೆಯುವುದು-ಮುಚ್ಚುವುದು ಮಾಡುತ್ತಿರುವುದೇ ಮಹಾಪರಾಧ! ತುಂಗಾಳ ಸೋದರತ್ತೆಯ ಮಗ ಶಿವಮೊಗ್ಗದಿಂದ ತಂದುಕೊಡುವ ಆ ಬಣ್ಣದ ಪೆಟ್ಟಿಗೆ ತುಂಗಾಳ ಪಾಲಿಗೆ ಹೊಸಲೋಕ. ಬಾಲ್ಯ ಸಹಜ ಕುತೂಹಲದಿಂದ ತನ್ನ ಸರ್ವಸ್ವವೆನಿಸಿದ ಅದನ್ನು ಮುಚ್ಚಿ ತೆಗೆದು ಮಾಡುವುದೇ ಅವಳ ಉಪಾಧ್ಯಾಯರಿಗೆ ಮಹಾಕಿರಿಕಿರಿ! ಇಂಥ ಮನಸ್ಸಿನ ಉಪಾಧ್ಯಾಯರಿಂದ ನಮ್ಮ ಮಕ್ಕಳು ಯಾವ ನೀತಿ ಪಾಠ ಕಲಿಯಬಲ್ಲರೆಂಬುದು ಚಿಂತೆಗೀಡು ಮಾಡುವ ವಿಚಾರವಲ್ಲವೇ? ಶಿಕ್ಷಕರನ್ನು ಆಯ್ಕೆ ಮಾಡಿ ಕಳಿಸುವಾಗ ಅವರ ಜಾತಿ, ಅಂಕಗಳಿಕೆಯನ್ನು ಮಾತ್ರ ಮಾನದಂಡವಾಗಿರಿಸಿಕೊಳ್ಳುವ ವ್ಯವಸ್ಥೆ ವಾತ್ಸಲ್ಯಮಯಿ ಹೃದಯವಂತರನ್ನು ನೇಮಿಸುವ ಹೊಣೆಯಿಂದ ತಪ್ಪಿಸಿಕೊಂಡಂತಲ್ಲವೇ? ಕಡ್ಡಾಯಶಿಕ್ಷಣವೆಂಬ ಘೋಷಣೆಯಿಂದ ಮಕ್ಕಳ ಹೃದಯಕ್ಕೆ ವಿವೇಚನೆಗೆ ಶಿಕ್ಷಣ ನೀಡುವಂತಹ ಶಿಕ್ಷಕರನ್ನು ನೇಮಿಸಿದಾಗ ಮಾತ್ರ ನಮ್ಮ ಮಕ್ಕಳ ಬದುಕು ಹಸನಾಗಬಲ್ಲದೆಂಬ ದೂರಾಲೋಚನೆ ಯಾದರೂ ಇರಬೇಡವೆ?

ಅಷ್ಟೇನೂ ವಿದ್ಯಾವಂತಳಲ್ಲ; ಆದರೆ ಹೃದಯ-ವಿವೇಚನೆಯುಳ್ಳ ತುಂಗಾಳ ತಾಯಿ 'ಇಂತಹ' ಶಾಲೆಯಿಂದ ಮಗಳನ್ನು ಮುಕ್ತಗೊಳಿಸಲು ತೀರ್ಮಾನಿಸುವುದು ನಿಜಕ್ಕೂ ಆಶಾದಾಯಕ. ತುಂಗಾಳ ತಾಯಿ ಎಲ್ಲ ತಂದೆ-ತಾಯಿಯರಿಗೂ ಆದರ್ಶಪ್ರಾಯಳು. ಅವಳೆಂದೂ ತನ್ನ ಮಗಳ ತುಂಟಾಟವನ್ನು, ವಿಸ್ಮಯ, ಬೆರಗುಗಳನ್ನು ನಿರ್ಲಕ್ಷ್ಯದಿಂದ ಚಿವುಟಿ ಹಾಕಿದವಳಲ್ಲ. ಬದಲಿಗೆ ಪ್ರೋತ್ಸಾಹಿಸಿ, ನೀರೆರೆದವಳು. ಮನೆಗೆಲಸ ಬೆಟ್ಟದಷ್ಟಿದ್ದರೂ ಮಗಳಿಗಷ್ಟು ಸಮಯ ನೀಡುವ, ತನ್ನ ಜವಾಬ್ದಾರಿಗೆ ಎಂದೂ ಊನ ಬಾರದಂತೆ ನಡೆದುಕೊಳ್ಳುವ ತಾಯಿಯನ್ನು ಪಡೆದ ತುಂಗಾ ಅದೃಷ್ಟವಂತಳು. ಮಗಳು "ನಾ ಓದಿ ದೊಡ್ಡೋಳಾದ್ಮೇಲೆ ಬಸ್ಸಿನ ಕಂಡಕ್ಟರ್ ಆತೀನಿ" ಎಂದು ತುಂಗಾ ಹೇಳಿದರೆ ತಾಯಿ ನಿರಾಶಳಾಗುವುದಿಲ್ಲ. ಟಿಕೇಟ್ ತುಂಬಿದ ಪೆಟ್ಟಿಗೆ ತುಂಗಾಳಿಗೆ ಆಕರ್ಷಕವಾಗಿ ಕಂಡಿರುವುದನ್ನು ಮನಗಾಣುವ ಆ ತಾಯಿ "ನೀ ಪೊಲೀಸ್ ಇನ್ಸ್‌ಪೆಕ್ಟರ್ ಆತೀಯೇನೋ ಅಂತ ಮಾಡಿದ್ದೆ" ಎಂದು ನಗುವಳು. "ನಾನು ಪೊಲೀಸ್ ಇನ್ಸ್‌ಪೆಕ್ಟರೂ ಆಗಿ ಬಸ್ಸು ಕಂಡಕ್ಟರೂ ಆಗಕ್ಕೆ ಆಗಲ್ಲೇನವ್ವಾ?" ಎಂದು ಪ್ರಶ್ನಿಸುವ ತುಂಗಳಿಗೆ ಏನೆಂದು ಉತ್ತರಿಸುವುದು? ಅಕ್ಷರಮಾಲೆ ಬರೆದು ಬೇಸರವಾದರೆ ಸುಟ್ಟ ಹುಣಿಸೇಬೀಜ ಜಗಿಯುವ, ಎಲ್ಲರೂ ಮಗ್ಗಿ ಬರೆಯುತ್ತಿರಬೇಕಾದರೆ ಕಿಟಕಿಯಿಂದ ಕಣ್ಣಾಯಿಸಿ ಗುಬ್ಬಚ್ಚಿಯನ್ನು "ಅಲ್ಲೇನು ಮಾಡ್ತಾ ಇದ್ದೀಯಾ?" ಎಂದು ಕೇಳುವ ಈ ತುಂಗಾ ನಮ್ಮ ಮನೆಯ ಮಗುವಿನಂತೆ ಮನಸ್ಸಿನಲ್ಲಿ ನೆಲೆನಿಂತುಬಿಡುತ್ತಾಳೆ. ಮಗ್ಗಿ ಹೇಳದಿದ್ದರೆ ಲಕ್ಕಿ ಬರಲಿನಿಂದ ಬಾರಿಸಿ ಹಿಂಸಿಸುವ, "ಮಗ್ಗಿ ಹೇಳಾಕೆ ಬರದಿದ್ದರೆ ನಿಮ್ಮಪ್ಪನ ಜೊತೆ ಚೌರ ಮಾಡಕ್ಕೆ ಹೋಗೋ ಹಜಾಮ" ಎಂದು ಬೈಯುವ ಕ್ರೂರ ಶಿಕ್ಷಕರಿರುವ ಶಾಲೆಯಿಂದ ತುಂಗಾಳಿಗೇನೋ ಬಿಡುಗಡೆ ಸಿಗುತ್ತದೆ. ಆದರೆ ಅವಳಂಥ ಎಷ್ಟೋ ಮುಗ್ಧ ಕಂದಮ್ಮಗಳು ಈ



'ತುಂಗಾ'
ಲೇ : ವಿ. ಗಾಯತ್ರಿ
ಪ್ರ : ಮೇಫ್ಲವರ್ ಪ್ರಕಾಶನ
ಪುಟ : 176
ಬೆಲೆ : ರೂ. 120/-

ಬಗೆಯ ಕ್ರೌರ್ಯಕ್ಕೆ ಬಲಿಯಾಗುತ್ತಿರುವುದನ್ನು ತಪ್ಪಿಸಬೇಕಾದವರು ಯಾರು? ತುಂಗಾಳ ತಾಯಿಗಿರುವ ದಿಟ್ಟ ನಿರ್ಧಾರದ ಮನಸ್ಥೈರ್ಯ ನಮಗೇಕಿಲ್ಲ? ನಾವೆಲ್ಲ ಅದನ್ನು ಅಲಕ್ಷಿಸಿ ಮಕ್ಕಳನ್ನು 'ಶಾಲೆ'ಯೆಂಬ ನರಕಕ್ಕೆ ತಳ್ಳಿಬಿಡುತ್ತಿದ್ದೇವೆಯ? ಮುಂತಾಗಿ ಈ ಕಾದಂಬರಿ ಪ್ರಶ್ನೆಗಳ ಸರಮಾಲೆಯನ್ನೇ ಓದುಗರ ಮುಂದಿಟ್ಟಿದೆ.

ತುಂಗಾ ಸೇರುವ ಶಾಲೆಯಾದರೋ ಭಾಗ್ಯಶಾಲಿ ಮಕ್ಕಳಿಗೆ ಸಿಗುವಂಥದ್ದು. ಸುತ್ತಲೂ ಕಾಂಪೋಂಡು, ಗೇಟು. ಬೋರ್ಡು ಏನೆಂದರೆ ಏನೂ ಇಲ್ಲ. ಇದೇನು ಶಾಲೆಯೋ ಮನೆಯೋ ಅರ್ಥವಾಗುವುದಿಲ್ಲ ಎಂದು ತುಂಗಾ ಪೇಚಾಡುತ್ತಾಳೆ. ಒಳಗೆ ಕಾಲಿಡುತ್ತಲೇ "...ಎಡಗಡೆಯಲ್ಲೇ ಎತ್ತರದ ಕಟ್ಟೆಯಿದ್ದ ದೊಡ್ಡಬಾವಿ, ಚೌಕಾಕಾರವಾಗಿ ಅದನ್ನು ಸುತ್ತುವರೆದಿದ್ದ ವಿಸ್ತಾರ ಪ್ರಾಂಗಣದಂತೆ ಕಾಣುತ್ತಿದ್ದ ಕಟ್ಟೆ, ಅದರ ಪಕ್ಕಕ್ಕೆ ಹೂ ಸುರಿದು ಹೋಗುತ್ತಿದ್ದ ಪಾರಿಜಾತದ ಗಿಡ, ಇನ್ನೂ ಸ್ವಲ್ಪ ಮುಂದೆ ಕಣ್ಣಾಡಿಸಿ ನೋಡಿದಾಗ ಮಕ್ಕಳು ಗುಂಪಾಗಿ ಕುಳಿತಿರುವುದು, ಗೋಡೆಗಳಿರದ, ಬರೀ ಕಂಬಗಳ ಮೇಲೆ ನಿಂತ ಹುಲ್ಲಿನ ಚಾವಣಿ ಮಾತ್ರ ಹೊಂದಿದ್ದ ಒಂದು ಆಕೃತಿ ಮಾತ್ರ. ಕೆಳಗೆ ನೆಲದಲ್ಲಿ ಒರಗು ಮಣೆಗಳ ಮೇಲೆ ಕುಳಿತ ಮಕ್ಕಳು ಮಧ್ಯದಲ್ಲಿ ಒಂದು ದೊಡ್ಡ ಹೆಂಚಿನ ಮನೆ, ಅದರ ಅಂಗಳಕ್ಕೆ ಹೂದೋಟ..." ಪುಟ್ಟ ತುಂಗಾ ಇದನ್ನು ನೋಡಿ ಬೆರಗಾಗುತ್ತಾಳೆ. ದನದ ದೊಡ್ಡಿಯಂತಹ ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದ ಅವಳಿಗೆ ಶಾಲೆಯೊಂದು ಹೀಗೂ ಇರುತ್ತದೆಂಬ ಊಹೆಯೇ ಇರಲಿಲ್ಲ. ಇನ್ನು ನಗರದ ಕಾಂಕ್ರೀಟ್ ಕಟ್ಟಡಗಳಲ್ಲಿ ಗಾಳಿ-ಬೆಳಕು ಸರಾಗವಾಗಿ ಆಡದಿರುವ ಉಸಿರುಗಟ್ಟಿಸುವ ವಾತಾವರಣದಲ್ಲಿ ಓದುತ್ತಿರುವ ಮಕ್ಕಳ ದೌರ್ಭಾಗ್ಯಕ್ಕೆ ಏನು ಹೇಳುವುದು? ಶಿಕ್ಷಣವನ್ನು 'ವ್ಯಾಪಾರ'ವೆಂದು ಭಾವಿಸಿ ನಡೆಸುವ ಮ್ಯಾನೇಜ್‌ಮೆಂಟ್‌ಗಳು, ಮೂರಡಿ-ನಾಲ್ಕಡಿ ಜಾಗದಲ್ಲೇ ಬಹುಮಹಡಿ ಕಟ್ಟಿ ಅಲ್ಲಿ ಮಕ್ಕಳನ್ನು ತುಂಬಿಡುವ ಶಾಲೆಗಳು, ಕನಿಷ್ಠಪಕ್ಷ ಒಂದು ಚಿಕ್ಕ ಆಟದ ಮೈದಾನವೂ ಇಲ್ಲದ ದರಿದ್ರ ಶಾಲೆಗಳಿಗೆ ಪರವಾನಗಿ ನೀಡುವ ವ್ಯವಸ್ಥೆ ಇವೆಲ್ಲ ನಮ್ಮ ಶೈಕ್ಷಣಿಕ ದಾರಿದ್ರ್ಯವನ್ನು ಎತ್ತಿ ತೋರುತ್ತವೆ.

ಇಷ್ಟ ಬಂದದ್ದನ್ನು ಕಲಿಯುವ ಅವಕಾಶ ತುಂಗಾ ಸೇರುವ ಶಾಲೆಯಲ್ಲಿದೆ. ಎಲ್ಲರೂ ಒಂದು ಅವಧಿಗೆ ಒಂದೇ ವಿಷಯವನ್ನು ಕಲಿಯಬೇಕೆಂಬ ಒತ್ತಾಯ ಇರಲಿಲ್ಲ. ಲೆಕ್ಕ ಬೇಕಾದರೆ ಲೆಕ್ಕ, ವಿಜ್ಞಾನ ಬೇಕಾದರೆ ವಿಜ್ಞಾನ. ಮೊದಲನೇ ಪಿರಿಯಡ್ಡಿನ ಪ್ರಾರಂಭದಲ್ಲೇ ತರಗತಿಯ ಉಪಾಧ್ಯಾಯರು ಮಕ್ಕಳನ್ನು ಸೇರಿಸಿಕೊಂಡು ಅಂದು ಕಲಿಯಬೇಕಾದ ವಿಷಯದ ಬಗ್ಗೆ ಎಲ್ಲಾ ಪ್ರಶ್ನೆಗಳನ್ನು, ಸಮಸ್ಯೆಗಳನ್ನು ಪಟ್ಟಿ ಮಾಡಿಕೊಳ್ಳುತ್ತಾರೆ. ಆನಂತರ "ಸರಿ, ಈಗ ನಿಮಗೇನಿಷ್ಟವೋ ಅಲ್ಲಿಂದ ಪ್ರಾರಂಭಿಸಿ" ಎಂದು ಅವರಿಚ್ಛೆಗೆ ಬಿಟ್ಟು ಬಿಡುತ್ತಾರೆ. ಹೀಗಾಗಿ ಚಿಣ್ಣರಲೋಕದ ಈ ಶಾಲೆಯಲ್ಲಿ ಯಾವುದೇ ತರಗತಿಯಲ್ಲಿ ಒಬ್ಬ ಕನ್ನಡ ಪಾಠ ಕಲಿಯುತ್ತಿರುವನಾದರೆ, ಮಗದೊಬ್ಬ ಮಗ್ಗಿ ಕಲಿಯುತ್ತಾನೆ. ಮತ್ತೊಬ್ಬಳು ಪ್ರಣಾಳಿಕೆಯಲ್ಲಿ ಮದ್ಯಸಾರ ದೀಪದ ಮೇಲೆ ರಾಸಾಯನಿಕ ಪ್ರಯೋಗ ಮಾಡುವಳು. ಯಾರಿಗೆ ಯಾವ ವಿಷಯದಲ್ಲಿ ತುಂಬಾ ಆಸಕ್ತಿ ಮತ್ತು ಮುನ್ನಡೆ ಇದೆಯೋ ಎಂಬುದನ್ನು ಉಪಾಧ್ಯಾಯರಾದವರು ತಿಳಿದುಕೊಳ್ಳಲು, ಇದು ಅತ್ಯಂತ ಉಪಯುಕ್ತವಾದ ದಾರಿ ಎಂಬುದರ ಕಡೆಗೆ ತುಂಗಾಳ ಶಾಲೆ ಬೆಳಕು ಚೆಲ್ಲುತ್ತದೆ.

ಸಂವೇದನಾಶೀಲ ಮನಸ್ಸು, ಜವಾಬ್ದಾರಿಯುತವಾಗಿ ಜೀವನ ಮೌಲ್ಯಗಳನ್ನು ತಿಳಿಸಿ ರೂಪಿಸುವ ವ್ಯಕ್ತಿತ್ವದ 'ಮಾಂಡವಿ' ನಮಗೂ ಸಿಗಬೇಕಿತ್ತು ಎನಿಸದಿರದು.

ಮಧ್ಯಾಹ್ನದ ಊಟದ ಸಮಯದಲ್ಲೂ ಸಹಪಂಕ್ತಿ ಭೋಜನ ಪಾಠ. ಯಾವ ಭೇದವೂ ಇಲ್ಲದೆ ಎಲ್ಲರೂ ಒಟ್ಟಿಗೆ ಚಾಪೆಯಲ್ಲಿ ಕುಳಿತು ತಾವು ತಂದ ಬುತ್ತಿಗಳನ್ನು ಬಿಚ್ಚುವರು. ಪರಸ್ಪರ ಹಂಚಿಕೊಂಡು ಸವಿ ನೋಡುವರು. ಊಟದಲ್ಲಿ "ನೆಲದ್ದು-ನೀರಿನದು' ಇರಲೇಬೇಕು. ಮಾಂಡವಿ ಮೇಡಂ ಎಲ್ಲರ ಬುತ್ತಿಯನ್ನೂ 'ನೆಲದ್ದು ನೀರಿನದು' ಇದೆಯಾ ಎಂದು ಪರೀಕ್ಷಿಸುವಾಗ ಮಕ್ಕಳಿಗೆಲ್ಲಾ ಪುಳಕ. ನೆಲದ್ದು ಎಂದರೆ ನೆಲದಲ್ಲಿ ಬೆಳೆದ ಯಾವುದೇ ಒಂದು ತರಕಾರಿ ಆಹಾರದ ಭಾಗವಾಗಿರಬೇಕು. ನೀರಿನದು ಎಂದರೆ ಮೀನು, ಏಡಿ, ಸೀಗಡಿ ಇತ್ಯಾದಿ. ಇವೆಲ್ಲವೂ ಮಕ್ಕಳ ಪ್ರತಿನಿತ್ಯ ಆಹಾರದ ಭಾಗವಾಗಿರಬೇಕೆಂಬ ಸಮತೋಲಿಕೆ ಆಹಾರ ಕಲ್ಪನೆಯೇ ವಿಶಿಷ್ಟವಾದುದು. ಎಲ್ಲರಿಂದಲೂ ದಿನನಿತ್ಯ ಇದನ್ನು ಒದಗಿಸುವ ಚೈತನ್ಯವಿರುತ್ತದೆಯೋ ಎಂಬ ಪ್ರಶ್ನೆ ಲೇಖಕಿಗೆ ಎದುರಾಗದಿರುವುದು ಆಶ್ಚರ್ಯ.

ಆದರೆ ಈ ಶಾಲೆ ಮಾಮೂಲಿನಂತಲ್ಲ. ನಿಜಾರ್ಥದ 'ಪಾಠಕಲಿಕೆ'ಯ ಕ್ರಮವನ್ನು ದಿನವಿಡಿ ಜಾರಿಯಲ್ಲಿಟ್ಟಿರುವ ಶಾಲೆಯಿದು. ಇಲ್ಲಿನ ಮುಖ್ಯೋಪಾಧ್ಯಾಯಿನಿ ಶಾಪಗ್ರಸ್ಥ ದೇವತೆಯಂತಹ ಹೆಂಗಸು. ಅಲ್ಲಿನವರ ಪ್ರಕಾರ "ಭೂಮ್ತಾಯಂತ ಹೆಂಗಸು." ಮಕ್ಕಳು ಮೇಡಂ ಎನ್ನದೆ ಮಾಂಡವಿಯಕ್ಕಾ ಎಂದೇ ಕರೆಯುವುದು. ಎಲ್ಲದಕ್ಕೂ ಮಕ್ಕಳನ್ನು ಪ್ರೋತ್ಸಾಹಿಸುವ, ಹುರಿದುಂಬಿಸುವ ಗುಣಶೀಲೆ. ದೆವ್ವದ ಬಗ್ಗೆ ಭಯ ಇರಬಾರದೆಂದು ಪ್ರಯೋಗಮಾಡಿ ತೋರುವರು. ಗಂಡು ಮಕ್ಕಳೊಂದಿಗೆ ಹೆಣ್ಣುಮಕ್ಕಳನ್ನು ಹುಟ್ಟುಡುಗೆಯಲ್ಲಿ ಈಜಾಡಲು ಬಿಟ್ಟು ಪರಸ್ಪರ ದೇಹಭಿನ್ನತೆಯನ್ನು ಅರಿಯಲು ಬಿಡುವರು. ಶಾಲೆ ಬಿಟ್ಟು ವಾಕಿಂಗ್ ಮಾಡುತ್ತಲೇ 'ಕಲಿಸುವ' ಖ್ಯಾತಿಯುಳ್ಳವರು. ವಿಕಲಚೇತನರಲ್ಲಿ ಮನೋಸ್ಥೈರ್ಯವನ್ನೂ, ಉಳಿದವರಲ್ಲಿ ಅವರೊಂದಿಗೆ ಆದರ ಗುಣವನ್ನೂ ಬೆಳೆಸಬಲ್ಲರು. ಮಕ್ಕಳಲ್ಲಿ ಮಾತಾಡುವ, ಕಲಿಯುವ ಪ್ರಯೋಗಶೀಲತೆಯಲ್ಲಿ ತೊಡಗುವ, ಕುಣಿಯುವ, ಆಡುವ, ಹಾಡುವ ಎಲ್ಲ ಬಗೆಯ ಅಭಿವ್ಯಕ್ತಿಗೂ ಮುಕ್ತ ಅವಕಾಶ ಕಲ್ಪಿಸಿಕೊಟ್ಟು ಇವೆಲ್ಲವೂ ಶಿಕ್ಷಣದ ಭಾಗವಾಗಬೇಕೆಂಬ ಮನೋಭಾವದವರು. ಮಕ್ಕಳಿಗೆ ಶಾಲೆಯಲ್ಲೇ ಕ್ಯಾಂಪ್ ಹಾಕಿ, ಅವರವರ ಟೆಂಟುಗಳನ್ನು ಅವರೇ ಹಾಕುವುದನ್ನು ಹೇಳಿಕೊಟ್ಟು ಮಾಡಿಸುತ್ತಾರೆ. ಶಿಕ್ಷಣದ ಎಷ್ಟೋ ಹಂತಗಳನ್ನು ದಾಟಿದವರಿಗೂ ಇಂತಹ ಅವಕಾಶಗಳು ತೀರ ಅಪರೂಪವೆನಿಸುತ್ತದೆ. ಹಾಗಾಗಿ ತುಂಗಾ ಮತ್ತವರ ಸಹಪಾಠಿಗಳು ಭಾಗ್ಯಶಾಲಿಗಳು. ಅಲ್ಲಿ ಯಾವುದಕ್ಕೂ ಯಾರ ನಡುವೆಯೂ ಸ್ಪರ್ಧೆ ಎಂಬುದೇ ಇಲ್ಲ. ಸ್ಪರ್ಧೆಯೆನ್ನುವುದು ಕಲಿಕೆಯ ಕಲ್ಪನೆಗೆ ಸಂಪೂರ್ಣ ವಿರುದ್ಧವಾದದ್ದು ಎಂಬುದು ಮಾಂಡವಿಯವರ ನಂಬುಗೆ. "ಸ್ಪರ್ಧಾ ಮನೋಭಾವ ನಾಶವಾದಾಗಲೇ ನಿಜ ಕಲಿಕೆಯಾಗುವುದು" ಎಂಬ ಅವರ ತಿಳಿವಳಿಕೆಯಿಂದ ರಿಯಾಲಿಟೀ ಷೋ ಸ್ಪರ್ಧೆಗೆ ಮಕ್ಕಳನ್ನು ಸಿದ್ಧ ಮಾಡುವ ಪೋಷಕರು ಕಲಿಯಬೇಕಾದುದು ಬಹಳಷ್ಟಿದೆ. ಭಾಗವಹಿಸಿದವರಿಗೆಲ್ಲಾ ಬಹುಮಾನವೇ. ತರಕಾರಿಗಳೇ ಮಾಂಡವಿ ಮೇಡಂ ನೀಡುವ ಬಹುಮಾನಗಳು! ಎಲ್ಲವನ್ನೂ ಕೇಳಿಸಿಕೊಳ್ಳುವ ತಾಳ್ಮೆ, ಸಂವೇದನಾಶೀಲ ಮನಸ್ಸು, ಜವಾಬ್ದಾರಿಯುತವಾಗಿ ಜೀವನ ಮೌಲ್ಯಗಳನ್ನು ತಿಳಿಸಿ ರೂಪಿಸುವ ವ್ಯಕ್ತಿತ್ವದ 'ಮಾಂಡವಿ' ನಮಗೆ ಸಿಗಬೇಕಿತ್ತು ಎನಿಸದಿರದು.

'ತುಂಗಾ' ಕುತೂಹಲಿಯಾದ ಮಗು. ಶಾಲೆಯ ಹೊರತಾದ ಅವಳ ಜಗತ್ತನ್ನೂ ಕಾದಂಬರಿ ಚಿತ್ರಿಸದೆ ಬಿಟ್ಟಿಲ್ಲ. ಮನೆಯಲ್ಲಿ ಅವಳ ಫ್ರೆಂಡ್ ಎಂದರೆ ಜೂಲುನಾಯಿ 'ಬಚ್ಚಾ,' ಅವಳ ಪಾಲಿನ ಸರ್ವಸ್ವ ಅವಳೆಲ್ಲಾ ರೀತಿ-ನೀತಿ, ಚರ್ಯೆಗಳನ್ನು ಅರಿತು ಆಡುವ ಜೊತೆಗಾರ.

ಅವಳು ಶಾಲೆಗೆ ಹೋಗುವಾಗ ಹೊಳೆಯ ತನಕ ಬಿಟ್ಟು ಬರುತ್ತದೆ. ಅವಳು ಬರುವುದನ್ನೇ ಕಾಯುತ್ತದೆ. ಅವಳ ಜೊತೆ ಹುಟ್ಟಿದ ತಮ್ಮನಂತಹ ನಾಯಿ. ಕಚ್ಚಿದರೂ ಅದನ್ನು ಹೊಡೆಯಲು ಬಿಡದ ತಾಯಿಯಂತಹ ಮನಸ್ಸು ತುಂಗಾಳದು. ನಾಯಿ ಬಚ್ಚ ಕೂಡ ಓದುಗರ ನೆನಪಿನಲ್ಲಿ ಸ್ಥಾಯಿಯಾಗಿ ಉಳಿಯುವಂತೆ ಲೇಖಕಿ ಚಿತ್ರಿಸಿದ್ದಾರೆ. ಹಾದಿಯಲ್ಲಿ ಸಿಕ್ಕ ಐದು ರೂಪಾಯಿ ಮುಚ್ಚಿಟ್ಟಲ್ಲಿಂದ ಮಾಯವಾಗುವ ನಿಗೂಢ ರಹಸ್ಯ, ಅವಳ ಮೊಗ್ಗಿನಜಡೆ, ಕರಿಯನನ್ನು 'ಏ ಕೊರಗಾ' ಎಂದು ಕರೆದುದಕ್ಕಾದ ಪಶ್ಚಾತ್ತಾಪ, ಚಂದ್ರಕಾಂತ ಮಾಲಾಪುರನ ಸಾವು. ಪಣತದಲ್ಲಿನ ಗ್ರಂಥಾಲಯ, ಜಾತಿಭೇದವಿಲ್ಲದ ಅವಳ ಒಡನಾಟ ಎಲ್ಲವೂ ಎಲ್ಲವೂ ಮನಮುಟ್ಟುವಂತೆ ಲೇಖಕಿ ಚಿತ್ರಿಸಿರುವರು.


ಒಂದನೇ ತರಗತಿಯ ಮುಗ್ಧ ಹೆಣ್ಣುಮಗುವೊಂದರ ಮೂಲಕ ಇಡೀ ಶೈಕ್ಷಣಿಕ ಕ್ರಮವನ್ನು, ವ್ಯವಸ್ಥೆಯ ಜಾಳನ್ನೂ 'ತುಂಗಾ' ಕಾದಂಬರಿಯಲ್ಲಿ ಹಿಡಿಯುವ ಪ್ರಯತ್ನ ಮಾಡಿ ಬಹುತೇಕ ಯಶಸ್ವಿಯಾಗಿದ್ದಾರೆ. ಈ ಎಲ್ಲಾ ಅನುಭವಗಳೂ ಮಗುವೊಂದು ಆರು-ಏಳು ವರ್ಷದ ವಯಸ್ಸಿರುವಾಗ ಲಭ್ಯವಾದುವೆಂಬುದೇ ಆಶ್ಚರ್ಯ-ಸಂದೇಹಕ್ಕೆ ಎಡೆ ಮಾಡುತ್ತವೆ. ಲೇಖಕಿಯ ಆತ್ಮಕಥನಾತ್ಮಕ ದಾಖಲೆಗಳಿವು ಎಂಬುದು ಸಂದೇಹವನ್ನು ಇಲ್ಲವಾಗಿಸುತ್ತದೆ. ಒಂದೇ ಓದಿಗೆ ಓದಿ ಮುಗಿಸಬೇಕೆನ್ನುವ, ಎಲ್ಲಿಂದಲಾದರೂ ಶುರುಮಾಡಿ, ಎಲ್ಲಿ ಬೇಕಾದರೂ ಓದಿ ಮುಗಿಸಬಹುದಾದ ಪುಸ್ತಕವಿದು. ಚಿಕ್ಕ ಚಿಕ್ಕ ಆಕರ್ಷಕ ತಲೆಬರೆಹಗಳಿರುವ ಹೊಸತನದಿಂದ ತುಂಬಿರುವ ಕೃತಿ. ಅಲ್ಲಲ್ಲಿ ಅಚ್ಚಿನ ದೋಷಗಳು ಕಣ್ಣಿಗೆ ರಾಚುವುದು ಸೊಗಸಾದ ಊಟದಲ್ಲಿ ಕಲ್ಲುಸಿಕ್ಕಂತೆ ಭಾಸವಾಗುತ್ತದೆ.

ಕಾದಂಬರಿಯ ಜಗತ್ತು ಮಲೆನಾಡಿನದು. ಭಾಷೆಯಂತೂ ಸರಳ, ಆಕರ್ಷಕ. ಲೇಖಕಿಯಿಂದ ಇನ್ನಷ್ಟು ನಿರೀಕ್ಷಿಸುವಂತೆ ಮಾಡುವ ಅಪರೂಪದ ಶೈಲಿಯಿದು. ಕಾದಂಬರಿಯ ರಚನಾ ಕ್ರಮದಲ್ಲೂ ನಾವೀನ್ಯತೆ ತುಂಬಿದೆ. ಎಲ್ಲಕ್ಕಿಂತ ಮುಖ್ಯವಾಗಿ ಸಮಾಜದ ಅವಗಣನೆಗೆ ಒಳಗಾದ, ಪ್ರಾಥಮಿಕ ಶಿಕ್ಷಣದಲ್ಲಿ 'ಬದಲಾವಣೆ' ತರಬೇಕೆನ್ನುವ ಮನಸ್ಸುಗಳಿಗೆ ಸೂಕ್ಷ್ಮವಾದ ಹೊಳಹುಗಳನ್ನೂ ಒಳನೋಟಗಳನ್ನೂ ಈ ಕಾದಂಬರಿ ನೀಡುತ್ತದೆ. "ಬಾಲ್ಯದ ನೆನಪುಗಳನ್ನು ಆಧಾರಗೊಳಿಸಿ, ಮಗುವೊಂದರ ಸಹಜ ಶುದ್ಧ ಪರಿಶೀಲನೆಗಳನ್ನೂ ಕಾಳಜಿಗಳನ್ನೂ ಇಡಿಯಾಗಿ ಹಿಡಿದಿಡುವ ಆಕೆಯ ನವಿರಾದ ವಿವರಗಳಿಂದ ಪುಸ್ತಕ ಜೀವ ತುಂಬಿ ನಿಲ್ಲುತ್ತದೆ. ಮಗುವಿನ ಭಾವನೆಗಳನ್ನು ಅತ್ಯಂತ ಕರಾರುವಾಕ್ಕಾಗಿ ವರ್ಣನೆಯನ್ನು ಮಾಡುತ್ತಲೇ ಶಾಲೆ ಮತ್ತು ಶಿಕ್ಷಣದ ನಿಜಾರ್ಥಗಳಿಗೆ ನಮ್ಮನ್ನು ಪಕ್ಕಾಗಿಸುತ್ತಾರೆ" ಎಂಬ ಮುನ್ನುಡಿಯ ಮಾತುಗಳಾಗಲೀ, ಲೇಖಕಿಯನ್ನು ಕುರಿತು "ಅತ್ಯಂತ ನಿಷ್ಠುರ, ದಿಟ್ಟ ನುಡಿಗಳ ಗಾಯತ್ರಿ ಎಂದೂ ಉಡಾಫೆ ಮಾಡಿದವರಲ್ಲ. ಎಲ್ಲ ಮಾತಿನ ಹಿಂದೆಯೂ ಆಳವಾದ ಚಿಂತನೆ, ವಿವೇಚನೆ ಇರುತ್ತದೆ. ತಣ್ಣಗಿದ್ದು ದೊಡ್ಡ ಕೆಲಸ ಮಾಡುವ ಗಾಯತ್ರಿ" ಎಂಬ ಬೆನ್ನುಡಿಯ ಮಾತುಗಳಾಗಲೀ ಔಚಿತ್ಯ ಪೂರ್ಣವಾದವು.

ಇದು ವಿಮರ್ಶೆಯಲ್ಲ. ಪುಸ್ತಕವನ್ನು ಓದಿದಾಕ್ಷಣ ನನಗನ್ನಿಸಿದ್ದನ್ನು ಇಲ್ಲಿ ಹೀಗೆ ದಾಖಲಿಸಿದ್ದೇನೆ. **"ತುಂಗಾ, ನಿನ್ನಂಥ, ಮಗು ಎಲ್ಲರ ಮನೆಯಲ್ಲೂ ಇರಲಿ. ನಿನಗೆ ಸಿಕ್ಕಂಥ ಶಾಲೆ ಎಲ್ಲ ಮಕ್ಕಳಿಗೂ ಸಿಗಲಿ."** ❑

"ಭಾವ ಬದಲಿಸಿದ ಅಕ್ಷರಗಳು"

ಅದೊಮ್ಮೆ ನಿನ್ನ ಭೇಟಿಯಾದೆ
ಮಾತಾಡುತ್ತ ಮಾತಾಡುತ್ತ
ಮನೆ ಬಳಿಗೆ ಕರೆದೊಯ್ದೆ
ಅಲ್ಲಾಗ ಮಾತು ಮಾತಿನ ತುಂಬ
ದೇವತೆಯ ದನಿಯಿತ್ತು
ಜಗುಲಿಗೆ ಬಂದಂತೆ
ತಿರುಗಿಸಿದ ಕೀಲಿ ಕೈಗೆ
ಬಾಗಿಲ ಬೀಗ ಕಳಚಿ ಬಿತ್ತು
ಒಳ ಹೋದಂತೆಲ್ಲಾ...
ಅದೇ ಮಾತುಗಳು
ಭಾವ ಬದಲಿಸಿದ ಅಕ್ಷರಗಳು
ಅನುಭವವೆಲ್ಲವು
ಅನುಭಾವವಾದಾವೆ.........
ಮನದ ಮಾತಿಗೆ ಈಗ
ಬದ್ದಿದೆ ಬೀಗ
ಅತ್ತ ಹೋಗಲಿ ಬಿಟ್ಟು ಬಿಡು
ಸುಖಾ ಸುಮ್ಮಗಿದ್ದುಬಿಡು.



■ **ಸುಶೀಲಾ ಸೋಮ**
ಹಾಸನ

ದೈವ ಚಿತ್ತದ ಪಾತಳಿಯಲ್ಲಿ ಕುವೆಂಪುರವರ ಸ್ತ್ರೀ ಪಾತ್ರಗಳು

'ನೆಯ್ದಾಳುತಿದೆ ಜಗವನೊಂದಲೆ ವಿರಾಡ್ಮನಂ
ಜೀವಿಗಳಿಚ್ಛೆಯಾ ಸ್ವಾತಂತ್ರ್ಯ ಭಾವಮಂ
ನೀಡಿ. ಮಂಥರೆ ಸೀತೆ ರಾಮ ರಾವಣರೆಲ್ಲರುಂ
ಸೂತ್ರದ ಗೊಂಬೆಗಳಲೆ ಆ ವಿಧಿಯ ಹಸ್ತದಲಿ'

ಕುವೆಂಪುರವರ ಸ್ತ್ರೀ ಬಗೆಗಿನ ಕಾಣ್ಕೆ, ದರ್ಶನ, ವೈಚಾರಿಕತೆ ಇವೆಲ್ಲವನ್ನೂ ಮೇಲಿನ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದ ಸಾಲುಗಳಿಂದಲೇ ನಾವು ಗ್ರಹಿಸಬಹುದಾಗಿದೆ. ಅವರ ರಾಜಕೀಯ ದಾರ್ಶನಿಕತೆಯ ಒಳಗಡೆ ಕೂಡಾ ಕೆಲಸ ಮಾಡುವ ಅಂಶಗಳು ಈ ಮೇಲಿನ ಚೌಕಟ್ಟನ್ನೇ ಇಡಿಯಾಗಿ ಹೊಂದಿರುವುದರಿಂದ ಸ್ತ್ರೀ ಪಾತ್ರದ ನಿರೂಪಣೆಯಲ್ಲಿ ಈ ವೈಚಾರಿಕತೆಯೇ ಪ್ರಬಲವಾಗಿ ಕೆಲಸ ಮಾಡಿರುವುದನ್ನು ಕೆಲವು ಪಾತ್ರಗಳ ಮೂಲಕ ನಾವು ಗಮನಿಸ ಬಹುದಾಗಿದೆ. ಖಂಡ ದೃಷ್ಟಿ ಮಂಥರೆಯನ್ನು ರಾಮಾಯಣದ ಎಲ್ಲಾ ಅನರ್ಥಗಳಿಗೂ ಮೂಲಕಾರಣವೆಂದು ಪರಿಗಣಿಸುತ್ತದೆ. ಆದರೆ ಕುವೆಂಪು 'ಶ್ರೀ ಸಂಪುಟದ' ಶ್ರೀ ರಾಮ ರಾವಣ ಚಿತ್ ತಪಸ್ ಶ್ರೀ ಸಂಚಿಕೆಯಲ್ಲಿ ಹೇಳಿರುವಂತೆ ಮಂಥರೆ ಮೂಲದೀ ಬೃಹತ್ ಘಟನೆ ಸೀತಾ-ರಾಮ-ರಾವಣರ ಆತ್ಮ ವಿಕಸನದ ಪರಿಣಾಮ ಸಿದ್ಧಿಗೆ ಸಹಾಯಕವಾಗುವಂತಹದು. 'ತಪಸ್ಸಿದ್ಧಿ' ಸಂಚಿಕೆಯಲ್ಲಿ ಈ ಭಾವ ಇನ್ನೂ ಸ್ಪಷ್ಟವಾಗಿದೆ. 'ಕಾರಣಳಲ್ತು ಬರಿ ಕರಣಮಾ ಕುಬ್ಜೆ,' ಎಂಬ ಮಾತಿನಲ್ಲಿ ಈ ರಹಸ್ಯವನ್ನು ಉದ್ಘಾಟಿಸಲಾಗಿದೆ ಎಂದು ಡಾ. ಪ್ರಧಾನ್ ಗುರುದತ್ತ 'ಕುವೆಂಪು' ಎಂಬ ತಮ್ಮ ವಿಮರ್ಶಾ ಕೃತಿಯಲ್ಲಿ ಹೇಳುತ್ತಾರೆ. *(ಪು. 118)*

ಮೂಲ ರಾಮಾಯಣದಲ್ಲಿ ಎಲ್ಲರಿಂದ ತಿರಸ್ಕೃತಳಾಗಿರುವ ಮಂಥರೆ 'ಶ್ರೀ ರಾಮಾಯಣ ದರ್ಶನಂ'ದಲ್ಲಿ ಮಾನವೀಯ ನೆಲೆಯಲ್ಲಿ ಚಿತ್ರಿತಳಾಗಿದ್ದಾಳೆ. ಕೊನೆಗೆ 'ಮಂಥರಾ ಲಕ್ಷ್ಮಿ'ಯಾಗುತ್ತಾಳೆ ಎನ್ನುವಲ್ಲಿ ಈ ಪಾತ್ರ ಬಹಳಷ್ಟು ವಿಮರ್ಶಕರಿಂದ ಮೆಚ್ಚುಗೆಗೆ ಒಳಗಾದ ಪಾತ್ರ. ಕಪ್ಪುಬಣ್ಣದ, ಗೂನು ಬೆನ್ನಿನ ಕುಬ್ಜೆ, ಕುರೂಪಿ ಮಂಥರೆ ಆಕೆಯ ವಿಕೃತ, ವಿಲಕ್ಷಣ ವ್ಯಕ್ತಿತ್ವದಿಂದ ರಾಮಾಯಣದ ಕಲಹದ ಮೂಲ ವ್ಯಕ್ತಿಯಾಗುತ್ತಾಳೆ ಎಂದು ಚಿತ್ರಿಸುವ ಮೂಲ ರಾಮಾಯಣವಾಗಲೀ ಅಥವಾ


'.....ಪಾಪಿಗುದ್ಧಾರಮಿಹುದೌ
ಸೃಷ್ಟಿಯ ಮಹದ್ ವ್ಯೂಹ ರಚನೆಯೊಳ್'

ಎಂದು ಆಕೆಯನ್ನು 'ಮಂಥರಾ ಲಕ್ಷ್ಮಿ'ಯಾಗಿ ರೂಪಿಸುವ ಶ್ರೀರಾಮಾಯಣದರ್ಶನಂ ಆಗಲಿ ಯಾವುದೇ ಭಿನ್ನವಾದ ಧ್ವನಿಯನ್ನು ಧ್ವನಿಸುತ್ತದೆ ಎನಿಸುವುದಿಲ್ಲ. ಸಮಾಜದಿಂದ ತಿರಸ್ಕೃತಳಾಗಿ ಅನಾಥಳಾಗಿ ಕಾಡಿನಲ್ಲಿ ಬಿದ್ದಿದ್ದ ಕುರೂಪಿ ಮಗು ಕೈಕೆಯ ತಾತನಿಂದಾಗಿ ಅರಮನೆ ಸೇರಿ. ಮನೋವ್ಯಾಪಾರದಲ್ಲಿ ಕೈಕೆಗೆ ಹಾಗೂ ಆಕೆ ಮಗ ಭರತನಿಗೆ ತಾಯಿಯಾಗಿ, ಮತ್ತೆ ಆ ತಾಯ್ತನದ ಸುಳಿಯಿಂದಾಗಿ ಮಂಥರೆ 'ಶ್ರೀ ರಾಮಾಯಣದರ್ಶನಂ'ಗೆ ಮೂಲ ಕಾರಣವಾಗುತ್ತಾಳೆ. ರಾಮಾಯಣ, ಮಹಾಭಾರತದಂತಹ ಸವಿಸ್ತಾರಹರವುಳ್ಳ ವಸ್ತುವಿನಲ್ಲಿ ಪ್ರಭುತ್ವ, ಆಸ್ತಿ, ಬಾಹ್ಯ ರಾಜಕಾರಣಗಳೂ ಬಲವಾದ ಪಾತ್ರ ವಹಿಸುವಂತಹವೆ. ರಾಜ, ರಾಜ್ಯಭಾರ, ರಾಜ್ಯ ಇವುಗಳಿಗೆ ಕುಟುಂಬ ರಾಜಕಾರಣದ ಆಚೆಯೂ



ತಿಮ್ಮಿಯ ಸ್ವಪ್ನಪ್ರಜ್ಞೆ - ಎಂ.ಮೋಹನ್ (ಮಲೆಗಳಲ್ಲಿ ಮದುಮಗಳು)

ಬಲವಾದ ಒಂದು ವ್ಯವಸ್ಥಿತವಾದ ವ್ಯೂಹ ಇರುತ್ತದೆ. ಇಂತಹ ರಾಜಕಾರಣದ ಚಕ್ರವ್ಯೂಹ ಅಧಿಕಾರದ ಜೊತೆ ತಳಕು ಹಾಕಿಕೊಂಡಿರು ವಂತಹದು. ಇಂತಹ ವ್ಯವಸ್ಥಿತ ರಾಜಪ್ರಭುತ್ವದ ರಾಜಕಾರಣವನ್ನು ಕೌಟುಂಬಿಕ ನೆಲೆಗೆ ಇಳಿಸಿ, ಭಾವನಾತ್ಮಕ ನೆಲೆಯಲ್ಲಿ, ಮನೋವ್ಯಾಪಾರದ ನೆಲೆಯಲ್ಲಿ ವ್ಯಕ್ತಿಗಳನ್ನು ವಿಭಿನ್ನವಾಗಿ ಚಿತ್ರಿಸುವುದು, ಮಾನವೀಯ ನೆಲೆಯಲ್ಲಿ ಕೌಟುಂಬಿಕ ರಾಜಕಾರಣದ ಸುತ್ತವೇ ಸುತ್ತುವಂತೆ ಮಾಡುವಲ್ಲಿ ಯಾವ ತಾತ್ತ್ವಿಕ ನೆಲೆಗಳು ಕೆಲಸ ಮಾಡಿರುತ್ತವೆ. ಎಂಬ ಅನುಮಾನ ವೊಂದು ಹರಿಹಾಯದೇ ಇರುವುದಿಲ್ಲ ಶ್ರೀರಾಮಾಯಣ ದರ್ಶನಂ ಕುಟುಂಬದ ಸಾಮಾನ್ಯರ ಜೀವನದ ರೀತಿ ಎಂಬಂತೆ ಚಿತ್ರಿತವಾದರೂ, ಆಧ್ಯಾತ್ಮ ಬದುಕಿನೆಡೆ ಸಾಗುವಂತಹದಾದರೂ-ವಾಸ್ತವದ ಬದುಕಿನ ಸಂಘರ್ಷಗಳು-ಭಾವನಾತ್ಮಕ ನೆಲೆಯಲ್ಲಿ ಮಾತ್ರ ತೀರ್ಮಾನ ಗೊಳ್ಳುವಂತಹವುಗಳಲ್ಲ. ಇಲ್ಲಿ ರಾಮಾಯಣ ಕುಟುಂಬದ ರಾಜಕಾರಣ ವಾಗಿ ಮಂಥರೆಯಂತಹ ದಾಸಿ ತನ್ನ ಮಾತು ಹಾಗೂ ನಿಲುವಿನಿಂದಾಗಿ ರಾಮ-ಸೀತೆ-ರಾವಣರ ಆತ್ಮವಿಕಸನಕ್ಕೆ ಕಾರಣಕರ್ತ ಳಾಗುತ್ತಾಳೆಂಬುದು ವಿಧಿಯ ಸಂಚು... ವಿಧಿ ನಿಯಮ. ಈ ವಿಧಿ ನಿಯಮದ ಹಿಂದೆ ಇರುವ ತರ್ಕ, ವೈಚಾರಿಕತೆ ಕುತೂಹಲ ಹುಟ್ಟಿಸುವಂತಹದು. ರಾಜಪ್ರಭುತ್ವದ ಒಳಸುಳಿಗಳು ಬಿಚ್ಚಿಕೊಳ್ಳಲಾರದ ಒಂದು ಸಂದರ್ಭದಲ್ಲಿ ಮಂಥರೆ-ಅದೂ ಕುರೂಪಿ, ಕುಬ್ಜೆ, ವಿಕೃತ ಮಂಥರೆ-ಈ ರಾಜಕಾರಣದ ಸೂತ್ರಧಾರಿ ಎನ್ನುವುದು ಹೇಗೆ ಎನ್ನುವುದು ಪ್ರಶ್ನೆಯಾಗುತ್ತದೆ. Black is beautiful ಎನ್ನುವ ವೈಚಾರಿಕತೆಯೊಂದು ಹೆಣ್ಣಿನ ಸೌಂದರ್ಯದ ಮೀಮಾಂಸೆಯನ್ನು ಪುನರ್ ವಿಮರ್ಶಿಸುವ, ಆಕೆಯ ವ್ಯಕ್ತಿತ್ವಕ್ಕೆ ಘನತೆಯನ್ನು ಇಡಿಯಾಗಿ ಹೊರ ಮುಖವಾಗಿಯಲ್ಲದೇ ಅಂತಃಸತ್ವದ ಮೂಲಕ ಹೊರಹಾಕಬಲ್ಲದು ಎನ್ನುವ ಕ್ಷಣದಲ್ಲಿ ವಿಕಾರಿ, ವಿಕೃತ, ಕುರೂಪಿ ಮಂಥರೆ ವಿಲಕ್ಷಣವಾಗಿ ಸೃಷ್ಟಿಯಾದುದು, ಅಲಕ್ಷಿತದ ಮೂಲಕ ಮಹತ್ವವಾದುದನ್ನು ಸಾಧಿಸಲು ಒಂದು ಮಾದರಿಯಾಗಿಬಿಡುವುದು ಕುತೂಹಲಕಾರಿಯಾದ ವಿಚಾರವಾಗಿದೆ. ಕುವೆಂಪು ಸಾಹಿತ್ಯ ಚಿತ್ರಸಂಪುಟದಲ್ಲಿ (2004, ಎಂ.ಎಚ್. ಕೃಷ್ಣಯ್ಯ, ಪ್ರಧಾನ ಸಂಪಾದಕರು) ಕಲಾವಿದೆ ಸುರೇಖಾ 'ಶ್ರೀರಾಮಾಯಣ ದರ್ಶನಂ'ಗೆ ಪರಸ್ಪರ ಸಂಬಂಧಿತ ಎರಡು ಕೃತಿಗಳನ್ನು ರಚಿಸಿದ್ದಾರೆ. (ಚಿತ್ರಸಂಖ್ಯೆ 41,42) 'ಅಗ್ನಿದಿವ್ಯ' ಕಲಾಕೃತಿಯ ಬಲಗಡೆ ಆಕೆ ಒಂದು ಬರಹದ ಚೀಟಿ



ಅಗ್ನಿದಿವ್ಯ – ಶ್ರೀಮತಿ ಬಿ. ಸುರೇಖ (ಶ್ರೀ ರಾಮಾಯಣ ದರ್ಶನಂ)

ಅಂಟಿಸಿದ್ದಾರೆ. **'ಕುವೆಂಪುರವರ ಕ್ಷಮೆಯಾಚಿಸಿ, ಸೀತೆಯೊಡನೆ ಅಗ್ನಿ ಪ್ರವೇಶ ಮಾಡಿದ ನಿಮ್ಮ ರಾಮ ನನ್ನ ಸುತ್ತ ಮುತ್ತಲು ಕಾಣುತ್ತಿಲ್ಲ.** May be and cannot reach your Rama.' ಸುರೇಖ ಹೇಳುವ ಕಟು ವಾಸ್ತವದ ಹಿನ್ನೆಲೆಯಲ್ಲಿಯೂ ಕೂಡಾ 'ಶ್ರೀ ರಾಮಾಯಣ ದರ್ಶನಂ'ನ ಮಹತ್ ಕಲ್ಪನೆ, ಆಧ್ಯಾತ್ಮ ದರ್ಶನದ ಪಥದಲ್ಲಿ ರೂಪುಗೊಂಡಿರುವ ಸ್ತ್ರೀಪಾತ್ರಗಳು ಪುನರ್ ವಿಮರ್ಶೆಗೊಳ ಗಾಗುವ ಅಗತ್ಯವೂ ಇದೆ.

ಡಾ. ಐ.ಜೆ. ಮ್ಯಾಗೇರಿ 'ವಸಾಹತುಶಾಹಿ ಅನುಭವ ಮತ್ತು ಕನ್ನಡ ಕಾದಂಬರಿಗಳು' ಎನ್ನುವ ತಮ್ಮ ಪಿಎಚ್.ಡಿ. ಪ್ರಬಂಧದಲ್ಲಿ ಹೀಗೆ ಬರೆಯುತ್ತಾರೆ. "ರಾಜಾರಾಮ ಮೋಹನ್‌ರಾಯ್‌ರ ವೈಚಾರಿಕ ಹಾಗೂ ರಾಜಕೀಯ ನೆಲೆಗಳು ಕನ್ನಡದ 'ಇಂದಿರಾಬಾಯಿ'ಯಲ್ಲಿ ಪ್ರಕಟವಾದಂತೆ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಹಾಗೂ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಪ್ರವೇಶಿಸಿಲ್ಲ" *(ಪು. 136, 2008)* 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಶಿಕ್ಷಣ ಕುರಿತಂತೆ ಎರಡು ಕಡೆ ಪ್ರಸ್ತಾಪವಿದೆ, "ಹೂವಳ್ಳಿಗೆ ಒಂದೆರಡು ಮೈಲಿಗಳೊಳಗೇ ಇರುವ ಕೋಣೂರಿನ ಮನೆಗಳಲ್ಲಿಯೇ ಒಂದು ಐಗಳ ಮಠ ಇದ್ದು, ಹಳೆಮನೆ ಬೆಟ್ಟಳ್ಳಿ ಕಡೆಯ ಸಮೀಪದ ಊರು ಮನೆಯ ಕೆಲವೇ ಮಕ್ಕಳು 'ಬರಾವು' ಕಲಿಯುತ್ತಿದ್ದರಾದರೂ, ಗಂಡುಮಕ್ಕಳಿಗೇ ಅಪೂರ್ವವೂ ಅಸಾಧ್ಯವೂ ಅತಿ ವಿರಳವೂ ಆಗಿದ್ದ ಓದು ಬರಹವನ್ನು 'ಹೆಣ್ಣು ಹೆಂಗಸರಿಗೆ' ಕಲಿಸಲು ಯಾರೂ ಒಪ್ಪುತ್ತಿರಲಿಲ್ಲ.... ಒಮ್ಮೆ ಕೋಣೂರಿನ ಹುಡುಗ ಮುಕುಂದಯ್ಯ 'ವೆಂಕ್ಟ ಮಾವನಿಗೆ' 'ಚಿನ್ನೀನ ನಮ್ಮ ಮನೆಗೆ ಬರೆಯೋಕೆ ಕಳ್ಸಿ' ಎಂದು ಯಾವುದೋ ಮಾತಿನ ಸಂದರ್ಭದಲ್ಲಿ ಹೇಳಿದಾಗ, ಹೂವಳ್ಳಿ ವೆಂಕಟಣ್ಣ ನಕ್ಕು 'ಹೌದು ಕಣ್ರೋ ಅವಳು ಬರಾವುಕಲ್ತು ಮಣೆಗಾರಿಕೆ ಮಾಡೋದೊಂದೇ ಬಾಕಿ" *(ಪು. 70)*

ಕ್ರೈಸ್ತ ಮಿಷನರಿಗಳು ಮುಕುಂದಯ್ಯನಿಗೆ ಶೂದ್ರ ವರ್ಗ ಬ್ರಾಹ್ಮಣಶಾಹಿಯ ವಿರುದ್ಧ ನಡೆಸಬೇಕಾದ ಹೋರಾಟದ ಬಗ್ಗೆ ತಿಳಿವಳಿಕೆ ಕೊಡುತ್ತಾರೆಯೇ ಹೊರತು ಅದರಲ್ಲಿ ಒಂದೇ ಒಂದು ಶಬ್ದ ಕೂಡಾ ಹೆಂಗಸರಿಗೆ ಸಂಬಂಧಿಸಿದ ಶಿಕ್ಷಣ, ಸಮಾನತೆಯ ಬಗೆಗೆ ಉಸಿರೆತ್ತುವುದಿಲ್ಲ.

ಈ ವಿಚಾರ ಇಲ್ಲಿ ನಾನು ಪ್ರಸ್ತಾಪಿಸುವುದಕ್ಕೆ ಕಾರಣವಿದೆ. ವಸಾಹತುಶಾಹಿಯ ಸಂದರ್ಭದಲ್ಲಿನ 'ರಾಷ್ಟ್ರೀಯತೆ' ಸೃಷ್ಟಿಸಿದ ರಾಷ್ಟ್ರೀಯ ಇಬ್ಬಂದಿತನದಲ್ಲಿ ಮಹಿಳಾ ಪ್ರಶ್ನೆಯೂ ಒಂದು ಎಂದು ಈಗಾಗಲೇ ಚರ್ಚಿತವಾಗಿರುವ ವಿಚಾರ. ಮಹಿಳೆಯರ ಸಬಲತೆಯನ್ನು ಅವರನ್ನು ಒಂದು 'ಸಮೂಹ'ವಾಗಿ ಪರಿಗಣಿಸಿ ರಾಷ್ಟ್ರೀಯ ಚಳವಳಿಯ ಮುಂಚೂಣಿಯಲ್ಲಿ ಇರಬೇಕೆಂದು ಬಯಸಿದ ಗಾಂಧೀಜಿಯವರಂತಹ ರಾಷ್ಟ್ರೀಯ ನಾಯಕರೇ 'ಕುಟುಂಬ'ದ ಚೌಕಟ್ಟಿನೊಳಗೆ ಅಂತಹ ಸಮೂಹ ಪ್ರಜ್ಞೆಯ ಕರ್ತೃತ್ವ ಶಕ್ತಿಯನ್ನು ವೈಯಕ್ತಿಕ ನೆಲೆಯಲ್ಲಿ ನಿರಾಕರಣ ಮಾಡುವುದು ಕಾಣಸಿಗುತ್ತದೆ. ಏಕೆಂದರೆ ಗೃಹಕೃತ್ಯದ ಜವಾಬ್ದಾರಿಯ ನಿರ್ವಹಣೆಗಾಗಿ, 'ಮನೆ' 'ಕುಟುಂಬ' 'ಸಂಸ್ಕೃತಿ'ಯ ಆಕರವಾಗಿ 'ಮನೆಯೊಡತಿ' ಯಾಗುವುದಕ್ಕಾಗಿ.

ಗಾಂಧೀಜಿಯವರ ಸುಧಾರಣಾವಾದಿ ರಾಜಕೀಯದಲ್ಲಿ ನಂಬಿಕೆ ಇಟ್ಟ ಕುವೆಂಪುರವರು ಸೃಷ್ಟಿಸಿದ ಸ್ತ್ರೀ ಪಾತ್ರಗಳು ಗೃಹಕೃತ್ಯದ ವಿಧಿಗೆ ಅಂಟಿಕೊಂಡಂತಹವುಗಳು. 'ಕುವೆಂಪು ಸಮಗ್ರ ಗದ್ಯ'ದ ಸಂಪುಟ 2ರ ಸಂದರ್ಶನದಲ್ಲಿ ಕುವೆಂಪು ನುಡಿಯುತ್ತಾರೆ. "ಗೃಹ ಧರ್ಮವನ್ನು ಸಹ ಸ್ತ್ರೀ ಸಮನ್ವಯಗೊಳಿಸಬೇಕೆಂಬುದೇ ನನ್ನ ನಿಲುವು"*(ಪು. 916)*

"ಮನೆ ಮನೆಯ ತಪಸ್ವಿನಿಯ ಮುಂದೆ ಲಕ್ಷ್ಮೀಬಾಯಿ ಸರೋಜಿನಿ ನಾಯ್ಡು ರಾಜಕಾರಣಿಗಳು ಸಾಮಾನ್ಯರೇ" (ಪು. 852)

ಹೊಸಲಾಚೆಗೆ ನೀನೋದರೆ
ಹೊಸಲೀಚೆಗೆ ಬೆಳಕಿಲ್ಲ
ಹೆಸರಾಸೆಗೆ ನೀ ಸೋತರೆ
ಉಸಿರಾಸೆಯೆ ನಮಗಿಲ್ಲ

(ಮನೆ ಮನೆಯ ತಪಿಸ್ವಿನಿ)

ಕುವೆಂಪುರವರ ಈ ನಿಲುವಿನಿಂದಾಗಿ ಅವರ ಸ್ತ್ರೀ ಪಾತ್ರಗಳು ಜ್ಞಾನ, ಅಧಿಕಾರ, ಸ್ವಯಂ ಪ್ರತಿಭೆಯನ್ನು ಅಂಚಿಗೆ ಒತ್ತರಿಸಿ ರೂಪು ತಳೆದಿವೆ. 'ಕಾನೂನು ಸುಬ್ಬಮ್ಮ ಹೆಗ್ಗಡತಿ'ಯ ಸೀತೆ–ಹೂವಯ್ಯರ ಸಂಬಂಧ ಗುರು–ಶಿಷ್ಯೆ ಸಂಬಂಧ. ಹೂವಯ್ಯನ ಪ್ರಕೃತಿ ವರ್ಣನೆ, ಭಾವಸಮಾಧಿ, ಆತ್ಮ–ದೇಹ ಸಂಬಂಧಿತ ಪ್ರಶ್ನೆಗಳು ಆಕೆಯನ್ನು ಉನ್ನತ ರೀತಿಗೆ ಏರಿಸುವ ಅಂಶಗಳು. ಹೂವಯ್ಯನನ್ನು ಬಿಟ್ಟು ಬೇರೆಯವರನ್ನು ಮದುವೆಯಾಗಲಿಚ್ಛಿಸದ ಆಕೆ ವಾಚ್ಯದಲ್ಲಿ, ಸುಪ್ತವಾಗಿ ಬಯಸಿದಂತೆ ಆಕೆ ಮದುವೆಯಾಗಲೇಬೇಕಿದ್ದ ಕೃಷ್ಣಪ್ಪಗೌಡ ಸಾಯುತ್ತಾನೆ. ಗೊಂದಲ–ಗದ್ದಲದಲ್ಲಿ ರಾಮಯ್ಯ ಆಕೆಗೆ ತಾಳಿ ಕಟ್ಟದೇ ಪುರೋಹಿತ ಕಟ್ಟಿದ ಎಂದಾಗುತ್ತದೆ. ತಾಳಿಯ ಒಡೆತನ, ಸಿಕ್ಕು, ಮತ್ತೊಂದಿರದ ಸೀತೆ ಎಲ್ಲಾ ಘಟನಾವಳಿ ಕಳೆದು ಹೂವಯ್ಯನಲ್ಲಿಗೆ ಧಾವಿಸುತ್ತಾಳೆ. ಹೀಗೆ ವಿಧಿಯ ಘಟನಾವಳಿಯಿಂದ ಹತ್ತಿರ ಬರುವ ಅವರ ಸಂಬಂಧ ಜನ್ಮ ಜನ್ಮಾಂತರದ ಸಂಬಂಧ ಎಂದೇ ಕುವೆಂಪು ಎಣಿಸುತ್ತಾರೆ. ಈ ಬಗ್ಗೆ ತೇಜಸ್ವಿಯವರು "ಸೀತೆ ಹೂವಯ್ಯನಿಗೆ ಕೊಟ್ಟ ಕಾಗದ ಆತನಿಗೆ ತಲುಪದೇ ರಾಮಯ್ಯನಿಗೆ ತಲುಪುತ್ತದೆ. ಅದು ನೇರವಾಗಿ ಹೂವಯ್ಯನಿಗೇ ತಲುಪಿದ್ದರೆ ಹೂವಯ್ಯನ ಆದರ್ಶವಾದಕ್ಕೆ ಇನ್ನೂ ಕಠೋರ ಅಗ್ನಿಪರೀಕ್ಷೆಯೂ ಒದಗುತ್ತಿತ್ತು. ಅನೇಕ ಬಾರಿ ಆದರ್ಶವಾದದ ಒಲವು ಹೂವಯ್ಯನನ್ನು ರಕ್ಷಿಸುವುದರ ತನಕ ಹೋಗುತ್ತದೆ ಎನ್ನುತ್ತಾರಲ್ಲ"



ಅರಣ್ಯದಲ್ಲಿ ಸೀತೆಯ ಅಡುಗೆ – ಪುರುಷೋತ್ತಮ ಅಡತೆ (ರಾಮಾಯಣ ದರ್ಶನಂ)

ಎಂದು ಸಂದರ್ಶನದಲ್ಲಿ ಕೇಳಿದಾಗ ಕುವೆಂಪು '..ರೆ ...ವಿಮರ್ಶಕರ ಬಗ್ಗೆ ಮಾತನಾಡುತ್ತಾ "ಕೃತಿಯ ವಿಕೃತ ವಿಮರ್ಶೆ" ಎನ್ನುತ್ತಾರೆ. "...ಇನ್ನೊಬ್ಬ ಕೃಷ್ಣಪ್ಪನನ್ನೇ ಹುಲಿ ಏಕೆ ಸಾಯಿಸಬೇಕಿತ್ತು ಎನ್ನಬಹುದು. ಮತ್ತೊಬ್ಬ ವಾಸ್ತವವಾದಿ, ಸುಬ್ಬಮ್ಮ ಏಕೆ ಗರ್ಭಸ್ರಾವ ಮಾಡಿಸಿಕೊಳ್ಳಬೇಕಿತ್ತು. ಅವಳಿಗೆ ಮಗು ಜನಿಸಿದ್ದರೆ ಆಗಿನ ಕಾಲದ ಸಾಮಾಜಿಕ ಪರಿಸರದ ಪ್ರತಿಕ್ರಿಯೆಯನ್ನು ಇನ್ನೂ ವಾಸ್ತವವಾಗಿ ಚಿತ್ರಿಸಬಹುದಿತ್ತು ಎನ್ನಬಹುದು. ಈ ತರಹದ ಚಿಂತನೆಗಳು. ಆಧ್ಯಾತ್ಮ, ತತ್ವ ಮೀಮಾಂಸೆಗಳಾಗುತ್ತವೆಯೇ ಹೊರತು ಸಾಹಿತ್ಯ ವಿಮರ್ಶೆ ಅಲ್ಲ....?" (ಕುವೆಂಪು ಸಮಗ್ರ ಗದ್ಯ–ಸಂಪುಟ 2) *(ಪು. 1010)*

ಸಾಹಿತ್ಯ ವಿಮರ್ಶೆ ಕೃತಿ ಆಧಾರಿತ ಎನ್ನಬಹುದಾದರೂ ಸಾಹಿತ್ಯಕೃತಿ ಯೊಂದರಲ್ಲಿ ಇರುವ ನೆಲೆಗಳು ಕೇವಲ ಸಾಹಿತ್ಯಕವಾಗಿರುವುದಿಲ್ಲ. ಒಟ್ಟು ಸಾಮಾಜಿಕ ವಿಮರ್ಶೆಯ ನೆಲೆಗಳಾಗಿರುತ್ತವೆ. ಹಾಗಾಗಿ ಸಾಹಿತ್ಯ ವಿಮರ್ಶೆ ಸಾಮಾಜಿಕ, ತಾತ್ವಿಕ, ಸಂಸ್ಕೃತಿಯ ನೆಲೆಗಳನ್ನು ಗ್ರಹಿಸಿಕೊಳ್ಳುವ ಪರಿಭಾಷೆಯನ್ನು ಒಳಗೊಂಡಿರಬೇಕಾಗುತ್ತದೆ.

ಕುವೆಂಪುರವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ'ಯ ಸೀತೆ–ಹೂವಯ್ಯನ ಸಂಬಂಧ ಹೀಗಿದೆ:

"ಆಕೆಯ ಹಾಗೂ ಹೂವಯ್ಯನ ಬಾಳು ಒಡಲ ಸೋಕಿನ ಗೊಡವೆಯಿಲ್ಲದೆ ಪರಸ್ಪರ ಎರಡು ಆತ್ಮಗಳ ಪ್ರೋಜ್ವಲ ಜೀವನ... ಶುದ್ಧವಾದ ಆತ್ಮಕ್ಕೆ ಸಂಬಂಧಪಟ್ಟ ಅತೀಂದ್ರಿಯವಾಗಿತ್ತು. ಆ ಹೊನ್ನಿನ ಗಟ್ಟಿಯಲ್ಲಿ ಒಂದು ವೇಳೆ ಕಾಳಿಕೆಯ ರೇಖೆ ಸುಳಿದುದಾದರೆ, ಒಡನೆಯೇ ಇಬ್ಬರೂ ಪ್ರಯತ್ನದಿಂದ ಅದನ್ನು ನಿವಾರಿಸುತ್ತಿದ್ದರು. ಉರಿಯುವ ಬತ್ತಿಯ ತುದಿಯಲ್ಲಿ ಕರಿ ಕಟ್ಟಿಕೊಂಡರೆ ಅದನ್ನು ತೊಡೆದುಹಾಕಿ ದೀಪದ ಕುಡಿ ಮತ್ತಷ್ಟು ಉಜ್ವಲವಾಗಿ ತೊಳಗಿ ಬೆಳಗಿಸುವಂತೆ..." *(ಪು. 586)*

ಹೀಗಿರುವ ಈ ಸೀತೆ ನಮಗೆ ಏನನ್ನು ಹೇಳುತ್ತಾಳೆ. ಈ ಆಧ್ಯಾತ್ಮದ ಹೊರೆಯನ್ನು ಹೊರುವಷ್ಟು ಸೀತೆ ಸ್ವಯಂ ಪ್ರತಿಭೆಯಿಂದ ಕಂಗೊಳಿಸುತ್ತಾಳೆಯೇ ಎಂಬುದು ಇಲ್ಲಿಯ ಪ್ರಶ್ನೆ. ಇಲ್ಲಿ ಗಂಗಿ, ಸುಬ್ಬಮ್ಮ – ಬಡತನ, ಕುಸಂಸ್ಕೃತಿಯ ನೆಲೆಯ ಹೆಣ್ಣು ಮಕ್ಕಳು. ಇವರ ಕುಸಂಸ್ಕೃತಿಯಿಂದಾಗಿ ಇವರು ದುರಂತ, ಅಧಃಪತನವನ್ನು ಕಾಣುತ್ತಾರೆ. ಬಡತನ, ಕುಸಂಸ್ಕೃತಿ, ಅವರ ಸಾಮಾಜಿಕ ಸ್ತರಗಳು ಅವರ ಲೈಂಗಿಕ ದುರ್ವರ್ತನೆಗೆ, ದುರಂತಕ್ಕೆ ಕಾರಣ ಎಂಬ ಅಂಶದ ಮೇಲೆ ಬೆಳಕು ಚೆಲ್ಲಲಾಗಿದ್ದರೂ–ವಿಧಿ ನಿಯಾಮಕ ಜಗತ್ತಿನಲ್ಲಿ, ವಿಧಿ ನಿಯಾಮಕಗಳ ಮೇಲಿನ ಉಜ್ವಲತೆಯಿಂದಾಗಿ ಈ ಚಿತ್ರಣಗಳು 'ಪ್ರಾತಿನಿಧಿಕ'ವಾಗಿ ಉಳಿದುಬಿಡುತ್ತವೆ. ಕಾದಂಬರಿಯ ಪ್ರಧಾನ ವೈಚಾರಿಕತೆ ವಿಧಿ ನಿರ್ಣಾಯಕ, ಪ್ರಕೃತಿ ಸಹಜ ಎಂದಾಗುವುದರಿಂದ ಕುವೆಂಪು ಕಾಲದಲ್ಲಿ ಮಾಡುತ್ತಿದ್ದ ಸ್ತ್ರೀ ಸಂಬಂಧಿತ ಆಧುನಿಕತೆಯ ಸಂಸ್ಕೃತಿಯ ಜೊತೆಗಾಗಲೀ, ರಾಜಕಾರಣದ ಜೊತೆಗಾಗಲೀ ಇಲ್ಲಿ ಸಂವಾದ ಇಲ್ಲ. ಈ ಬಗೆಯ ಸಂವಾದಗಳು ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಪುನರ್‌ನಿರ್ಮಾಣದ ಪರಿಭಾಷೆಯನ್ನು ಆಯ್ದುಕೊಳ್ಳುತ್ತಿರುತ್ತವೆ. ಆದರೆ ಕುವೆಂಪುರವರು ಸ್ತ್ರೀ ಸಂಬಂಧಿತ ಪಾತ್ರಗಳಲ್ಲಿ ಇಂತಹ ಆಶಯಗಳ ಜೊತೆ ಸಂವಾದ ರೂಪು ಗೊಂಡಿಲ್ಲ; ಕಾದಂಬರಿಗಳಲ್ಲಿ ಶೂದ್ರವರ್ಗದಲ್ಲಿ ಸಂಚಲನ ಉಂಟುಮಾಡುವ ಸಾಂಸ್ಕೃತಿಕ ಬಂಡಾಯದ ಎಳೆಗಳು ಕಂಡುಬಂದಂತೆ ಸ್ತ್ರೀ ಸಂಬಂಧಿತ ಪ್ರಶ್ನೆಗಳಲ್ಲಿ ಮೂಡುವುದಿಲ್ಲ.

ಕೊನೆಯದಾಗಿ ಕುವೆಂಪುರವರ ಸ್ತ್ರೀಪಾತ್ರಗಳ ಸುತ್ತ ಸುತ್ತಿದಾಗ 'ಮಲೆಗಳಲ್ಲಿ ಮದುಮಗಳು'ನಲ್ಲಿ ಮೂಡಿ ಬಂದ ಪೀಂಚಲು ಸ್ವಷ್ಟ್ಯಾತ್ಮಕ ಪಾತ್ರವಾಗಿ, ಸ್ವತಂತ್ರ ಚಿಂತನೆಯಲ್ಲಿ ಮೂಡಿಬಂದ ಹೊಲೆಯರ ಹೆಣ್ಣು ಮಗಳಾಗಿ ಕಾಣಿಸುತ್ತಾಳೆ. ಆಕೆಯ ಮನಸ್ಸಿಗೆ ತಾರತಮ್ಯದ ಪ್ರಶ್ನೆಗಳಾಗಲೀ, ಜಾತಿಯ ಶ್ರೇಣೀಕರಣವಾಗಲೀ ಗಂಭೀರವಾಗಿ ಮೂಡಿಬರುವುದಿಲ್ಲ. ಐತ ಕೇಳುವುದನ್ನು ಮುಕುಂದಯ್ಯ ಕೇಳಿದರೂ ಕೊಡಬಲ್ಲ ಹೆಣ್ಣು ಈಕೆ. ಮಹತ್ವವಾದುದೊಂದಕ್ಕೆ, ಹಿರಿದಾದುದೊಂದಕ್ಕೆ ತನ್ನನ್ನು ಸಮರ್ಪಿಸಿಕೊಳ್ಳುತ್ತಿದ್ದೇನೆಂಬ ಭಾವ ಆಕೆಗೆ. ಐತನನ್ನು ಪಕ್ಕದಲ್ಲಿಟ್ಟು ಮುಕುಂದಯ್ಯ, ಚಿನ್ನಮ್ಮ ತಿಮ್ಮಿ ಇತರರಿಗೆ, ಅವರ ಜೀವನಕ್ಕೆ ಒಂದು ಸೂತ್ರ, ಸೇತುವೆಯಾಗುವ ಪೀಂಚಲು ವ್ಯಕ್ತಿತ್ವ ಕುವೆಂಪುರವರ ಕಾದಂಬರಿಯಲ್ಲಿ ಸೃಷ್ಟಿಸಲಾದ ಒಂದು ಗಟ್ಟಿ ಧ್ವನಿಯ ಸ್ವತಂತ್ರ ನೆಲೆಯ ಪಾತ್ರ ಎಂದು ಗುರುತಿಸಬಹುದಾಗಿದೆ.


ಒಟ್ಟಾಗಿ ಹೇಳುವುದಾದರೆ, ಕುವೆಂಪುರವರು 'ಶ್ರೀರಾಮಾಯಣ ದರ್ಶನಂ'ನಲ್ಲಿ ಊರ್ಮಿಳೆ, ಮಂಥರೆಯಂತಹ ನಿರ್ಲಕ್ಷಿತ ಪಾತ್ರಗಳನ್ನು ಹಾಗೂ ಇತರ ಪುರಾಣದ ಪಾತ್ರಗಳನ್ನು ಮಾನವೀಯ ನೆಲೆಯಲ್ಲಿ ವಿಭಿನ್ನವಾಗಿ ಚಿತ್ರಿಸಿದ್ದರೂ ಅವರ ವ್ಯಕ್ತಿತ್ವಗಳು ರೂಢಿಯ ಸ್ಥಾಪಿತ ಮೌಲ್ಯಗಳನ್ನೇ ಎತ್ತಿಹಿಡಿಯುತ್ತವೆ. ಹಾಗೂ ಇವರ ಸೀತೆ, ಸಾವಿತ್ರಿ, ಊರ್ಮಿಳೆಯರು ಹೆಣ್ಣಿನ ಸ್ವಷ್ಟ್ಯಾತ್ಮಕ ಬದುಕಿಗೆ ಹೊಸ ದಾರಿಗಳನ್ನು ತೆರೆಯುತ್ತಾರೆಂದು ನಿರೀಕ್ಷಿಸುವುದು ಕಷ್ಟಸಾಧ್ಯ.

ಕುವೆಂಪುರವರ ಆಧ್ಯಾತ್ಮಿಕ ನೋಟದ ಆದರ್ಶೀಕರಣದಿಂದಾಗಿ ಮಹಿಳಾ ಚಿತ್ರಣದಲ್ಲಿ 'ತಾಯ್ತನ'ದ ಮೇಲೇ ವಿಶೇಷ ಗಮನ ಕೇಂದ್ರೀಕೃತವಾಗಿರುವುದನ್ನು ಗಮನಿಸಬಹುದು.

ಹೂವಯ್ಯನ ಆದರ್ಶದಲ್ಲಿ ಅಥವ ಮುಕುಂದಯ್ಯನ ನೋಟದಲ್ಲಿ, ವಿಚಾರಧಾರೆಗಳು ಹೊಸ ಬದುಕಿನತ್ತ ಹೆಜ್ಜೆ ಹಾಕಲು ಹಲವಾರು ದಾರಿಗಳನ್ನು ಹೊಂದಿದ್ದರೂ ಹೆಣ್ಣಿನ ವಿಚಾರದಲ್ಲಿ ಮಾತ್ರ ವಾಸ್ತವ ಸತ್ಯಗಳಿಗೇ ಪ್ರಾಶಸ್ತ್ಯವಿರುವುದು ಕಂಡುಬರುತ್ತದೆ. ಹಾಗಾಗಿ ಹೂವಯ್ಯನಂತಹ ಕೇಂದ್ರ ಪ್ರಜ್ಞೆಯ, ಕೇಂದ್ರ ವೈಚಾರಿಕತೆಯ ವಾಹಿನಿಯಲ್ಲಿ ಮಹಿಳಾ ಪಾತ್ರಗಳು ತಮ್ಮನ್ನು ಗುರುತಿಸಿಕೊಳ್ಳುವುದು ಮುಖ್ಯವಾಗುತ್ತದೆ.

'ವಿಧಿ ಚಿತ್ತದ' ಪ್ರಜ್ಞೆಯ ವೈಚಾರಿಕತೆ ಕೂಡಾ ಕುವೆಂಪು ಕಾದಂಬರಿಗಳಲ್ಲಿ ಪ್ರಮುಖ ಪಾತ್ರ ವಹಿಸುವುದರಿಂದ ಮಹಿಳಾ ಪ್ರಜ್ಞೆಯ ಲೋಕ ತೆರೆದುಕೊಳ್ಳುವಲ್ಲಿ, ಮಹಿಳಾ ಬದುಕಿನ ಸಂಘರ್ಷಗಳನ್ನು ಮುಂಚೂಣಿಗೆ ತರುವಲ್ಲಿ ವಿಧಿ ಚಿತ್ತ ಒಂದು ದೊಡ್ಡ ಮಿತಿಯಾಗಿಯೇ ಧ್ವನಿಸುತ್ತದೆ. ಹಾಗಾಗಿ ಅವರ ಸಮಕಾಲೀನರಲ್ಲಿ ಧ್ವನಿಸಿದ್ದ ಮಹಿಳಾ ಆಧುನಿಕ ವಿಚಾರಗಳು ಇವರ ಬರಹಗಳಲ್ಲಿ ಕಾಣಸಿಗುವುದಿಲ್ಲ. ಆದರೆ ಮಾನವೀಯ ನೆಲೆಯ ನೋಟಗಳು ಮಹಿಳೆಯನ್ನು ಚಿತ್ರಿಸುವಲ್ಲಿ ವಿಶೇಷವಾದ ಪಾತ್ರವನ್ನು ವಹಿಸುತ್ತವೆ ಎಂದು ಹೇಳಬಹುದು. ❑

(ಕುಪ್ಪಳಿಯಲ್ಲಿ ಕುವೆಂಪುರವರ ಕುರಿತಾಗಿ ಏರ್ಪಡಿಸಿದ ಮಹಿಳಾ ಕಮ್ಮಟದಲ್ಲಿ ಮಂಡಿಸಲಾದ ಪ್ರಬಂಧ)



ಮಾಧ್ಯಮ ಮತ್ತು ಮಹಿಳೆ

■ ಸಿ.ಜಿ. ಮಂಜುಳಾ

ಬದುಕಿನಲ್ಲಿ ನಾವು ಗ್ರಹಿಸುವ ಎಲ್ಲಾ ಹೊಸ ಪ್ರತಿಮೆಗಳು, ಆದರ್ಶಗಳು, ಪ್ರತಿಮಾ ಪ್ರತೀಕಗಳು ಒಂದಲ್ಲ ಒಂದು ಮಾಧ್ಯಮಗಳಿಂದ ಪ್ರಭಾವಿತವಾಗಿರುತ್ತವೆ. ಮಾಧ್ಯಮಗಳು ಹೊಸ ವಿಚಾರಗಳನ್ನು, ಹೊಸ ಶೋಧಗಳನ್ನು, ಹೊಸ ಜನರನ್ನು ನಮ್ಮ ಬದುಕಿನೊಳಗೆ ತರುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ. ಇವು ಮನವನ್ನು ಚೇತನಗೊಳಿಸುವ ರಂಜಿಸುವ ಸಾಧನವೂ ಹೌದು. ಈ ಕ್ಷೇತ್ರ ಈಗ ಮಾಹಿತಿ ಮನರಂಜನೆಗೆ (ಇನ್‌ಫೋಟೇನ್‌ಮೆಂಟ್) ಅಪಾರ ಗ್ರಾಹಕರನ್ನು ಹೊಂದಿರುವ ಬಹು ದೊಡ್ಡ ಯುವ ಮಾರುಕಟ್ಟೆಯಾಗಿ ರಾಷ್ಟ್ರದಲ್ಲಿ ತೀವ್ರವಾಗಿ ಬೆಳೆಯುತ್ತಿದೆ.

ವಿವಿಧ ಮಾಧ್ಯಮಗಳ ಸಂಗಮದ ಈ ಯುಗದಲ್ಲಿ ತಂತ್ರಜ್ಞಾನದ ಹೊಸ ಹೊಸ ಆವಿಷ್ಕಾರಗಳಿಂದಾಗಿ ಮುದ್ರಣ ಮಾಧ್ಯಮ ಅತ್ಯಂತ ಸ್ಪರ್ಧಾತ್ಮಕವಾಗಿ ಬೆಳೆಯುತ್ತಿದೆ. ಪತ್ರಿಕೆಗಳ ಸಂಖ್ಯೆ ಹೆಚ್ಚುತ್ತಿದ್ದಂತೆ ಪ್ರಸಾರದ ವ್ಯಾಪ್ತಿಯೂ ವಿಸ್ತಾರವಾಗುತ್ತಿದೆ. ಇಂತಹ ಒಂದು ಪ್ರಭಾವಿ ಕ್ಷೇತ್ರದಲ್ಲಿ ಮಹಿಳೆಯ ಪಾತ್ರ ಎಂತಹದ್ದು? ಪತ್ರಿಕೆಗಳ ಆರಂಭದ ಕಾಲದಲ್ಲಿ ನಮ್ಮ ಮಹಿಳೆಯರು ಈ ಕ್ಷೇತ್ರವನ್ನು ಹೇಗೆ ಪರಿಭಾವಿಸಿದರು? ಸಾರ್ವಜನಿಕ ಪ್ರಜ್ಞಾವಲಯದ ಮೇಲೆ ಪ್ರಮುಖ ಪ್ರಭಾವ ಬೀರುವ ಈ ಕ್ಷೇತ್ರದಲ್ಲಿ ಮಹಿಳಾ ದೃಷ್ಟಿ, ಸಂವೇದನೆಗಳು ಒಡಮೂಡಿವೆಯೆ ಇತ್ಯಾದಿ ವಿಚಾರಗಳ ಅವಲೋಕನಕ್ಕೆ ಕನ್ನಡದ ಪತ್ರಿಕಾ ರಂಗದ ಇತಿಹಾಸದತ್ತ ಒಂದು ಹಿನ್ನೋಟ ಅಗತ್ಯವಾಗುತ್ತದೆ.

ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಪತ್ರಿಕೆಗಳು ವಹಿಸಿದ ಪಾತ್ರದಿಂದಾಗಿ ಪತ್ರಿಕಾ ಮಾಧ್ಯಮದ ಮಹತ್ವ ಹೆಚ್ಚಾಯಿತು. ಬ್ರಿಟಿಷ್ ಆಡಳಿತಗಾರರಿಗೆ ಹಾಗೂ ಸಾರ್ವಜನಿಕರಿಗೆ ವಿಚಾರಗಳನ್ನು ತಿಳಿಯಪಡಿಸಲು ಪತ್ರಿಕೆಗಳೇ ಸಂವಹನ ಮಾಧ್ಯಮಗಳಾಗಿದ್ದವು. ಮರಾಠಿ ಪತ್ರಿಕೆ 'ಕೇಸರಿ' ಮೂಲಕ ಲೋಕಮಾನ್ಯ ತಿಲಕರು ಹಾಗೂ 'ಹಿಂದ್ ಸ್ವರಾಜ್,' 'ಯಂಗ್ ಇಂಡಿಯಾ,' 'ಹರಿಜನ್' ಹಾಗೂ ಇತರ ಪ್ರಕಟಣೆಗಳ ಮೂಲಕ ಮಹಾತ್ಮಾಗಾಂಧಿಯವರು ಸ್ವಾತಂತ್ರ್ಯದ ಕನಸನ್ನು, ಹೋರಾಟದ ಕೆಚ್ಚನ್ನು, ಸಾಮಾಜಿಕ ಸುಧಾರಣೆಗಳ ತತ್ವಗಳನ್ನು ಜನರಿಗೆ ತಲುಪಿಸಿದರು.

ಕರ್ನಾಟಕದಲ್ಲೂ ಪತ್ರಿಕೆಗಳ ಮೂಲಕ ಜನರನ್ನು ತಲುಪುವಂತಹ ಇಂತಹ ಉಪಕ್ರಮಗಳನ್ನು ಕಾಣಬಹುದು. ಮಹಿಳಾ ಸಂಪಾದಕತ್ವದ ಹಲವು ಪತ್ರಿಕೆಗಳಂತೂ ಇಂತಹ ಸಮಾಜ ಸುಧಾರಣೆಯ ವಿಚಾರಗಳ ಅಭಿವ್ಯಕ್ತಿಗೆ ವೇದಿಕೆಯೇ ಆಯಿತು. ಈ ನಿಟ್ಟಿನಲ್ಲಿ, 1916ರಲ್ಲಿ 'ಕರ್ನಾಟಕ ನಂದಿನಿ' ಪತ್ರಿಕೆಯನ್ನು ತಮ್ಮ ಸಂಪಾದಕತ್ವದಲ್ಲಿ ಆರಂಭಿಸುವ ಮೂಲಕ ನಂಜನಗೂಡು ತಿರುಮಲಾಂಬಾ 20ನೇ ಶತಮಾನದ ಮೊದಲ ಸಂಪಾದಕಿ, ಪ್ರಕಾಶಕಿ ಹಾಗೂ ಮುದ್ರಕಿ ಎಂಬಂತಹ ಹೆಗ್ಗಳಿಕೆಗೆ ಪಾತ್ರರಾದರು.

ಇದಕ್ಕೂ ಮುಂಚೆ 73 ವರ್ಷಗಳ ಹಿಂದೆಯೇ ಮಂಗಳೂರಿನ ಬಾಸೆಲ್ ಮಿಷನ್‌ನ ಜರ್ಮನ್ ಕ್ರೈಸ್ತ ಮಿಷನರಿ ಹರ್ಮನ್ ಮೋಗ್ಲಿಂಗ್ ಕನ್ನಡದ ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ' (1–7–1843) ಆರಂಭಿಸಿದ್ದರು. ಇಲ್ಲಿಂದ ಆರಂಭವಾಗುವ ಕನ್ನಡ ಪತ್ರಿಕೋದ್ಯಮದ ಮೊದಲ ಹಂತ, 1884ರಲ್ಲಿ ಮೈಸೂರಿನಲ್ಲಿ ವೆಂಕಟಕೃಷ್ಣಯ್ಯ ಅವರು ಆರಂಭಿಸಿದ 'ಹಿತಬೋಧಿನಿ'ಯೊಂದಿಗೆ ಅಂತ್ಯ ಕಾಣುತ್ತದೆ. 1890ರ ವರೆಗೂ ಈ ಪತ್ರಿಕೆ ಪ್ರಸಾರದಲ್ಲಿತ್ತು. ನವರಾತ್ರಿ, ಐಶ್ವರ್ಯ, ಪ್ರಜಾಪ್ರತಿನಿಧಿಗಳ ಸಭೆ, ನಿರಂಕುಶ ಪ್ರಭುತ್ವ, ನಂಜನಗೂಡು ರೈಲ್ವೆ ಸೇರಿದಂತೆ ಸ್ತ್ರೀಯರ ಹಕ್ಕುಗಳನ್ನು ಕುರಿತಾದ ವಿಚಾರವೂ ಹಿತಬೋಧಿನಿಯಲ್ಲಿ ಪ್ರಕಟವಾಗಿತ್ತು. ಇಷ್ಟರೊಳಗೆ ಆಧುನಿಕ ಪತ್ರಿಕೋದ್ಯಮದ ಮೂಲ ಚೌಕಟ್ಟು ಬೇರೂರಿತ್ತು. ಜೊತೆಗೆ ಮೈಸೂರಿನ ಭಾಷ್ಯಂ ಕುಟುಂಬದವರು 'ಮೈಸೂರು ವೃತ್ತಾಂತ ಬೋಧಿನಿ' (1859ರಲ್ಲಿ ಆರಂಭ) ಎಂಬ ವಾರಪತ್ರಿಕೆಯನ್ನು ಪ್ರಕಟಿಸುತ್ತಿದ್ದರು. ಇದು ಕನ್ನಡದ ಮೊದಲ ನಿಯತಕಾಲಿಕೆ. ಈ ಪತ್ರಿಕೆ ಐದು ವರ್ಷ ಕಾಲ ನಡೆದುಕೊಂಡು ಬಂದಿತೆಂದು ಡಿವಿಜಿ ತಮ್ಮ 'ಜ್ಞಾಪಕಚಿತ್ರಶಾಲೆ'ಯಲ್ಲಿ ಜ್ಞಾಪಿಸಿಕೊಂಡಿದ್ದಾರೆ. ಇದರ ಸಂಪಾದಕ/ಪ್ರಕಾಶಕರು ಭಾಷ್ಯಂ ತಿರುಮಲಾಚಾರ್ಯ ಮತ್ತು ಭಾಷ್ಯಾಚಾರ್ಯ. ಪತ್ರಿಕೆ ಎಂಬುದನ್ನು ಜನಮನದಲ್ಲಿ ರೂಢಿಸಿದ ಇವರು 'ಕನ್ನಡ ಪತ್ರಿಕಾ ಪಿತಾಮಹರು.' (ಶ್ರೀನಿವಾಸ ಹಾವನೂರ, ಕನ್ನಡ ಪತ್ರಿಕಾ ಸೂಚಿ, ಪುಟ 11).

19ನೇ ಶತಮಾನದ ಅಂತ್ಯದಲ್ಲಿ ಸತಿಪದ್ಧತಿ ಬಹಿಷ್ಕಾರ, ಬಾಲ್ಯವಿವಾಹ ನಿಷೇಧ, ಸ್ತ್ರೀಶಿಕ್ಷಣ, ವಿಧವೆಯರ ಸ್ಥಾನಮಾನ ಸುಧಾರಣೆಗಾಗಿ ಶ್ರಮಿಸಿದ ಸುಧಾರಣಾ ಚಳವಳಿ ಹಾಗೂ 20ನೇ ಶತಮಾನದ ಪೂರ್ವಾರ್ಧದಲ್ಲಿ ಸ್ವಾತಂತ್ರ್ಯಚಳವಳಿಯ ಪ್ರಭಾವ ತೀವ್ರವಾಗುತ್ತಿದ್ದ ಕಾಲದಲ್ಲಿ ಸಾಹಿತ್ಯ ರಚನೆ ಮಾಡಿದವರು ತಿರುಮಲಾಂಬಾ. 1913ರಲ್ಲಿ 'ಮಧುರವಾಣಿ' ಪತ್ರಿಕೆಯ ಲೇಖನ ಸ್ಪರ್ಧೆಗೆ 'ಸದಾಚಾರ'ವೆಂಬ ಪ್ರಬಂಧ ಬರೆದರು. ನಂತರ ಅದೇ ವರ್ಷದಲ್ಲೇ 1913ರ ಅಕ್ಟೋಬರ್ ತಿಂಗಳಲ್ಲಿ ಸತೀಹಿತೈಷಿಣಿ ಗ್ರಂಥಮಾಲೆ ಆರಂಭಿಸುತ್ತಾರೆ. ಗ್ರಂಥಮಾಲೆ ಪ್ರಕಟಣೆ ಯೋಜನೆ ಆರಂಭಕ್ಕೆ ಕಾರಣಗಳನ್ನು ತಿರುಮಲಾಂಬಾ ಅವರು ವಿವರಿಸುವುದು ಹೀಗೆ:

"ಅರ್ಧ ಸಂಖ್ಯಾಕರಾದ ಸ್ತ್ರೀಯರ ಹಿತಾಹಿತದ ಅನೇಕ ಪ್ರಶ್ನೆಗಳ ವಿಚಾರವನ್ನು ಪುರುಷರೇ ಮಾಡುತ್ತ ಬಂದಿದ್ದು ಬೇರೆ ಬೇರೆಯವರು


ತಮ ತಮಗೆ ಸರಿ ತೋರಿದಂತೆ ಭಿನ್ನ ಭಿನ್ನವಾದ ತಮ್ಮ ಅಭಿಪ್ರಾಯಗಳನ್ನು ಪ್ರಕಟಸುತ್ತಲಿರುವರು. ಆದರೆ ಆರ್ಯ ಸ್ತ್ರೀಯರ ಸ್ವಾಭಾವಿಕ ಧ್ಯೇಯವು ಆವುದಾಗಿರಬೇಕು, ಅವರ ಬೌದ್ಧಿಕ ಮಾನಸಿಕ–ಆತ್ಮಿಕ ಉನ್ನತಿಯಾಗಬೇಕಾದರೆ ಅವರಿಗೆ ಆವ ಬಗೆಯ ಶಿಕ್ಷಣದ ಅವಶ್ಯಕತೆಯಿರುವುದು. ಈಗಿನ ಸಮಾಜಸ್ಥಿತಿಯಲ್ಲಿ ಅವರ ಪ್ರಗತಿಗೆ ವಿರೋಧವಾಗಿರುವ ಆಚಾರ ವಿಚಾರಗಳಾವುವು ಮತ್ತು ಅವುಗಳನ್ನು ಆವ ಬಗೆಯಾಗಿ ಸುಧಾರಿಸಬೇಕು ಈ ಮುಂತಾದ ವಿಷಯಗಳನ್ನು ಚರ್ಚಿಸುವ ಅಧಿಕಾರವು ವಿಚಾರಪರರಾದ ಸ್ತ್ರೀಯರಿಗೆ ವಿಶೇಷವಾಗಿರುವುದು. ಇದಕ್ಕಾಗಿಯೇ ಸತಿ ಹಿತೈಷಿಣಿ ಗ್ರಂಥಮಾಲೆ ಪ್ರಕಟಣೆ ಆರಂಭಿಸಲಾಯಿತು.”

ಲಭ್ಯವಿರುವ ಮಾಹಿತಿಗಳ ಪ್ರಕಾರ, ಸತೀಹಿತೈಷಿಣಿ ಗ್ರಂಥಮಾಲೆಯಲ್ಲಿ ಒಟ್ಟು 41 ಪುಸ್ತಕಗಳು ಪ್ರಕಟವಾಗಿವೆ. ಇದರಲ್ಲಿ 28 ಪುಸ್ತಕಗಳು ತಿರುಮಲಾಂಬಾ ಅವರ ಸ್ವಂತ ರಚನೆ. 14 ಕಾದಂಬರಿ, 3 ನಾಟಕ, ಪ್ರಾರ್ಥನಾಗೀತಗಳು. ಉಳಿದವು ವಿವಿಧ ವಿಚಾರಗಳನ್ನು ಕುರಿತ ಪ್ರಬಂಧಗಳು.

ಈ ಗ್ರಂಥಮಾಲೆಗಳು ಆರಂಭದ ಜೊತೆಗೆ ಹೆಣ್ಣು ಮಕ್ಕಳಿಗಾಗಿಯೇ 'ಕರ್ನಾಟಕ ನಂದಿನಿ' ಎಂಬ ಮಾಸ ಪತ್ರಿಕೆಯನ್ನೂ ಆರಂಭಿಸಿದರು. 'ಕರ್ನಾಟಕ ನಂದಿನಿ' ಮಹಿಳೆ ಸಂಪಾದಕತ್ವದ ಮೊದಲ ಪತ್ರಿಕೆ. ಜೊತೆಗೆ ಬಾಲಕ–ಬಾಲಕಿಯರಿಗಾಗಿ ತಿಳಿಗನ್ನಡ ನುಡಿಯ ಮಾಸಪತ್ರಿಕೆ 'ಸನ್ಮಾರ್ಗ ದರ್ಶಿನಿ'ಯನ್ನು ತಿರುಮಲಾಂಬಾ ಅವರು ಪ್ರಕಟಿಸಲಾರಂಭಿಸಿದರು.

'ಕರ್ನಾಟಕ ನಂದಿನಿ' ಪತ್ರಿಕೆ ಪ್ರಕಟಣೆಯ ಉದ್ದೇಶವನ್ನು ತಿರುಮಲಾಂಬಾ ಅವರು ವಿವರಿಸುವುದು ಹೀಗೆ: “ನಮ್ಮ ಕರ್ನಾಟಕದಲ್ಲಿ ಸ್ತ್ರೀಯರು ಲೇಖನ ಕಾರ್ಯದಲ್ಲಾಗಲೀ ಸಮಾಜ ಕಲ್ಯಾಣಕ್ಕೆ ಬೇಕಾಗುವ ಸುಧಾರಣಾ ವಿಷಯದಲ್ಲಾಗಲಿ ಅಭಿಪ್ರಾಯಗಳನ್ನು ಕೊಡುವುದರಲ್ಲಿ ಅರ್ಹರಾಗಿಲ್ಲವೆಂದೂ ಸ್ತ್ರೀಯರು ಗೃಹಕೃತ್ಯವೊಂದಲ್ಲದೆ ಮತ್ಯಾವುದರಲ್ಲಿಯೂ ಅನುಭವವಿಲ್ಲದವರೆಂದೂ ಅಪವಾದ ಉಂಟಾಗಿದೆಯಷ್ಟೇ? ಅದನ್ನು ತಪ್ಪಿಸಲೆಂದೇ ಈ ಕರ್ನಾಟಕ ನಂದಿನಿ ಹುಟ್ಟಿತು.”

ಇದಕ್ಕಾಗಿ ಸಮಾಜ ಸುಧಾರಣೆಗೆ ಒತ್ತು ನೀಡುವ ಲೇಖನಗಳನ್ನು ತಿರುಮಲಾಂಬಾ ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದರು. ಹೆಣ್ಣುಮಕ್ಕಳನ್ನು ಕುರಿತಾದ ನಿಲುವುಗಳ ಬದಲಾವಣೆಗೆ ಪ್ರೇರಕ ಎನ್ನಬಹುದಾದ ಅಂಶಗಳನ್ನು ಈ ಬರಹಗಳು ಒಳಗೊಂಡಿರುತ್ತಿದ್ದವು ಎಂಬುದು ಇಲ್ಲಿ ಮುಖ್ಯ. ಹೆಣ್ಣುಮಕ್ಕಳ ಶಿಕ್ಷಣ ಹಾಗೂ ಚಿನ್ನಾಭರಣಗಳ ವ್ಯಾಮೋಹದ ಬಗ್ಗೆ ಅವರು ಹೇಳಿರುವ ಮಾತುಗಳನ್ನು ಗಮನಿಸಿ.



“ನೀವು ನಿಮ್ಮ ಹೆಣ್ಣು ಮಕ್ಕಳಿಗೆ ಒಡವೆಗಳನ್ನು ಮಾಡಿಸುವುದಕ್ಕಾಗಿ ಕೆಲವು ಪೌನುಗಳನ್ನು ಕೆಲವು ರೂಪಾಯಿಗಳನ್ನು ತೆಗೆದಿಟ್ಟಿರಬಹುದಲ್ಲವೆ? ಈ ಹಣವನ್ನು ವೆಚ್ಚ ಮಾಡಿ ನಿಮ್ಮ ಮಗಳಿಗೆ ಚೆನ್ನಾಗಿ ವಿದ್ಯೆ ಕಲಿಸಿಟ್ಟರೆ ಮುಂದೆ ಅದರಿಂದ ಎಷ್ಟು ಲಾಭವುಂಟೆಂಬುದನ್ನು ಯೋಚಿಸಿ ನೋಡಿರಿ.”

“ಒಂದು ವೇಳೆ ನೀವು ನಿಮ್ಮ ಮಗಳಿಗೆ ಆಭರಣಗಳ ರೂಪವಾಗಿ ಸ್ವಲ್ಪ ಆಸ್ತಿಯನ್ನು ಮಾಡಿಟ್ಟರೆ ಅವಳ ಗಂಡನು ತನ್ನ ಆಸ್ತಿಯನ್ನು ಹಾಳು ಮಾಡಿ ಕೊಂಡರೂ ನೀವು ಆಸ್ತಿಯನ್ನು ಮಾಡಿಕೊಡುವುದರಿಂದ ಮತ್ತಷ್ಟು ಅಪಾಯವೇ ಹೊರತು ಪ್ರಯೋಜನವಿಲ್ಲ. ಏಕೆಂದರೆ ತನ್ನ ಆಸ್ತಿಯನ್ನೆಲ್ಲ ಹಾಳು ಮಾಡಿಕೊಳ್ಳುವಷ್ಟು ಆ ವಿವೇಕಿಯಾದ ಗಂಡ ಹೆಂಡತಿಯ ಒಡವೆಗಳನ್ನು ಹಾಳು ಮಾಡದೆ ಬಿಡುವನೆ? ಅದರಿಂದ ನೀವು ನಿಮ್ಮ ಮಕ್ಕಳಿಗೆ ಒಡವೆಗಳನ್ನು ಮಾಡಿಡುವದರ ಬದಲು ಆ ಹಣಕ್ಕೆ ಕೋ ಅಪರೇಟಿವ್ ಸೊಸೈಟಿಯಲ್ಲಿ ಕೆಲವು ಷೇರುಗಳನ್ನೂ, ಕ್ಯಾಷ್ ಸರ್ಟಿಫಿಕೇಟುಗಳನ್ನೂ ಅವರ ಹೆಸರಿನಲ್ಲಿಯೇ ತೆಗೆದು ಅವರಿಗೆ ಆಸ್ತಿಮಾಡಿಕೊಡಿ” (ಕರ್ನಾಟಕ ನಂದಿನಿ, 1920 ಮಾರ್ಚ್ ಸಂಚಿಕೆ.)

ಕರ್ನಾಟಕ ನಂದಿನಿಯಲ್ಲಿ ಪ್ರಕಟವಾಗುತ್ತಿದ್ದ 'ನಿತ್ಯ ಚರ್ಯೆ' ಆರೋಗ್ಯಕ್ಕೆ ಸಂಬಂಧಿಸಿದ ಹಲವು ಉಪಯುಕ್ತ ಸಲಹೆ ಸೂಚನೆಗಳನ್ನು ನೀಡುತ್ತಿತ್ತು. ಶಿಶುಗಳ ಯೋಗಕ್ಷೇಮ, ಶಿಶುಗಳ ಮರಣಕ್ಕೆ ಮೂಲ ಕಾರಣಗಳು, ಶಿಶುಗಳ ಮರಣ ನಿವಾರಣಾ ಉಪಾಯಗಳು – ಇಂತಹ ಹಲವು ಸಾಮಾಜಿಕ ಆರೋಗ್ಯ ಸಂಬಂಧಿ ಲೇಖನಗಳ ಮೂಲಕ ಜನರಲ್ಲಿ ಅರಿವು ಮೂಡಿಸುವ ಪ್ರಯತ್ನ ಇತ್ತು. ಇಂತಹ ಸಾಮಾಜಿಕ ಅರಿವು ಮೂಡಿಸುವ ಲೇಖನಗಳೇ ಅಲ್ಲದೆ ಕಥೆ ಕಾದಂಬರಿ ಕಾವ್ಯ ಹಾಗೂ ನಾಟಕಗಳ ಪ್ರಕಟಣೆಗೂ ಈ ಪತ್ರಿಕೆಗಳಲ್ಲಿ ಅವಕಾಶವಿತ್ತು.

'ನಂದಿನಿ'ಯಲ್ಲಿ 1919ರಲ್ಲಿ ಪ್ರಕಟವಾಗಿರುವ ತುಳಸೀಬಾಯಿ (ಕಾವ್ಯನಾಮ ಮಲ್ಲಿಗೆ) ಅವರ 'ಕಾಳಗೌಡ' ಕಥನ ಕವನ ಗಮನ ಸೆಳೆಯುತ್ತದೆ. ಸ್ತ್ರೀಯರು ನಿರ್ವಹಿಸುವ ಮನೆಗೆಲಸಕ್ಕೆ ಆರ್ಥಿಕ ಮೌಲ್ಯವಿಲ್ಲವೆಂದು ಹೀನವಾಗಿ ಕಾಣುವ ದೃಷ್ಟಿಯ ಬಗ್ಗೆ ಈ ಕವನದ 'ನಿವೇದನ'ದಲ್ಲಿ ತಿರುಮಲಾಂಬಾ ಟೀಕಿಸಿದ್ದಾರೆ. “ಸ್ತ್ರೀಯರ ಕ್ಷಮೆ, ಶ್ರಮ, ಸಹಿಷ್ಣುತೆ, ಗೃಹಕಾರ್ಯ ನಿರ್ವಹಣದಲ್ಲಿ ಅವರಿಗಿರುವ ವಿಚಕ್ಷಣೆ, ಸಾಂಸಾರಿಕ ಕ್ಲೇಶಗಳನ್ನು ಸಹಿಸಿ ತಮ್ಮ ತಮ್ಮ ಗಂಡಸರನ್ನು ಸಂತೋಷಪಡಿಸಲು ಅವರು ಪಡುವ ಜಾಗರೂಕತೆ ಇತ್ಯಾದಿ. ಸದ್ಗುಣಗಳ ನೆಲೆಯನ್ನು ಸರಿಯಾಗಿ ತಿಳಿಯದೆ ಸ್ತ್ರೀಯರೆಂದರೆ ತಮ್ಮ ಊಳಿಗಕ್ಕಾಗಿಯೇ ಭಗವಂತನಿಂದ ನಿರ್ಮಿಸಲ್ಪಟ್ಟ ಮೂಕ ಪ್ರಾಣಿಗಳೆಂದರಿತು...” ನಡೆಸಿಕೊಳ್ಳುವುದನ್ನು ಟೀಕಿಸುತ್ತಾರೆ. “ಉಡುಗೆ ಸಾರಣೆಯೊಂದು ಕೆಲಸವೆ? ಅಡುಗೆಮನೆಯ ಕೆಲಸ ಲೆಕ್ಕವೆ?” ಎಂದು ತನ್ನ ಪತ್ನಿ ಮಾಳಿಯನ್ನು ಟೀಕಿಸುವ ಕಥನ ಕವನದ ನಾಯಕ ಗೌಡ, ಕವನದ ಕೊನೆಯಲ್ಲಿ “ಸಾಗದೇ ಮನೆಕೆಲಸ ನನ್ನಿಂದೇಗಲಾರದು ಮಾಳಿಯೇ ಬರಿದೇ ನಿನ್ನನ್ನು ಜರಿಯುತ್ತಿದ್ದೆನು” ಎಂದು ಹೇಳುತ್ತಾನೆ. ನವಿರಾದ ಹಾಸ್ಯವಿರುವ ಈ ಕವನದಲ್ಲಿ ಹಲವು ಮಿತಿಯ ಮಧ್ಯೆಯೂ ಮನೆಗೆಲಸದ ಬಗ್ಗೆ ವ್ಯಕ್ತವಾಗಿರುವ ಪ್ರಜ್ಞೆ ಅತ್ಯಂತ ಪ್ರಸ್ತುತ.

ನಂಜನಗೂಡು ತಿರುಮಲಾಂಬಾ ಅವರ ಸಂಪಾದಕತ್ವದ 'ಕರ್ನಾಟಕ ನಂದಿನಿ' ಪತ್ರಿಕೆಯ ನಂತರ ಕಾಣುವ ಮಹಿಳಾ ಸಂಪಾದಕತ್ವದ ಮತ್ತೊಂದು ಪತ್ರಿಕೆ 'ಸರಸ್ವತಿ.' ಆರ್. ಕಲ್ಯಾಣಮ್ಮ (1894–1965) ಈ ಪತ್ರಿಕೆಯ ಸಂಪಾದಕರು. 1917ರಲ್ಲಿ ಆರಂಭವಾದ ಈ ಪತ್ರಿಕೆ ಆರ್ಥಿಕ ಅಡಚಣೆಯಿಂದ ನಿಂತು ಮತ್ತೆ 1920ರಲ್ಲಿ ಪುನರಾರಂಭಗೊಂಡು 42 ವರ್ಷಗಳವರೆಗೆ ನಿರಂತರವಾಗಿ ಪ್ರಕಟವಾಗಿದೆ.



'ಸರಸ್ವತಿ' – ಆರ್. ಕಲ್ಯಾಣಮ್ಮ

1917ರ ಅಕ್ಟೋಬರ್ ತಿಂಗಳಲ್ಲಿ ಪಕ್ಷಪತ್ರಿಕೆಯಾಗಿ 'ಸರಸ್ವತಿ'ಯನ್ನು ಹೊರತಂದಾಗ ಅದರ 'ಅವತಾರಿಕೆ'ಯಲ್ಲಿ ಕಲ್ಯಾಣಮ್ಮನವರು ತಮ್ಮ ಧ್ಯೇಯೋದ್ದೇಶಗಳನ್ನು ವಿವರಿಸುವುದು ಹೀಗೆ:

"....ಸಂಪತ್ತು, ಸರಸ್ವತಿ (ವಿದ್ಯೆ), ಸತ್ಯ, ಸಂತಾನ, ಸದನುಗ್ರಹ (ಮಹಾತ್ಮರ ಕೃಪೆ), ಉತ್ತಮಪದವಿಕ ಸತ್ಕಾರ್ಯ ಮುಂತಾದ ಸದ್ಗುಣ ಸಂಪನ್ನರಾದ ಮಹಿಳೆಯರ ಸಂಖ್ಯೆಯು ಎಷ್ಟು ವಿಸ್ತಾರವಾಗಿ ವೃದ್ಧಿಯಾಗುವುದೋ ದೇಶದ ಅಭಿವೃದ್ಧಿಯೂ ಅಷ್ಟು ವಿಸ್ತರಿಸುವುದು. ಈ ಸಂಕಲ್ಪವು ಫಲವಾಗಬೇಕಾದರೆ ಸ್ತ್ರೀಯರ ವಿಜಯಾಭ್ಯುದಯಗಳನ್ನು ಸೂಚಿಸತಕ್ಕವುಗಳೂ ಸ್ತ್ರೀಯರಿಂದಲೇ ಪ್ರಕಟಿಸಲ್ಪಡತಕ್ಕವುಗಳೂ ಆದ ದೇಶಭಾಷಾ ಪತ್ರಿಕೆಗಳು ಅನೇಕವಾಗಿಯೂ ಅತ್ಯವಶ್ಯಕವಾಗಿಯೂ ಪ್ರಚಾರಕ್ಕೆ ಬರಬೇಕು... ಈಗ ಪ್ರಚಾರದಲ್ಲಿರುವ ಪತ್ರಿಕೆಗಳಲ್ಲಿ ಸ್ತ್ರೀ ವಿದ್ಯಾಭಿಮಾನವುಳ್ಳವುಗಳು ಒಂದೆರಡಿದ್ದಾಗ್ಯೂ ಆರ್ಯಕಾಲದ ಸ್ತ್ರೀಯರ ಮೇಲ್ಪಂಕ್ತಿಯನ್ನು ಅನುಸರಿಸಿ ಸ್ತ್ರೀಯರ ನೈಸರ್ಗಿಕ ಧರ್ಮಗಳನ್ನು ಬೋಧಿಸತಕ್ಕ ಸಚಿತ್ರ ಪತ್ರಿಕೆಗಳು ಸ್ತ್ರೀಯರಿಂದಲೇ ಪ್ರಕಟಿಸಲ್ಪಡಬೇಕಾದ ಅವಶ್ಯಕವು ಪ್ರಕೃತದಲ್ಲಿ ಮುಖ್ಯವೆಂದು ತೋರಿತು. ಅಂತಹ ಪತ್ರಿಕೆಯೊಂದನ್ನು ಪ್ರಕಟಿಸಬೇಕೆಂಬ ಕುತೂಹಲವು ನಾನು ವಿದ್ಯಾರ್ಥಿನಿಯಾಗಿದ್ದ ಕಾಲದಿಂದಲೂ ನನ್ನ ಮನಸ್ಸಿನಲ್ಲಿದ್ದಿತು. ಈಗ ನಾಲ್ಕು ವರ್ಷಗಳ ಹಿಂದೆ (ಅಂದರೆ 1913ರಲ್ಲಿ) ಪೂಜ್ಯರಾದ ಕೆಲವು ಮಂದಿ ಸೋದರೀಮಣಿಯರ ಸಹಾಯದಿಂದ 'ಶ್ರೀ ಶಾರದಾ ಸ್ತ್ರೀ ಸಮಾಜ'ವೆಂಬ ಹೆಸರಿನಿಂದ ಭಾರತ ಮಹಿಳೆಯರ ಶ್ರೇಯೋಭಿವೃದ್ಧಿಗನುಕೂಲವಾದ ಸಮಾಜವೊಂದನ್ನು ಸ್ಥಾಪಿಸಿದ್ದಾಯಿತು. ....ಸಮಾಜವು ಅಭಿವೃದ್ಧಿಯಾದ ಹಾಗೆಲ್ಲಾ ಪತ್ರಿಕಾಪ್ರಚಾರ ವಿಷಯಕವಾದ ನನ್ನ ಮನಸ್ಸಂಕಲ್ಪವೂ ಮತ್ತಷ್ಟು ದೃಢವಾಗಿ ನನ್ನನ್ನು ತ್ವರೆ ಮಾಡಲಾರಂಭಿಸಿತು. ನನ್ನ ಸಂಕಲ್ಪದ ಭಾಗ್ಯವೇನೋ ಎಂಬಂತೆ ಈ ವರ್ಷದಲ್ಲಿ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಲಾ ಶಾಲೆಯಲ್ಲಿ ನಡೆದ ನಮ್ಮ ಸಮಾಜದ ನಾಲ್ಕನೆಯ ವಾರ್ಷಿಕೋತ್ಸವಕ್ಕೆ ಅಧ್ಯಕ್ಷರಾಗಿ (ಈಗ ಮೈಸೂರು ಸಂಸ್ಥಾನದ ಮಂತ್ರಾಲೋಚನಾ ಸಭೆಯಲ್ಲಿ ಕೌನ್ಸಿಲರ್ ಪದವಿಯಲ್ಲಿರುವ ಶ್ರೀಯುತ ಎ.ಆರ್. ಬ್ಯಾನರ್ಜಿಯವರ ಧರ್ಮಪತ್ನಿಯರಾದ) ಶ್ರೀಮತಿ ನಳಿನೀದೇವಿಯವರು ಅಗ್ರಾಸನವನ್ನಲಂಕರಿಸಿದ್ದರು. ಅವರು ತಮ್ಮ ಸಂಭಾಷಣೆಯಲ್ಲಿ ಪತ್ರಿಕಾ ಪ್ರಚಾರವನ್ನು ಪ್ರತಿಪಾದಿಸುತ್ತಾ 'ಬಂಗಾಳದಲ್ಲಿ ಶ್ರೀಮತಿ ಸ್ವರ್ಣಕುಮಾರಿದೇವಿಯವರಿಂದ ಪ್ರಕಟಿಸಲ್ಪಡುತ್ತಿರುವ 'ಭಾರತಿ' ಎಂಬ ಪತ್ರಿಕೆಯ ರಚನಾಕ್ರಮವನ್ನನುಸರಿಸಿ ಕನ್ನಡದಲ್ಲೊಂದು ಪತ್ರಿಕೆಯನ್ನು ಯಾರಾದರೂ ನಡೆಸಿದರೆ ಅದಕ್ಕೆ ತಾವು ಸಹಾಯ ಮಾಡುವುದಾಗಿ ಸೂಚಿಸಿದರು. ವಿದ್ಯಾವತಿಯೂ ಶ್ರೀಮಂತಿನಿಯೂ ಆದ ಆ ದೇವಿಯರ ಸಂಭಾಷಣೆಯು ನನ್ನ ಸಂಕಲ್ಪವು ಕ್ರಿಯಾರೂಪವಾಗಿ ಅನುಷ್ಠಾನಕ್ಕೆ ಬರತಕ್ಕ ಶುಭಸೂಚನೆಯಾಗಿ ಪರಿಣಮಿಸಿತು..."

ತಿರುಮಲಾಂಬಾ ಅವರು 'ಕರ್ನಾಟಕ ನಂದಿನಿ' ಪತ್ರಿಕೆಯನ್ನು ಈಗಾಗಲೇ ಪ್ರಾರಂಭಿಸಿದ್ದರು. 'ಜಯಕರ್ನಾಟಕ'ದಂಥ ಪತ್ರಿಕೆಯಲ್ಲಿ ಪ್ರಾರಂಭದಿಂದಲೂ ಸ್ತ್ರೀಪರವಾದ ಹಿತಾಸಕ್ತಿಯಿತ್ತು. ಆದರೆ ಮಹಿಳೆಯರ ಸರ್ವತೋಮುಖವಾದ ಏಳಿಗೆಯನ್ನು ಗುರಿಯಾಗಿಟ್ಟುಕೊಂಡ ಸಚಿತ್ರ ಪತ್ರಿಕೆಗಳನ್ನು ಮಹಿಳೆಯರೇ ಪ್ರಕಟಿಸಿದ ಉದಾಹರಣೆ ಕನ್ನಡದಲ್ಲಿ ಇರಲಿಲ್ಲ. ಇಂಥ ವಿಶಿಷ್ಟ ಸ್ವರೂಪವನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಾರಂಭವಾದ 'ಸರಸ್ವತಿ' ಕಲ್ಯಾಣಮ್ಮನವರ ಮೇಲಿನ ಮಾತುಗಳಲ್ಲಿ ಸೂಚಿತವಾಗುವಂತೆ ಬಂಗಾಳದ 'ಭಾರತಿ'ಯ ರಚನಾಕ್ರಮವನ್ನು ತನ್ನ ಮಾದರಿಯಾಗಿರಿಸಿಕೊಂಡಿರಲು ಸಾಧ್ಯ. ಸರಸ್ವತಿಯು ಆರಂಭವಾದ ಕಾಲಕ್ಕೆ 'ಭಾರತಿ' ಪತ್ರಿಕೆಯನ್ನು ಸ್ವರ್ಣಕುಮಾರಿದೇವಿ (ರವೀಂದ್ರನಾಥ ಠಾಕೂರರ ಸಂಬಂಧಿ)ಯವರ ಮಗಳು ಸರಳಾದೇವಿಯವರು ನಡೆಸುತ್ತಿದ್ದರು. ಈ ಸರಳಾದೇವಿಯವರ ವಿಚಾರಗಳು ರಜಪೂತ ರಮಣಿಯರ ಅಂತಃಶ್ಚೇತನವನ್ನು ಭಾರತೀಯ ಮಹಿಳೆಯರಲ್ಲಿ ಪುನರುಜ್ಜೀವಿತಗೊಳಿಸುವ ದೃಷ್ಟಿಯು ತೀವ್ರವಾದ ರಾಷ್ಟ್ರೀಯತಾ ಭಾವನೆಯಿಂದ ಪ್ರೇರಿತವಾಗಿದ್ದವು ಎಂಬುದನ್ನು ಗಮನಿಸಿದರೆ ಕಲ್ಯಾಣಮ್ಮನವರು ಆರ್ಯ ಕಾಲದ ಸ್ತ್ರೀಯರ ಮೇಲ್ಪಂಕ್ತಿಯನ್ನು ಅನುಸರಿಸಿ ಸ್ತ್ರೀಯರ ನೈಸರ್ಗಿಕ ಧರ್ಮಗಳನ್ನು ಬೋಧಿಸುವುದನ್ನು ತಮ್ಮ ಪತ್ರಿಕೆಯ ಉದ್ದೇಶವಾಗಿಟ್ಟುಕೊಂಡಿರುವುದರ ಮೂಲ ಹೆಚ್ಚು ಸ್ಪಷ್ಟವಾದೀತು. ಸರಸ್ವತಿ ಎಂಬ ಹೆಸರು 'ಭಾರತಿ' ಎಂಬುದರ ಪರ್ಯಾಯ ಅರ್ಥವನ್ನು ಹೊಂದಿರುವಂಥದು. (ಡಾ. ಬಿ.ಎನ್. ಸುಮಿತ್ರಾಬಾಯಿ, ಕಲ್ಯಾಣಮ್ಮ ಅವರ 'ಸರಸ್ವತಿ'–ಕನ್ನಡ ಪತ್ರಿಕೋದ್ಯಮದ ಇತಿಹಾಸ, ಸಂ: ಶ್ರೀನಿವಾಸ ಹಾವನೂರ; ಕನ್ನಡ ಪತ್ರಿಕಾ ಸೂಚಿ–1843–1972; ಪುಟ 84).

ಮಹಿಳೆಯ ಸಾಂಪ್ರದಾಯಿಕ ಪಾತ್ರಗಳಿಗಿಂತ ವಿಭಿನ್ನವಾಗಿ ನೂಲುವ, ನೇಯುವ ಕಾರ್ಯಗಳಲ್ಲಿ ತೊಡಗಿಕೊಂಡ ಮಹಿಳೆಯರು 'ಸರಸ್ವತಿ' ಪತ್ರಿಕೆಯ ಮುಖಪುಟ ಚಿತ್ರಗಳಾಗಿ ಪ್ರಕಟವಾಗಿರುವುದು ವಿಶಿಷ್ಟ.

"...ಸರಸ್ವತಿಯು ಪುರುಷಯತ್ನವಲ್ಲ... ಸ್ತ್ರೀಯರಿಗೆ ಉಪಯುಕ್ತವಾದ ಲೇಖನಗಳಿಂದ ಕೂಡಿ ಸ್ತ್ರೀ ಸಮೂಹದ ಸೇವೆಯಲ್ಲಿ ತನುವನ್ನು ತೇಯ್ದಿಡಬೇಕೆಂಬುದೇ ಅದರ ಮುಖ್ಯ ಧ್ಯೇಯ... ಸಾಕಾದಷ್ಟು ಪ್ರೋತ್ಸಾಹದ ಮಾತು ಹಾಗಿರಲಿ, ಮುದ್ರಣದ ಕಾರ್ಯವು ಸುಸೂತ್ರವಾಗಿ ನಡೆಯುವುದಕ್ಕೆ ಬೇಕಾದಷ್ಟು ಜನ ಚಂದಾದಾರರೂ ದೊರಕದೆ ಸರಸ್ವತಿಯ ಆರ್ಥಿಕ ಪರಿಸ್ಥಿತಿಯು ಬಹು ಶೋಚನೀಯ ಸ್ಥಿತಿಯಲ್ಲಿದೆ... ಸರಸ್ವತಿಯು ನಿಮಗೆ ಅಗ್ರಾಹ್ಯಳಾದರೂ ನಿಮ್ಮ ಗೃಹಲಕ್ಷ್ಮಿಯರಿಗೂ ಅಕ್ಕ ತಂಗಿಯರಿಗೂ ಪ್ರಿಯಳಾಗಿರಲಿ..." ಈ ಬಗೆಯಲ್ಲಿ ಪತ್ರಿಕೆಯ ಆರ್ಥಿಕ ಅಡಚಣೆಗಳ ಬಗ್ಗೆ ಹಲವಾರು ಬಾರಿ ಅವರು ಬರೆದಿದ್ದಾರೆ.

ಇಂತಹ ಅಡ್ಡಿ ಆತಂಕಗಳ ಮಧ್ಯೆಯೂ ಪತ್ರಿಕೆಯ ಗುಣಮಟ್ಟ ಸುಧಾರಣೆಗೆಗೆ ನಿರಂತರವಾಗಿ ಯತ್ನಿಸುತ್ತಿದ್ದರು ಎಂಬುದಕ್ಕೆ ಈ ಮಾತುಗಳು ಉದಾಹರಣೆ:

"...ಮುಂದಿನ ಸಂಪುಟದಿಂದ ಕೆಲವು ಬದಲಾವಣೆಗಳನ್ನು ಮಾಡಲು ಯತ್ನಿಸಿದೆ. ಕುಸುಮಕುಂಜ, ಗೃಹವಿಜ್ಞಾನ, ವನಿತಾ ವಿನೋದ, ಮುತ್ತಿನಮಾಲೆ, ಚಾರುಚರಿತಾವಳಿ, ಸಾಹಿತ್ಯ ಸರೋಜ, ಕನ್ಯಾಕೈಪಿಡಿ, ಸ್ತ್ರೀ ಸಂಸಾರ ಎನ್ನುವ ಶಿರೋಲೇಖನಗಳನ್ನು ಪ್ರಾರಂಭಿಸಲಿರುವೆವು... ಉತ್ತರ ದೇಶದ ಕೆಲವು ಪ್ರಸಿದ್ಧ ಹಿಂದಿ ಪತ್ರಿಕೆಗಳ ಅತ್ಯುತ್ತಮವಾದ ಸ್ತ್ರೀ ಸಂಬಂಧದ ಲೇಖನಗಳನ್ನು ಪರಿವರ್ತಿಸಿ ಹಾಕುವ ಏರ್ಪಾಡು ಮಾಡಲಾಗಿದೆ. ಸಾಧ್ಯವಾದಷ್ಟು ಸಚಿತ್ರವಾಗಿಯೇ ಪತ್ರಿಕೆಯು ನಡೆಸಲ್ಪಡುವುದು... ಸುಖಲತೆ ಎನ್ನುವುದೊಂದು ಕಾದಂಬರಿಯೂ ಷಹಜಹಾನ್ ಎನ್ನುವುದೊಂದು ನಾಟಕವೂ ಕ್ರಮಶಃ ಪ್ರಕಟಿಸಲ್ಪಡುವುದು..."

ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಗಣ್ಯರಿಂದ ಲೇಖನಗಳನ್ನು ಆಹ್ವಾನಿಸಿ ಪ್ರಕಟಿಸುವ ಮೂಲಕವೂ ಗುಣಮಟ್ಟ ಉಳಿಸಿಕೊಳ್ಳಲು ಅವರು ಪ್ರಯತ್ನ ಪಡುತ್ತಿದ್ದುದನ್ನು ಅವರೇ ನೀಡಿರುವ ಈ ಪಟ್ಟಿಯಿಂದ ತಿಳಿಯಬಹುದು:

"...ಕೊಚ್ಚಿಯ ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯರಾದ ಶ್ರೀಮತಿ ಮಾಧುರಿ ಅಮ್ಮನವರು, ಮದ್ರಾಸ್‌ನ 'ಚಿಂತಾಮಣಿ'ಯ ಸಂಪಾದಕರು ಶ್ರೀಮತಿ ಬಾಲಮ್ಮಾಳ್‌ಅವರೂ, 'ಪ್ರೇಮಾಯತನ'ದ ಪಂಡಿತ ತಾರಾನಾಥ ಯೋಗಿಗಳವರೂ, ಶ್ರೀಯುತರಾದ ದೇವುಡು ನರಸಿಂಹಶಾಸ್ತ್ರಿ ಎಂ.ಎ.,ಯವರೂ, 'ವಿಶ್ವ ಕರ್ನಾಟಕ'ದ ಸಂಪಾದಕರಾದ ಆಲೂರ್ ವೆಂಕಟರಾವ್ ಬಿ.ಎ., ಎಲ್.ಎಲ್.ಬಿ. ಯವರೂ, ಶ್ರೀಯುತರಾದ ಗವಾನಂದ ಕೆರೋಡಿ ಸುಬ್ಬರಾವ್ ಬಿ.ಎ.ಯವರೂ, ಪ್ರಸಿದ್ಧ ನಟ ಟಿ.ಪಿ. ಕೈಲಾಸಂಅವರೂ, ಶ್ರೀಮತಿ ಟಿ.ಕನಕಲಕ್ಷ್ಮಮ್ಮ ಎಂ.ಎ.ಯವರೂ, ಶ್ರೀ ಯು.ಆರ್. ರಾಘವೇಂದ್ರಾಚಾರ್ ಚಾಕಲಬ್ಬಿ ಬಿ.ಎ., ಬಿ.ಎಲ್. ಅವರೂ, ಶ್ರೀಯುತ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಎಂ.ಎ.ಯವರೂ, ಶ್ರೀಯುತ ವಿ.ಬಿ. ಪುರಾಣಿಕ ಬಿ.ಎ.,ಯವರೂ ಲೇಖನಗಳನ್ನು ಬರೆದು ಕೊಡಲೊಪ್ಪಿರುವರು..."

"ಸರಸ್ವತಿ ಪತ್ರಿಕೆಯಲ್ಲಿ ಅವರು ಮೊದಲಲ್ಲಿ ಬರೆದ ಎಷ್ಟೋ ಲೇಖನಗಳು ಸಂಪ್ರದಾಯಸ್ಥರನ್ನು ಎದುರು ಹಾಕಿಕೊಳ್ಳದೆ, ನಯವಾಗಿ ತಿದ್ದುವ ರೀತಿಯಲ್ಲಿವೆ. ಆದರೆ ದೇಶದ ಸಾಂಸ್ಕೃತಿಕ ಪರಿಸರ ಬದಲಾಗತೊಡಗಿದಂತೆ, 40ರ ದಶಕದಲ್ಲಿದ್ದ ಅವರ ಬರಹದ ಧಾಟಿ, ಧೋರಣೆ ಹೆಚ್ಚು ಪ್ರಗತಿಯತ್ತ ಸಾಗಿರುವುದನ್ನು ಕಾಣಬಹುದು" ಎನ್ನುತ್ತಾರೆ ಡಾ. ಬಿ.ಎನ್. ಸುಮಿತ್ರಾಬಾಯಿ (ಸ್ವಾತಂತ್ರ್ಯಪೂರ್ವದ ಐವರು ಕನ್ನಡ ಲೇಖಕಿಯರು: ವಿಚಯ–ಕನ್ನಡ ಸಾಹಿತ್ಯದ ಒಂದು ಸ್ತ್ರೀವಾದಿ ಅಧ್ಯಯನ; ಇಳಾ ಪ್ರಕಾಶನ, ಬೆಂಗಳೂರು ಪುಟ 82)

ಸಾಮಾಜಿಕ ಕಾರ್ಯಕ್ಕೆ ತಮ್ಮ ಬಹುಪಾಲು ಶಕ್ತಿಯನ್ನು ವ್ಯಯಿಸಿದ ಕಲ್ಯಾಣಮ್ಮನವರ ಸೃಜನಶೀಲ ಬರಹ 'ಸರಸ್ವತಿ'ಯ ಪುಟ ತುಂಬಿಸುವ ಅಗತ್ಯದಿಂದಲೂ ಹುಟ್ಟಿತ್ತು. ಅದರಲ್ಲಿ ಸಾಮಾಜಿಕ ವಿಮರ್ಶೆ, ಉಪದೇಶ, ವಿಚಾರಗಳು ಬಹು ಮುಖ್ಯವಾಗಿವೆ. 'ಆರ್ಯ ಮಹಿಳೆಯರ' ಸತ್ವವನ್ನು ಸ್ತ್ರೀಯರಿಗೆ ಮಾದರಿಯಾಗಿ ಕಲಿಸಲೆಂದು 'ಭಕ್ತೆ ಮೀರಾ' 'ಸ್ನೇಹಲತಾ' 'ಸತೀ ಪದ್ಮಿನಿ' 'ಬಲಿಪೀಠದಲ್ಲಿ' 'ಸುಖಲತಾ' ಮುಂತಾದ ಚಾರಿತ್ರಿಕ ಕಾದಂಬರಿ, ನಾಟಕಗಳನ್ನು ಅವರು ರಚಿಸಿದರು.

'ಸರಸ್ವತಿ'ಯ ಮೂಲಕವಾಗಿ ಅನೇಕ ಹೊಸ ಕರ್ತೆಗಾರ್ತಿಯರು ಹುಟ್ಟಿಕೊಳ್ಳಲು ನೆರವಾದರು ಎಂಬುದು ಮುಂದಿನ ಪೀಳಿಗೆಗೆ ಬಹುಮುಖ್ಯವೆನ್ನಬಹುದಾದ ಅವರ ಕಾಣಿಕೆ (ಡಾ. ಬಿ.ಎನ್. ಸುಮಿತ್ರಾಬಾಯಿ: ಸ್ವಾತಂತ್ರ್ಯಪೂರ್ವದ ಐವರು ಕನ್ನಡ ಲೇಖಕಿಯರು: ವಿಚಯ–ಕನ್ನಡ ಸಾಹಿತ್ಯದ ಒಂದು ಸ್ತ್ರೀವಾದಿ ಅಧ್ಯಯನ: ಇಳಾ ಪ್ರಕಾಶನ, ಬೆಂಗಳೂರು ಪುಟ 83).

'ಸರಸ್ವತಿ' ಪತ್ರಿಕೆಯು 'ಮಹಿಳೆಯರು ಬೀದಿಯಲ್ಲಿ ನಡೆದು ಹೋಗುತ್ತಿದ್ದದ್ದೇ ಅಪರಾಧ' ಎನ್ನುತ್ತಿದ್ದ ಕಾಲದಲ್ಲಿ ಆರಂಭವಾಯಿತು. ಅದರಲ್ಲಿ ಇತರ ವಿಷಯಗಳ ಬಗ್ಗೆಯೂ ಲೇಖನಗಳು ಪ್ರಕಟವಾಗಿದ್ದವು. ಮೇಲ್ಮಟ್ಟದ ಸಾಹಿತ್ಯ ಪತ್ರಿಕೆಯಾದ್ದರಿಂದ ಬೇರೆ ಸಾಹಿತ್ಯಕರು ತಾವಾಗಿ ಲೇಖನಗಳನ್ನು ಕಳಿಸುತ್ತಿದ್ದರು. (ಉದಾ: ಪೇಜಾವರ ಸದಾಶಿವರಾಯರು). ಆದರೇನು, ಮಹಿಳೆಯರೇ ಕೊಂಡು ಓದಬೇಕು ಎಂಬ ಸದಾಶಯ ಅವರದಾಗಿತ್ತು. "ಕನ್ನಡ ಮಹಿಳೆಯರಿಗಾಗಿ ಕಾಲು ಶತಮಾನ ಸೇವೆ ಸಲ್ಲಿಸಿರುವ ಪತ್ರಿಕೆ ಇದೊಂದೇ ಎನ್ನುವುದು ಎಲ್ಲರೂ ಅರಿತ ವಿಷಯವೇ. ಆದರೂ ತಮ್ಮ ಮನೋಭಿಪ್ರಾಯವನ್ನೂ ತಮ್ಮ ಉನ್ನತಿಯ ಮಾರ್ಗವನ್ನೂ ಧೈರ್ಯದಿಂದ ಸೂಚಿಸಲು, ತಮ್ಮ ಮಕ್ಕಳ ಪ್ರಗತಿಗೆ ಸರಿಯಾದ ಹಾದಿಯನ್ನು ತೋರಲು ಸಾಕಷ್ಟು ಮಹಿಳೆಯರು ಮುಂದಾಗಬೇಕು" (ಜನವರಿ 1946ರ ಸಂಚಿಕೆ).

ಆದರೆ ಅಪರೂಪಕ್ಕೆ ಆ ರೀತಿ ಮುಂದಾಗಬಯಸಿದ ಸ್ತ್ರೀಯರಿಗೆ ಮನೆಯಲ್ಲಿ ಸ್ವಾತಂತ್ರ್ಯವಿರಲಿಲ್ಲ–ಪತ್ರಿಕೆಗೆ ಚಂದಾಹಣ ಕೊಡುವುದಕ್ಕೂ! ಹಾಗೆ ಯಾರಾದರೂ ಮಹಿಳೆ ಸಂಪಾದಕಿಗೆ ಪತ್ರ ಬರೆದರೆ ಸಾಕು. ಸುಮಾರು 40–50 ಪ್ರತಿಗಳು ಆ ರೀತಿ ಉಚಿತವಾಗಿ ವಿನಿಯೋಗವಾಗುತ್ತಿದ್ದವು.

1955ರಲ್ಲಿ ಮುಂದೆ 'ಸರಸ್ವತಿ'ಯನ್ನು ಬೇರೆಯವರು ಮುಂದುವರಿಸಿದರಾದರೂ 1963ಕ್ಕೆ ತಡೆದು ನಿಂತಿತು. ಯಾವುದೇ ಪ್ರಥಮ ದರ್ಜೆಯ ಪುರುಷ ಪತ್ರಕರ್ತರ ಸಾಲಿನಲ್ಲಿ ಎಣೆಯಾಗಿ ನಿಲ್ಲಬೇಕಾದ ಹೆಸರು ಕಲ್ಯಾಣಮ್ಮನವರು (ಕನ್ನಡ ಪತ್ರಿಕೋದ್ಯಮದ ಇತಿಹಾಸ, ಶ್ರೀನಿವಾಸ ಹಾವನೂರ; ಕನ್ನಡ ಪತ್ರಿಕಾ ಸೂಚಿ–1843–1972; ಪುಟ 25).

'ಸೋದರಿ' ಎಂ.ಆರ್. ಲಕ್ಷ್ಮಮ್ಮ

1950ರಲ್ಲಿ 'ಸೋದರಿ' ವಾರಪತ್ರಿಕೆಯನ್ನು ಆರಂಭಿಸಿದ ಎಂ.ಆರ್. ಲಕ್ಷ್ಮಮ್ಮನವರು (1913–1984) ರಾಜಕೀಯ ರಂಗದಲ್ಲೂ ಕ್ರಿಯಾಶೀಲರಾಗಿದ್ದವರು. ಮುಂದೆ ಅವರು ಶಾಸಕರೂ ಆದರು. 'ಸೋದರಿ' ಪತ್ರಿಕೆ ಆರಂಭಿಸುವುದಕ್ಕೆ ಮೊದಲು ವಯಸ್ಕರ ಶಿಕ್ಷಣ ಚಟುವಟಿಕೆಯ ಅಂಗವಾಗಿ ಹೊರತರಲಾಗುತ್ತಿದ್ದ 'ಬೆಳಕು' ಎಂಬ ವಾರಪತ್ರಿಕೆಯ ಸಂಪಾದಕಿಯಾಗಿ ಕಾರ್ಯನಿರ್ವಹಿಸಿದ ಅನುಭವ ಪಡೆದುಕೊಂಡಿದ್ದರು. ಆ ಕಾಲದಲ್ಲಿ ಈ ಪತ್ರಿಕೆಯ ಪ್ರಸಾರ ಸಂಖ್ಯೆ ಮೂರರಿಂದ ನಾಲ್ಕು ಸಾವಿರವಿತ್ತು. ಕರ್ನಾಟಕದ ಹೊರಗಿನ ರಾಜ್ಯಗಳಲ್ಲೂ ಪತ್ರಿಕೆಯ ಚಂದಾದಾರರಿದ್ದರು. ಕಾದಂಬರಿಗಳನ್ನು ಧಾರಾವಾಹಿಯಾಗಿ ಪ್ರಕಟಿಸಿದ ಮೊದಲ ಪತ್ರಿಕೆ ಇದು ಎಂಬ ಹೆಗ್ಗಳಿಕೆಯೂ ಇದೆ. ಏಳು ವರ್ಷಗಳ ಕಾಲ ಮಾಸಪತ್ರಿಕೆಯಾಗಿ ಪ್ರಕಟವಾಯಿತು. ಕಡೆಗೆ ಆರ್ಥಿಕ ನಷ್ಟದಿಂದ ಸ್ಥಗಿತವಾಯಿತು.

ಶ್ಯಾಮಲಾದೇವಿ ಬೆಳಗಾಂವಕರ

ಧಾರವಾಡದ ಶ್ಯಾಮಲಾದೇವಿ ಬೆಳಗಾಂವಕರ ಅವರು 1934ರಲ್ಲಿ, ನಂತರ ಒಂಬತ್ತು ವರ್ಷಗಳಲ್ಲಿ ಅನೇಕ ಕಥೆ, ವಿಮರ್ಶಾಬರಹಗಳು, ಅನುವಾದಗಳನ್ನು ಪ್ರಕಟಿಸಿದ್ದಾರೆ. ಶ್ಯಾಮಲಾ ಅವರು ಸೃಜನಶೀಲ ಲೇಖಕಿ ಅಷ್ಟೇ ಅಲ್ಲ ಸಂಪಾದನ, ಪ್ರಕಾಶನ, ಮಹಿಳಾ ಪರಿಷತ್ತಿನ ಸದಸ್ಯತ್ವ, ಮುಖಂಡತ್ವ, ಧಾರವಾಡ ನಗರಸಭೆಯ ಸದಸ್ಯತ್ವ, ಮಕ್ಕಳ ಕೂಟದ ನಿರ್ದೇಶಕತ್ವ... ಹೀಗೆ ಹಲವು ದಿಕ್ಕುಗಳಲ್ಲಿ ದುಡಿದರು. 'ಜಯ ಕರ್ನಾಟಕ' ಪತ್ರಿಕೆಯ ಸಹಸಂಪಾದಕಿಯಾಗಿ ಕಾರ್ಯ ನಿರ್ವಹಿಸಿದರು. 1943ರಲ್ಲಿ ನಾಲ್ಕನೆಯ ಮಗು ಪಡೆದ ನಂತರ ಕಾಯಿಲೆಯಾಗಿ ತೀರಿಕೊಂಡರು.

(ಮುಂದುವರೆವುದು)




‘ಕ್ಷಮೆ ಕೇಳುವುದಿಲ್ಲ’

ನೀ ನನ್ನ ಗಂಡನಷ್ಟೇ ಆಗಿರಲಿಲ್ಲ
ನನ್ನ ಹೃದಯ ಸಾಮ್ರಾಜ್ಯದ
ಅಧಿಪತಿಯಾಗಿದ್ದೆ!
ನನ್ನ ಮೈ, ಮನ, ಬುದ್ಧಿಗಳನ್ನು
ನೀನು ಆಕ್ರಮಿಸಿಕೊಂಡ ರೀತಿ
ನನಗೇ ಅರಿವಾಗಿರಲಿಲ್ಲ!

ನನ್ನ ಮೈ ಅರಳಿದಾಗ
ನನ್ನ ಮನ ಹೂಬಿಟ್ಟಾಗ
ನನ್ನ ಬುದ್ಧಿ ಚಿಗುರಿದಾಗ
ನೀ ಮಾಪರ್ ಹಿಡಿದು
ಚಕಚಕನೆ ಎಲ್ಲ ಕತ್ತರಿಸಿ
ಹೂವಿನ ಬಣ್ಣ
ಚಿಗುರಿನ ತಾಜಾತನವನ್ನು
ಇನ್ನೊಂದು ಹೆಣ್ಣಿನಲ್ಲಿ
ಹುಡುಕಲಾರಂಭಿಸಿದೆ,
ನಾನೊಂಟಿ ನಿಂತು
ಕಂಗಾಲಾಗಿದ್ದೆ.
ತಾಳಿಯ ಬಿಗಿತ
ಮದುವೆಯ ಮುದ್ರೆ
ಬೆಚ್ಚನೆಯ ಮನೆಯ
ಸುಖವನ್ನೆಂದೂ
ಕೊಡದೆ ಹೋದವು.

ಬಿಚ್ಚಲೇ ಈ ತಾಳಿಯ
ಸಪ್ತಪದಿಯ ಹೆಜ್ಜೆಗಳ ಮರೆತು?
ಓಡಿಬಿಡಲೇ ನಾನು
ಬಿರುಕು ಬಿಟ್ಟ ಮನೆಗೋಡೆಗಳ ತೊರೆದು?

ಒಳಗೊಳಗೇ ನಲುಗಿ
ಕೇಳುವವರಿಲ್ಲದ
ಕಾಪಿಡುವವರಿಲ್ಲದ
ಮೈದಡವುವವರಿಲ್ಲದ
ಮನದ ತಳಮಳದಲ್ಲಿ
ನಿನ್ನ ಬಿರುಸಿನ ಮಾತು
ಕೆನ್ನೆಗೆ ಕೊಟ್ಟ ಏಟು.
ವಿಷದ ಬಾಟಲಿಗಾಗಿ
ಕಾಸು ಹುಡುಕಿದ್ದೆ!



ದೂರದಲಿ ಕೇಳಿಸಿತು
ಕೊಳಲಗಾನ
‘ಯಾವ ಸುಮಧುರ ಯಾತನೆ
ಯಾವ ದಿವ್ಯದ ಯಾಚನೆ’
ದಿನವಿಡೀ ದುಡಿದು
ನನಗೆ ವಿದ್ಯೆ ಕೊಟ್ಟ
ಅಪ್ಪನ ನೆನಪು!
ಧಾವಂತದಲ್ಲಿ ಅಮ್ಮ
ಅಡುಗೆ ಮಾಡಿ
ಪಕ್ಕದಲೆ ಕುಳಿತು
ಉಣಬಡಿಸಿದ ನೆನಪು!
ಧಿಕ್ಕರಿಸಿ ನಡೆದೆ ನಿನ್ನ...

ನಾನು ಉಣಬಡಿಸಿದ ಊಟ
ನೀನು ಮರೆತದ್ದು ಹೇಗೆ?
ನಾ ದುಡಿದು ನಿನಗೆ ಕೊಟ್ಟದ್ದು
ನೀನು ಮರೆತದ್ದು ಹೇಗೆ?
ನಿನ್ನ ಮದೋನ್ಮಾದಕ್ಕೆ
ತಾ ತೆರೆದು ಕೊಟ್ಟದ್ದು
ನೀನು ಮರೆತದ್ದು ಹೇಗೆ?
ನಿನ್ನ ಮೈಗೆ ತೈಲ ಸವರಿ
ಬಿಸಿ ಬಿಸಿ ನೀರ ಹೊಯ್ದದ್ದು
ನೀನು ಮರೆತದ್ದು ಹೇಗೆ?

ನಿನ್ನಾಟಗಳ ಬಣ್ಣಕ್ಕೆ
ನನ್ನ ಜರಿಸೀರೆಗಳ
ಕತ್ತರಿಸಿ ಪರದೆ ಮಾಡಲು ಕೊಟ್ಟದ್ದು
ನೀನು ಮರೆತದ್ದು ಹೇಗೆ?
ಈಗ ನೀನಿಲ್ಲ ನನ್ನ ಜೊತೆ
ದೂರವಾದೆ ಬರಿದೆ
ಕಾದೆ ನಾನೂ ಹಲ ಹತ್ತು ವರುಷ
ನೀ ಬರುವೆಯೆಂದು
ಕ್ಷಮೆ ಕೇಳುವಿಯೆಂದು
ಮತ್ತೆ ನಾನಿನ್ನನೊಲಿದು
ಸಾಮರಸ್ಯ ಸಾಧಿಸುವೆನೆಂದು...

ನೀನು ಬರಲೇ ಇಲ್ಲ
ಅರಿವಾಯಿತು–
‘ಗಂಡು ಹೆಣ್ಣಿನಲ್ಲಿ ಕ್ಷಮೆ ಕೇಳುವುದಿಲ್ಲ’
ಅದಕ್ಕೆಂದೇ ನಾನು
ತಾಳಲಾರದೆ ನೋವು
ಇನ್ನೊಂದು ಗಂಡಿಗೊಲಿದೆ!

ಒಂದು ಹೆಣ್ಣಿಗೆ ಒಂದು ಗಂಡು ಬೇಕು!

■ *ಎಸ್. ಮಾಲತಿ, ಸಾಗರ*

ಮಹಿಳೆ ಮತ್ತು ಹಿಂಸಾಚಾರ

ನಾವು ಬದುಕುತ್ತಿರುವ ಇಂದಿನ ಜಾಗತೀಕರಣದ ವಾಸ್ತವದಲ್ಲಿ ಮಹಿಳೆಯ ಮೇಲಿನ ಹಿಂಸೆಯ ರೂಪಗಳು ವಿವಿಧ ಬಗೆಯವಾಗಿವೆ. ಹಿಂಸೆ ಶೋಷಣೆಯ ಆತ್ಯಂತಿಕ ರೂಪವಾಗಿದೆ. ಹಿಂಸೆಗೊಳಗಾದ ಮಹಿಳೆ, ವಕೀಲರು, ಪೊಲೀಸ್-ಒಟ್ಟಾಗಿ ರಾಜನಿಕ ಹಿಂಸೆಯನ್ನು ಹೇಗೆ ವ್ಯವಸ್ಥಿತವಾಗಿ ಹೋರಾಟ ಮಾಡುತ್ತಾರೆ, ಮಾಡಬಹುದಾಗಿದೆ ಎಂಬುದನ್ನು ಚರ್ಚೆಯ ಮೂಲಕ ಅರ್ಥೈಸಿಕೊಳ್ಳಲು ಒಂದು ಪ್ರಯತ್ನವನ್ನು ಈ ಸಂವಾದದ ಮೂಲಕ ಮಾಡಲಾಗುತ್ತದೆ. ಜೊತೆಗೆ ವಿದ್ಯಾರ್ಥಿ/ವಿದ್ಯಾರ್ಥಿನಿಯರಲ್ಲಿ ಲಿಂಗಸೂಕ್ಷ್ಮತೆ ಮೂಡಿಸುವ ಜೊತೆಗೆ ನ್ಯಾಯವನ್ನು ಪಡೆಯುವ ಪರ್ಯಾಯ ವ್ಯವಸ್ಥೆಯ ಬಗ್ಗೆ ಚಿಂತನೆ ನಡೆಸುವತ್ತ ಈ ಸಂವಾದ ರೂಪಿಸಲಾಗಿದೆ. ತಾವು ಇದರಲ್ಲಿ ಭಾಗವಹಿಸುವ ಮೂಲಕ ಸಂವಾದ ಅರ್ಥಪೂರ್ಣವಾಗಿ ನಡೆಯುವಲ್ಲಿ ಸಹಕರಿಸುತ್ತೀರೆಂದು ನಾವು ಭಾವಿಸುತ್ತೇವೆ.

ಸಮಯ : 10 ಗಂಟೆ – ದಿನಾಂಕ : 12-2-2011

ಸ್ಥಳ : ಕನ್ನಡ ಭವನ, ನಾಟಕ ಅಕಾಡೆಮಿಯ ಚಾವಡಿ

ಮಾನಸ ಬಳಗ

114/5, 2ನೇ ಮುಖ್ಯರಸ್ತೆ, 9ನೇ ಕ್ರಾಸ್, ಚಾಮರಾಜಪೇಟೆ, ಬೆಂಗಳೂರು–560 018

ಮಹಿಳೆ ಮತ್ತು ಹಿಂಸೆ

(ಮಹಿಳೆಯ ಮೇಲಿನ ಹಿಂಸೆಯ ವಿವಿಧ ಮುಖಗಳನ್ನು ಕುರಿತು ಒಂದು ಸಂವಾದ)

ಮೊದಲನೆಯ ಗೋಷ್ಠಿ ● (10 ರಿಂದ 12ರ ವರೆಗೆ)

ವಿಷಯ : **ಕೌಟುಂಬಿಕ ದೌರ್ಜನ್ಯ**

ನೊಂದವರ ಅನುಭವ

ಕಥನ – 1

ಕಥನ – 2

ಕಾನೂನಿನ ಚೌಕಟ್ಟಿನಲ್ಲಿ : **ಭಾವನಾ** (HRLN) ವಕೀಲರು

ರಕ್ಷಣೆಯ ಸಾಧ್ಯತೆ ಮತ್ತು ಸಮಸ್ಯೆ : **ಗೀತಾ ಕುಲಕರ್ಣಿ**

(ಅಶೋಕ್ ನಗರ ಪೊಲೀಸ್ ಠಾಣೆ)

ಎರಡನೆಯ ಗೋಷ್ಠಿ ● (12ರಿಂದ 1–30ರ ವರೆಗೆ)

ಕಾರ್ಮಿಕ ಕ್ಷೇತ್ರ

ಅನುಭವ ಕಥನ

ಕಥನ – 1

ಕಥನ – 2

ಕಥನ – 3

ಹೋರಾಟದ ನೆಲೆಯಿಂದ : **ಕಾಮ್ರೇಡ್ ಲಕ್ಷ್ಮಿ**

ಮೂರನೆಯ ಗೋಷ್ಠಿ ● (3 ರಿಂದ 5ರ ವರೆಗೆ)

ರಾಜಕೀಯ ಕ್ಷೇತ್ರ ಮತ್ತು ಮಾಧ್ಯಮಗಳು

ಬಿ.ಟಿ. ಲಲಿತಾ ನಾಯಕ್

ಶೈಲಜಾನಾಗ್

ಪ್ರಾಯೋಜಕರು: **ಕೆನರಾ ಬ್ಯಾಂಕ್ ಸೋಷಿಯಲ್ ಬ್ಯಾಂಕಿಂಗ್ ಸೆಲ್**, ಪ್ರಧಾನ ಕಛೇರಿ, ಬೆಂಗಳೂರು

Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2010-12

ನಮ್ಮ ಮಾನಸ

- ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳು, ವರದಿಗಳು ವಿಶ್ಲೇಷಣೆಗಳು, ವಿಮರ್ಶೆಗಳು, ಅನುಭವಗಳು, ಕತೆ-ಕವನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.
- ಪತ್ರಿಕೆಯು ವಿಷಯಾಧರಿತವಾಗಿದ್ದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.
- ವಿವಾಹ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳು, ಮನೆಗೆಲಸ, ಸಂಬಳರಹಿತ ದುಡಿಮೆ, ಆರ್ಥಿಕ ನೀತಿ, ಜಾತಿ, ವರ್ಗ, ಸೌಂದರ್ಯ, ಲಿಂಗ, ಹೆಣ್ತನ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿ ಪ್ರಕಟಿಸಲಾಗಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟಗಳಿಗೆ ಸ್ಪಂದಿಸಿ ಲೇಖನಗಳನ್ನು ಪ್ರಕಟಿಸಿದೆ.
- ಆರೋಗ್ಯ, ಲೈಂಗಿಕತೆ, ಅಪಾಯಕಾರೀ ಗರ್ಭ ನಿರೋಧಕಗಳು, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಯೋಜನೆಗಳು ಮುಂತಾದ ವಿಚಾರಗಳನ್ನು ವಿಮರ್ಶೆಗೊಳಪಡಿಸಲಾಗಿದೆ.
- ಅಣ್ವಸ್ತ್ರೀಕರಣ, ಮಿಲಿಟರೀಕರಣ, ಜಾಗತೀಕರಣದಂಥ ಬೆಳವಣಿಗೆಗಳನ್ನು ಮಹಿಳಾ ದೃಷ್ಟಿಕೋನದಿಂದ ಪ್ರಶ್ನಿಸಲಾಗಿದೆ.
- ಇತರ ಪ್ರಜಾಸತ್ತಾತ್ಮಕವಾದ ಸಂಘಟನೆಗಳೊಡನೆ ಕೋಮುವಾದ, ಸಮಾನ ನಾಗರಿಕ ಸಂಹಿತೆ, ಮೀಸಲಾತಿ, ಲೈಂಗಿಕತೆ, ಪರಿಸರ, ಸ್ಥಳಾಂತರ ಮುಂತಾದ ವಿವಾದಗಳನ್ನು ಕುರಿತ ಚರ್ಚೆಗಳಲ್ಲಿ, ಆಂದೋಲನಗಳಲ್ಲಿ ಪಾಲ್ಗೊಳ್ಳಲಾಗಿದೆ.
- ಸ್ವಸಹಾಯ ಸಂಘಗಳನ್ನು ರಚಿಸುವ ಮೂಲಕ ಮಹಿಳೆಯರ ಸಬಲತೆಗೆ ಪ್ರೋತ್ಸಾಹ ನೀಡಲಾಗಿದೆ.
- ನಮ್ಮದೇ ಮಿತಿಯಲ್ಲಿ ತೊಂದರೆಗೊಳಗಾದ ಮಹಿಳೆಯರಿಗೆ ಸಲಹೆ, ನೈತಿಕ ಬೆಂಬಲಗಳಲ್ಲದೆ ಕಾನೂನಿನ ನೆರವನ್ನು ನೀಡುತ್ತಿದ್ದೇವೆ.
- ಮಹಿಳೆಯರು ತಾವಿದ್ದೆಡೆಯಲ್ಲಿ ಮಹಿಳಾ ಪತ್ರಿಕೆಗಳನ್ನು ಹೊರತರಲು ಪ್ರಯತ್ನಿಸಿದಲ್ಲಿ, ಗುಂಪುಗಳನ್ನು ರಚಿಸಬೇಕಾದಲ್ಲಿ ಸಹಕರಿಸಲು ಉದ್ದೇಶಿಸಿದ್ದೇವೆ.

Registered Magazine

Posted on 9th of every month at MBC, Bangalore GPO
Total No. of Pages: 24

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ
ಚಾಮರಾಜಪೇಟೆ
ಬೆಂಗಳೂರು - 560 018